

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 5 ಗುರುವಾರ 2024

ಸಂಪುಟ: 45 | ಸಂಚಿಕೆ: 141 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com





ಅಚ್ಚುಕಟ್ಟಾಗಿ ದಸರಾ ಆಚರಿಸೋಣ

● ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ದಸರಾ ಉಪ ಸಮಿತಿ ಸಭೆ; ಅಧಿಕಾರಿಗಳಿಂದ ಮಾಹಿತಿ ಸಂಗ್ರಹ; ಅಗತ್ಯ ಸಲಹೆ–ಸೂಚನೆ

● 40 ಸ್ತಬ್ಧಚಿತ್ರಗಳು; ಅವುಗಳಿಗೆ 3ಡಿ ಎಫೆಕ್ಟ್ ಮೆರಗು, ಮೌಢ್ಯ ವಿರೋಧಿ ಜಾಗೃತಿ, ರಾರಾಜಿಸುವ ವಿದ್ಯುತ್ ದೀಪಾಲಂಕಾರ

ಮೈಸೂರು, ಸೆ.4(ಬಿಎಲ್‌ಯು)– ಸ್ತಬ್ಧಚಿತ್ರಗಳಿಗೆ 3ಡಿ ಎಫೆಕ್ಟ್ ಮೆರಗು, ದಸರಾ ವಿಶೇಷ ಗೀತೆ, ದಸರಾ ಉದ್ಘಾಟಕರಿಗೆ ಅತ್ಯಾಕರ್ಷಕ ಸ್ಮರಣಿಕೆ, ಮೌಢ್ಯ ವಿರೋಧಿ ಜಾಗೃತಿ, ಆಧುನಿಕ ಕೃಷಿ ಪದ್ಧತಿ ಬಗ್ಗೆ ಅರಿವು, ಆಹಾರ ಮೇಳದಲ್ಲಿ ರುಚಿ–ಶುಚಿ ತಿಂಡಿ–ತಿನಿಸು, ಟಾರ್ಚ್‌ಲೈಟ್ ಪರೇಡ್‌ನಲ್ಲಿ ಗುಣಮಟ್ಟದ ಕಾರ್ಯಕ್ರಮ, ಸಮಯ ಉಳಿತಾಯಕ್ಕೆ ಆದ್ಯತೆ, ವರ್ಣರಂಜಿತ ವಿದ್ಯುತ್ ದೀಪಾಲಂಕಾರ.

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ದಸರಾ ಉಪ ಸಮಿತಿಗಳು ರೂಪಿಸಿರುವ ಕಾರ್ಯಕ್ರಮಗಳಿವು.

ಮೈಸೂರು ಅರಮನೆ ಮಂಡಳಿ ಸಭಾಂಗಣದಲ್ಲಿ ಇಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ದಸರಾ ಉಪ ಸಮಿತಿಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು.



ಮೈಸೂರು ಅರಮನೆ ಮಂಡಳಿ ಸಭಾಂಗಣದಲ್ಲಿ ಬುಧವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ದಸರಾ ಉಪ ಸಮಿತಿ ಸಭೆ ನಡೆಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಈಗಾಗಲೇ ನಡೆದಿರುವ ಉನ್ನತ ಮಟ್ಟದ ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ಅನುಷ್ಠಾನ ಮಾಡುವ ಸಂಬಂಧ ಡಾ.ಹೆಚ್.ಸಿ.ಮಹದೇವಪ್ಪ ಇಂದು ಅಧಿಕಾರಿಗಳ ಸಭೆ ನಡೆಸಿದರು.

40 ಸ್ತಬ್ಧಚಿತ್ರ: ಈ ವೇಳೆ ವಿವರ ನೀಡಿದ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿಯೂ ಆದ ಸ್ತಬ್ಧಚಿತ್ರ ಉಪ ಸಮಿತಿಯ ಉಪ ವಿಶೇಷಾಧಿಕಾರಿ ಪ್ರಭುಸ್ವಾಮಿ, ಕಲೆ, ವಾಸ್ತುಶಿಲ್ಪ, ಜಾನಪದ, ಹಬ್ಬ–ಹರಿದಿನ, ಸಮಾನತೆ, ಸಹೋದರತ್ವ ಕುರಿತಂತೆ ಸ್ತಬ್ಧಚಿತ್ರ ರೂಪಿಸಲಾಗುವುದು. ರಾಜ್ಯ ಸರ್ಕಾರದ ವಿವಿಧ ಇಲಾಖೆಯ 15 ಸ್ತಬ್ಧಚಿತ್ರ ಸೇರಿದಂತೆ ಈ ಬಾರಿ 40 ಸ್ತಬ್ಧಚಿತ್ರಗಳು ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗವಹಿಸಲಿವೆ ಎಂದು ತಿಳಿಸಿದರು.

ಸ್ತಬ್ಧಚಿತ್ರ ನಿರ್ಮಾಣ ಸಂಬಂಧ ಸರ್ಕಾರದ ಎಲ್ಲಾ ಇಲಾಖೆ ಹಾಗೂ ಪ್ರಾಧಿಕಾರಗಳಿಗೆ ಪತ್ರ ಬರೆಯಲಾಗಿದೆ. ವಿಶಿಷ್ಟ ಪರಿಕಲ್ಪನೆಯ ಸ್ತಬ್ಧಚಿತ್ರಗಳನ್ನು ನಿರ್ಮಾಣ ಮಾಡಲಾಗುವುದು ಎಂದು ಮಾಹಿತಿ ನೀಡಿದರು. ಈ ವೇಳೆ ಮಧ್ಯ ಪ್ರವೇಶಿಸಿದ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಸ್ತಬ್ಧಚಿತ್ರಗಳಲ್ಲಿ 3ಡಿ ಎಫೆಕ್ಟ್ ಇರಬೇಕು ಎಂದು ಸಲಹೆ ನೀಡಿದರು.

ಸಂದೇಶ ಸಾರಬೇಕು: ತರುವಾಯ ಮಾತನಾಡಿದ ಡಾ.ಮಹದೇವಪ್ಪ, ಪ್ರತಿಯೊಂದು ಸ್ತಬ್ಧಚಿತ್ರ ಸಂದೇಶ ಸಾರುವಂತಿರಬೇಕು. ಗೊಲ್ಲರಹಟ್ಟಿಯಲ್ಲಿ ಋತುಮತಿಯಾದ

■ 5ನೇ ಪುಟಕ್ಕೆ

ಆಹಾರ ಮೇಳದಲ್ಲಿ ಹೊಸತನ



ಪ್ರತಿಬಾರಿ ಆಹಾರ ಮೇಳದಲ್ಲಿ ನೂರಾರು ಮಳಿಗೆಗಳನ್ನು ನಿರ್ಮಿಸಲಾಗುತ್ತದೆ. ಮೂಲಸೌಕರ್ಯ ಕೊರತೆ, ಅಶುಚಿತ್ವ ಇನ್ನಿತರ ದೂರುಗಳು ಸಹಜವಾಗಿ ಕೇಳಿಬರುತ್ತವೆ. ಮಳಿಗೆಗಳು ಅಕ್ಕ–ಪಕ್ಕದಲ್ಲೇ ಸಾಲಾಗಿರುವುದರಿಂದ ಜನದಟ್ಟಣೆ ವಿಪರೀತ. ಗ್ರಾಹಕರ ಸಂಖ್ಯೆ ಹೆಚ್ಚಿದ್ದಾಗ ಆಹಾರ ಪ್ರಮಾಣ–ಗುಣಮಟ್ಟದಲ್ಲೂ ವ್ಯತ್ಯಾಸವಾಗುತ್ತದೆ ಎಂಬ ಆರೋಪವೂ ಇದೆ. ಹಾಗಾಗಿ ಈ ಬಾರಿ ಆಹಾರ ಮೇಳದಲ್ಲಿ ಹೊಸತನ ಪರಿಚಯಿಸುವ ನಿಟ್ಟಿನಲ್ಲಿ ಚರ್ಚೆ ನಡೆದಿದೆ. ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ನೂರಾರು ಮಳಿಗೆ

■ 5ನೇ ಪುಟಕ್ಕೆ



ದಸರಾ ಉದ್ಘಾಟಕರ ಮುಖ್ಯಮಂತ್ರಿಗಳು ನಿರ್ಧರಿಸ್ತಾರೆ...

ಮೈಸೂರು, ಸೆ.4(ಎಸ್‌ಬಿಡಿ)– ದಸರಾ ಉದ್ಘಾಟಕರ ಆಯ್ಕೆಯನ್ನು ಮುಖ್ಯಮಂತ್ರಿಗಳು ನಿರ್ಧರಿಸುತ್ತಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ಮೈಸೂರು ಅರಮನೆ ಮಂಡಳಿ ಸಭಾಂಗಣದಲ್ಲಿ ದಸರಾ ಉಪಸಮಿತಿಗಳ ಸಭೆ ನಡೆಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾಡಹಬ್ಬ ದಸರಾ ಸಂಬಂಧ ಈಗಾಗಲೇ ರಚನೆಯಾಗಿರುವ 19 ಉಪ ಸಮಿತಿಗಳ ಕಾರ್ಯವ್ಯಾಪ್ತಿ, ಜವಾಬ್ದಾರಿ ಬಗ್ಗೆ ಸುದೀರ್ಘ ಚರ್ಚೆ ನಡೆಸಲಾಗಿದೆ. ದಸರಾ ಉದ್ಘಾಟಕರ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ. ಯಾರು ದಸರಾ ಉದ್ಘಾಟನೆ ನೆರವೇರಿಸಬೇಕು ಎಂಬುದನ್ನು ಮುಖ್ಯಮಂತ್ರಿಗಳು ತೀರ್ಮಾನಿಸುತ್ತಾರೆ ಎಂದು ತಿಳಿಸಿದರು.

ವಿಜೃಂಭಣೆ ದಸರಾ: ಹಿಂದಿನ ದಸರಾ ಅನುಭವದ ಆಧಾರದಲ್ಲಿ ಲೋಪದೋಷಗಳನ್ನು ಸರಿಪಡಿಸಿಕೊಂಡು ಕಾರ್ಯಕ್ರಮಗಳನ್ನು ಮತ್ತಷ್ಟು ಉತ್ತಮಪಡಿಸುವ ನಿಟ್ಟಿನಲ್ಲಿ ಕ್ರಮ ವಹಿಸಲು ಸಭೆಯಲ್ಲಿ ಸೂಚಿಸಲಾಗಿದೆ. ಉತ್ತಮ ಮಳೆಯಾಗಿ, ಜಲಾಶಯಗಳೆಲ್ಲಾ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಈ ಬಾರಿ ಅದ್ಧೂರಿಯಾಗಿ ಅತ್ಯಂತ ವಿಜೃಂಭಣೆಯಿಂದ ದಸರಾ ಮಹೋತ್ಸವ ನೆರವೇರಿಸಲು ಸರ್ಕಾರ ನಿರ್ಧರಿಸಿದೆ. ಮುಖ್ಯಮಂತ್ರಿಗಳು ಈಗಾಗಲೇ ದಸರಾಗೆ 40 ಕೋಟಿ ರೂ. ಅನುದಾನವನ್ನೂ ಘೋಷಿಸಿದ್ದಾರೆ. ಹಾಗಾಗಿ ಜನರ ಆಶಯ ಹಾಗೂ

■ 5ನೇ ಪುಟಕ್ಕೆ

ಸಂಜೆ 4ರಿಂದಲೇ ಸಾಂಸ್ಕೃತಿಕ ಕಾರ್ಯಕ್ರಮ



ದೇಶ–ವಿದೇಶಗಳ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಲಾಗುವುದು. ಈವರೆಗೆ ಸಂಜೆ 5.30 ಅಥವಾ 6 ಗಂಟೆಯಿಂದ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾಗುತ್ತಿದ್ದವು. ಆದರೆ ಈ ಬಾರಿ ಅರಮನೆ ಮುಂಭಾಗದ ಪ್ರಧಾನ ವೇದಿಕೆ ಸೇರಿದಂತೆ ಎಲ್ಲಾ ಸಾಂಸ್ಕೃತಿಕ ವೇದಿಕೆಗಳಲ್ಲೂ ಸಂಜೆ 4ರಿಂದ ರಾತ್ರಿ 9ರವರೆಗೆ ಕಾರ್ಯಕ್ರಮಗಳು ನಡೆಯಲಿವೆ. ಸ್ವಲ್ಪ ವ್ಯತ್ಯಾಸವಾದರೂ ರಾತ್ರಿ 10 ಗಂಟೆಯೊಳಗೆ ಕಾರ್ಯಕ್ರಮ ಮುಕ್ತಾಯವಾಗಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಕಲಾವಿದರ ಪಟ್ಟಿ ಸಿದ್ಧವಾಗುತ್ತಿದೆ. ಆಕರ್ಷಕ ಹಾಗೂ ಗುಣಮಟ್ಟದ ಕಾರ್ಯಕ್ರಮ ನೀಡುವ ಸ್ಥಳೀಯ ಕಲಾವಿದರಿಗೆ ಅವಕಾಶ ನೀಡಲಾಗುವುದು ಎಂದರು.

ಸಿಎಂ ಕುರ್ಚಿ ಖಾಲಿ ಆಗೋಲ್ಲಾ...

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ನಿವೇಶನ ಹಗರಣ ಆರೋಪ ಪ್ರಕರಣದ ಹಿನ್ನೆಲೆಯಲ್ಲಿ ಸಿಎಂ ಗಾದಿಗೆ ಕಾಂಗ್ರೆಸ್ ನಾಯಕರಲ್ಲಿ ಪೈಪೋಟಿ ನಡೆದಿದೆ ಎಂಬ ಚರ್ಚೆ ನಡೆದಿದೆ. ಇದೇ ಧಾಟಿಯಲ್ಲಿ ಕೆಲ ನಾಯಕರೂ ಹೇಳಿಕೆ ನೀಡಿದ್ದಾರೆ. ಈ ಬೆಳವಣಿಗೆ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಿಎಂ ಕುರ್ಚಿ ಖಾಲಿ ಇದೆಯಾ? ಎಂದು ಪ್ರಶ್ನಿಸಿದರಲ್ಲದೆ, ಸಿಎಂ ಕುರ್ಚಿ ಖಾಲಿ ಇಲ್ಲ, ಖಾಲಿ ಆಗುವುದೂ ಇಲ್ಲ ಎಂದು ನಗುತ್ತಾ ಮುಂದೆ ಸಾಗಿದರು.



ರೇಣುಕಾಸ್ವಾಮಿ ಹತ್ಯೆ ಪ್ರಕರಣ

ನಟ ದರ್ಶನ್, ಪವಿತ್ರ ಗೌಡ ಸೇರಿ 17 ಮಂದಿ ವಿರುದ್ಧ 3991 ಪುಟಗಳ ಆರೋಪ ಪಟ್ಟಿ ಸಲ್ಲಿಕೆ

ರೇಣುಕಾಸ್ವಾಮಿ ಅಪಹರಣದಿಂದ ಹಿಡಿದು ಆರೋಪಿಗಳ ಶರಣಾಗತಿವರೆಗಿನ ಪ್ರಕರಣದ ಮಾಹಿತಿ, ಎಲ್ಲಾ ರೀತಿಯ ಸಾಕ್ಷ್ಯಾಧಾರ ಒಳಗೊಂಡ ಚಾರ್ಜ್‌ಶೀಟ್ ಮಂಡನೆ



ನಟ ದರ್ಶನ್

ಬೆಂಗಳೂರು ಸೆ.4(ಕೆಎಂಶಿ)–ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು ನಟ ದರ್ಶನ್, ಪವಿತ್ರಗೌಡ ಸೇರಿದಂತೆ 17 ಮಂದಿ ವಿರುದ್ಧ ನ್ಯಾಯಾಲಯಕ್ಕೆ ಬುಧವಾರ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಇದರಲ್ಲಿ ದರ್ಶನ್ ಅವರನ್ನು 2ನೇ ಆರೋಪಿ ಮಾಡಿದ್ದರೆ, ಪವಿತ್ರಗೌಡ ಮೊದಲ ಆರೋಪಿಯಾಗಿದ್ದು, ಉಳಿದ 15 ಆರೋಪಿಗಳ ಪಾತ್ರವನ್ನು ಉಲ್ಲೇಖಿಸಲಾಗಿದೆ. ಸಾಕ್ಷ್ಯಾಧಾರ, ಸಾಂದರ್ಭಿಕ, ತಾಂತ್ರಿಕ, ವೈಜ್ಞಾನಿಕ ಹಾಗೂ ಇತರೆ ಸಾಕ್ಷ್ಯಾಧಾರ ಸೇರಿ 3991 ಪುಟಗಳ ಪ್ರಾಥಮಿಕ ದೋಷಾರೋಪ ಪಟ್ಟಿಯನ್ನು 24ನೇ ಎಸಿಎಂಎಂ ನ್ಯಾಯಾಲಯಕ್ಕೆ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಸಲ್ಲಿಸಿದ್ದಾರೆ.

ರೇಣುಕಾಸ್ವಾಮಿ ಕರೆತರುವುದರಿಂದ ಶರಣಾಗತಿ ಮಾಡಿಸುವ ತನಕ ಪ್ರತಿ ಹಂತದಲ್ಲಿ ದರ್ಶನ್ ಪಾತ್ರವಿದೆ ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ. ಈ ಕೊಲೆ ಪ್ರಕರಣವನ್ನು ಬಿಎನ್‌ಎಸ್‌ಎಸ್ ಕಾಯ್ದೆ ಪ್ರಕಾರ ತನಿಖೆ, ಮಹಜರು ಪ್ರಕ್ರಿಯೆ ನಡೆಸಲಾಗಿದೆ. ಪವನ್ ಮೂಲಕ ಚಿತ್ರದುರ್ಗದಿಂದ ರೇಣುಕಾಸ್ವಾಮಿ ಅವರನ್ನು ದರ್ಶನ್ ಕರೆಸಿರುವುದು. ರಾಘವೇಂದ್ರಗೆ ಹೇಳಿ ರೇಣುಕಾಸ್ವಾಮಿಯನ್ನು ಪವನ್ ಅಪಹರಣ ಮಾಡಿಸಿದ್ದಾರೆ. ಅಪಹರಣ ನಂತರ ಆತನ ಮೇಲೆ ಹಲ್ಲೆ ಮಾಡುವಾಗ ದರ್ಶನ್ ಬಟ್ಟೆಯ ಮೇಲೆ ರೇಣುಕಾಸ್ವಾಮಿಯ ರಕ್ತದ ಕಲೆಗಳು ಪತ್ತೆಯಾಗಿದೆ. ರೇಣುಕಾಸ್ವಾಮಿ ಮೇಲೆ ಹಲ್ಲೆ ಮಾಡುವ ಮುನ್ನ ದರ್ಶನ್ ಪಬ್ ಒಂದರಲ್ಲಿ ಕುಳಿತಿದ್ದರು. ನಂತರ ಪವಿತ್ರಾ ಮನೆಗೆ ಹೋಗಿ ಆಕೆಯನ್ನು ಕರೆದುಕೊಂಡು ಪಟ್ಟಣಗೆರೆ ಶೆಡ್‌ಗೆ ತೆರಳಿದ್ದಾರೆ.

■ 5ನೇ ಪುಟಕ್ಕೆ



ಪವಿತ್ರಗೌಡ

56 ಮಂದಿ ಪೊಲೀಸ್ ಅಧಿಕಾರಿಗಳಿಂದ ತನಿಖೆ, ಸಾಕ್ಷ್ಯ ಕ್ರೋಢೀಕರಣ

ಬೆಂಗಳೂರು ಸೆ.4(ಕೆಎಂಶಿ)– ನಟ ದರ್ಶನ್ ಸೇರಿದಂತೆ ರೇಣುಕಾಸ್ವಾಮಿ ಹತ್ಯೆಯ ಪ್ರಕರಣದ 17 ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೃಹತ್ ಮಟ್ಟದ ತನಿಖೆಯಾಗಿದ್ದು, 3991 ಪುಟಗಳ ಆರೋಪ ಪಟ್ಟಿಯನ್ನು 24ನೇ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ ಎಂದರು. ಪ್ರಕರಣಕ್ಕೆ ಸಂಬಂಧಿಸಿದಂತೆ 17 ಮಂದಿಯನ್ನು ಬಂಧಿಸಿದ್ದು, ಈಗ ವಿಚಾರಣಾಧೀನ ಕೈದಿಗಳಾಗಿದ್ದಾರೆ. ಮೂವರು ಪ್ರತ್ಯೇಕ ಸಾಕ್ಷಿಗಳಿದ್ದಾರೆ. 27 ಸಾಕ್ಷಿಗಳು ಈಗಾಗಲೇ ನ್ಯಾಯಾಲಯದ ಮುಂದೆ ಹೇಳಿಕೆ ನೀಡಿದ್ದಾರೆ. ಇತರರು ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾರೆ. 56 ಮಂದಿ ಪೊಲೀಸ್ ಅಧಿಕಾರಿಗಳು ಪ್ರಕರಣವನ್ನು ಭೇದಿಸಿ ತನಿಖೆ ನಡೆಸಿ, ಸಾಕ್ಷ್ಯಗಳನ್ನು ಕ್ರೋಢೀಕರಿಸಿ ನ್ಯಾಯಾಲಯಕ್ಕೆ ಸಮಗ್ರ ವರದಿ ನೀಡಿದ್ದೇವೆ. ಸಂಗ್ರಹಿಸಿರುವ ಸಾಕ್ಷ್ಯವನ್ನು ಅಪರಾಧ ಪ್ರಕ್ರಿಯಾ ಸಂಹಿತೆ(ಸಿಆರ್‌ಪಿಸಿ) 173 ಅಡಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಹೆಚ್ಚಿನ ತನಿಖೆಗಾಗಿ ತನಿಖಾ ಸಂಸ್ಥೆಗೆ ಅನಿಯಂತ್ರಿತ ಹಕ್ಕನ್ನು ನೀಡುತ್ತದೆ.



ಆಯುಕ್ತ ಬಿ.ದಯಾನಂದ್

ಚಾಮುಂಡಿಬೆಟ್ಟದಲ್ಲಿ ಇಂದಿನಿಂದ ರಾತ್ರಿ ದಾಸೋಹ

● ಭಕ್ತರ ಸಂಖ್ಯೆಗೆ ಅನುಗುಣವಾಗಿ ಅನ್ನ ಸಂತರ್ಪಣೆ ವ್ಯವಸ್ಥೆ

● ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆ ನಿರ್ಧಾರ



ದಾಸೋಹ ಭವನ

■ ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಸೆ.4– ದಕ್ಷಿಣ ಭಾರತದ ಪ್ರಮುಖ ಧಾರ್ಮಿಕ ಹಾಗೂ ಯಾತ್ರಾಸ್ಥಳವೂ ಆಗಿರುವ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಬರುವ ಭಕ್ತರು ಹಾಗೂ ಪ್ರವಾಸಿಗರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಭಕ್ತರ ಹಿತದೃಷ್ಟಿಯಿಂದ ನಾಳೆ(ಸೆ.5)ಯಿಂದಲೇ ದಾಸೋಹ ಭವನದಲ್ಲಿ ರಾತ್ರಿ ವೇಳೆಯೂ ಅನ್ನದಾಸೋಹ ಆರಂಭಿಸಲು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ನಿರ್ಧರಿಸಿದೆ.

ಚಾಮರಾಜನಗರ ಜಿಲ್ಲೆಯ ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಬೆಳಗಿನಿಂದ ರಾತ್ರಿವರೆಗೂ ಭಕ್ತರಿಗೆ ಅನ್ನ ದಾಸೋಹವಿರುವ ಹಿನ್ನೆಲೆಯಲ್ಲಿ ಇದೀಗ ಚಾಮುಂಡಿಬೆಟ್ಟದಲ್ಲೂ ಭಕ್ತರು ಮತ್ತು ಪ್ರವಾಸಿಗರಿಗೆ ಈ ಉಪಯೋಗ ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಮಂಗಳವಾರ ಚಾಮುಂಡಿಬೆಟ್ಟದಲ್ಲಿ ನಡೆದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆಯಲ್ಲಿ ಭಕ್ತರಿಗೆ ಗುಣಮಟ್ಟದ ಸೇವೆ ಒದಗಿಸಲು ನಿರ್ಣಯ ಕೈಗೊಳ್ಳಲಾಗಿತ್ತು.

ದಾಸೋಹ ಭವನ: 1998–99ರಲ್ಲಿ ಬೆಟ್ಟದಲ್ಲಿ ದಾಸೋಹ ಭವನ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು. 2003–04ರಲ್ಲಿ ಉದ್ಘಾಟನೆಗೊಂಡು ಮಧ್ಯಾಹ್ನದ ವೇಳೆ ದಾಸೋಹ ಆರಂಭಿಸಲಾಗಿತ್ತು. ಕೆಲ ವರ್ಷಗಳ ಹಿಂದೆ ಬೆಳಗ್ಗೆ ಉಪಾಹಾರದ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿತ್ತು. ಇದೀಗ ನಾಳೆಯಿಂದಲೇ ರಾತ್ರಿ ದಾಸೋಹದ ವ್ಯವಸ್ಥೆ ಆರಂಭಿಸುತ್ತಿರುವುದು ಭಕ್ತರಲ್ಲಿ ಸಂಭ್ರಮ ಮನೆ ಮಾಡಿದೆ. ಪ್ರಸ್ತುತ ಪ್ರತಿದಿನ ಬೆಳಗ್ಗೆ 7ರಿಂದ 10.30ರವರೆಗೆ ಉಪಹಾರ, ಮಧ್ಯಾಹ್ನ 1 ಗಂಟೆಯಿಂದ

■ 5ನೇ ಪುಟಕ್ಕೆ

> ❝ ನಾಡದೇವಿ ಚಾಮುಂಡೇಶ್ವರಿ ದರ್ಶನ ಪಡೆಯಲು ವಿವಿಧೆಡೆಯಿಂದ ಬೆಟ್ಟಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದೆ. ನಾಡಿನ ಪ್ರಸಿದ್ಧ ಯಾತ್ರಾ ಸ್ಥಳವೂ ಆಗಿರುವ ಚಾಮುಂಡಿಬೆಟ್ಟದಲ್ಲಿ ಭಕ್ತರಿಗೆ ಮೂಲ ಸೌಲಭ್ಯ ಒದಗಿಸಲು ಪ್ರಾಧಿಕಾರ ಚಿಂತಿಸಿದೆ. ಈ ಹಿನ್ನೆಲೆಯಲ್ಲಿ ಬಹು ಭಕ್ತರ ಬೇಡಿಕೆಗೆ ಅನುಗುಣವಾಗಿ ರಾತ್ರಿ ದಾಸೋಹ ಆರಂಭಿಸಲಾಗುತ್ತಿದೆ.
>
> –ಎಂ.ಜೆ.ರೂಪಾ, ಕಾರ್ಯದರ್ಶಿ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಅರಮನೆ ಆವರಣದಲ್ಲಿ ಆಸೀನರಾದವರಿಗೆ ಜಂಬೂಸವಾರಿಯ ವಿಶೇಷ ದರ್ಶನ ವ್ಯವಸ್ಥೆ ■ ಪುಟ–11

HSRP ನಂಬರ್ ಪ್ಲೇಟ್ ಹಾಕಿಸಲು ಸೆ.15 ಕೊನೇ ದಿನ



ಬೆಂಗಳೂರು, ಸೆ.4– ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಲು ಈಗಾಗಲೇ ರಾಜ್ಯ ಸರ್ಕಾರ ಎರಡ್ಮೂರು ಬಾರಿ ಗಡುವು ವಿಸ್ತರಣೆ ಮಾಡಿದೆ. ಆದರೆ, ಇನ್ನೂ ಕೂಡ ವಾಹನ ಮಾಲೀಕರು ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್‌ಗಳನ್ನು ಅಳವಡಿಸಿಕೊಳ್ಳಲು ಮುಂದಾಗಿಲ್ಲ. ಹೆಚ್‌ಎಸ್‌ಆರ್‌ಪಿ ನಂಬರ್ ಹಾಕಿಸಿಕೊಳ್ಳಬೇಕು ಈ ತಿಂಗಳ ಸೆಪ್ಟೆಂಬರ್ 15 ಕೊನೆ ದಿನವಾಗಿದೆ. ಇನ್ನೇನು 11 ದಿನಗಳು ಮಾತ್ರ ಬಾಕಿ ಉಳಿದಿವೆ. ಒಂದು ವೇಳೆ ಹಾಕಿಸಿಕೊಳ್ಳಲಿಲ್ಲ ಅಂದರೆ ಮೊದಲ ಬಾರಿಗೆ 500 ರೂಪಾಯಿ ಎರಡನೇ ಬಾರಿಗೆ ಒಂದು ಸಾವಿರ ರೂಪಾಯಿ ದಂಡ ಹಾಕಲಾಗುತ್ತದೆ. ಮೂರನೇ ಬಾರಿ ವಾಹನವನ್ನೇ ಸೀಜ್ ಮಾಡಲಾಗುತ್ತದೆ. ಕರ್ನಾಟಕದ ಎರಡು ಕೋಟಿ ವಾಹನಗಳ ಪೈಕಿ ಇಂದಿನವರೆಗೆ ಕೇವಲ 51.5 ಲಕ್ಷ ವಾಹನ ಮಾಲೀಕರು ಮಾತ್ರ ಹೆಚ್‌ಎಸ್‌ಆರ್‌ಪಿ ಅಳವಡಿಸಿಕೊಂಡಿದ್ದಾರೆ. ರಾಜ್ಯ ಸಾರಿಗೆ ಇಲಾಖೆ ಏಪ್ರಿಲ್ 2019ಕ್ಕಿಂತ ಮೊದಲು ನೋಂದಣಿಯಾದ ವಾಹನಗಳು ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಮಾಡಿಕೊಳ್ಳಬೇಕು ಎಂದು ಆದೇಶ ಹೊರಡಿಸಿದೆ. ಈ ತಿಂಗಳ ಸೆ.15ನೇ ತಾರೀಖಿನೊಳಗೆ ಹೆಚ್‌ಎಸ್‌ಆರ್ಪಿ

■ 9ನೇ ಪುಟಕ್ಕೆ

ಮೈಸೂರು ಮಿತ್ರ ಗುರುವಾರ 5 ಸೆಪ್ಟೆಂಬರ್ 2024

ಖ್ಯಾತ ರಸಾಯನಶಾಸ್ತ್ರ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಜಪಾನ್ ಪ್ರವಾಸ; ವಿವಿಧ ವಿವಿಗಳಲ್ಲಿ ಮುಖ್ಯಭಾಷಣ


ಪ್ರೊ.ಕೆ.ಎಸ್.ರಂಗಪ್ಪ

ಮೈಸೂರು,ಸೆ.4(ಪಿಎಂ)– ವಿಶ್ರಾಂತ ಕುಲಪತಿ ಹಾಗೂ ಖ್ಯಾತ ರಸಾಯನ ಶಾಸ್ತ್ರ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಅವರನ್ನು ಮುಖ್ಯ ಭಾಷಣಕಾರರಾಗಿ ಪಾಲ್ಗೊಳ್ಳಲು ಜಪಾನ್ ದೇಶದ ವಿವಿಧ ವಿಶ್ವವಿದ್ಯಾನಿಲಯಗಳು ಆಹ್ವಾನಿಸಿವೆ.

ಸೆ.7ರಂದು ಜಪಾನ್‌ನ ಹೊಕ್ಕೈಡೋ ವಿಶ್ವವಿದ್ಯಾನಿಲಯದ ಅಡ್ವಾನ್ಸ್ಡ್ ಕೆಮಿಕಲ್ ಬಯಾಲಜಿಯ ಲ್ಯಾಬೋರೇಟರಿಯಲ್ಲಿ 'ಕ್ಯಾನ್ಸರ್ ಚಿಕಿತ್ಸೆಯಲ್ಲಿ ಸಣ್ಣ ಅಣುಗಳು; ಡ್ರಗ್ ಸಂಶೋಧನೆಯಲ್ಲಿ ಪ್ರಗತಿ' ಕುರಿತು ಪ್ರಧಾನ ಭಾಷಣ ಮಾಡಲು ಅವರನ್ನು ಆಹ್ವಾನಿಸಲಾಗಿದೆ.

ಅಂತೆಯೇ ಸೆ.9ರಂದು ನಗೋಯಾದ ಮೆಜೋ ವಿಶ್ವವಿದ್ಯಾನಿಲಯದ ಫಾರ್ಮಸಿ ವಿಭಾಗದ ಪ್ಯಾಥೋಬಯೋ ಕೆಮಿಸ್ಟ್ರಿ ವಿಭಾಗದಲ್ಲಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಅಲ್ಲದೆ, ಅವರು ವಿಶ್ವವಿದ್ಯಾನಿಲಯದ ವಿವಿಧ ಡೀನ್‌ಗಳು, ಪ್ರಾಧ್ಯಾಪಕರು ಹಾಗೂ ನಿರ್ದೇಶಕರೊಂದಿಗೆ ಸಂವಾದ ನಡೆಸಲಿದ್ದಾರೆ.

ಸಮಾಲೋಚನಾ ಸಮಯದಲ್ಲಿ ಹೊಕ್ಕೈಡೋ ವಿಶ್ವವಿದ್ಯಾನಿಲಯದ ರಾಯಭಾರಿಯಾಗಿ ಪ್ರೊ.ಕೆ.ಎಸ್.ರಂಗಪ್ಪ ಅವರು ಸದರಿ ವಿಶ್ವವಿದ್ಯಾನಿಲಯ, ಭಾರತದ ವಿಶ್ವವಿದ್ಯಾನಿಲಯ, ವಿಶೇಷವಾಗಿ ಕರ್ನಾಟಕದ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯಗಳ ನಡುವಿನ ಸಂಶೋಧನೆಗೆ ಸಂಬಂಧಿಸಿದ ವಿವಿಧ ವೈಜ್ಞಾನಿಕ ಚರ್ಚೆಗಳನ್ನು ನಡೆಸಲಿದ್ದಾರೆ.

ಪ್ರೊ.ಕೆ.ಎಸ್.ರಂಗಪ್ಪ ಅವರು ಇಟಲಿಯ ದಿ ವರ್ಲ್ಡ್ ಅಕಾಡೆಮಿ ಆಫ್ ಸೈನ್ಸಸ್‌ನ ಗೌರವ ಸಹೋದ್ಯೋಗಿಯಾಗಿದ್ದಾರೆ. ತಮ್ಮ ವಿದೇಶ ಪ್ರವಾಸದಲ್ಲಿ ಪ್ರೊ.ರಂಗಪ್ಪ ಅವರು ಅಲ್‌ಜೈಮರ್, ಕ್ಯಾನ್ಸರ್, ಹೃದಯ ರಕ್ತನಾಳದ ಕಾಯಿಲೆಗಳು ಸೇರಿದಂತೆ ಮಧುಮೇಹದಂತಹ ವಿವಿಧ ಕಾಯಿಲೆಗಳ ಕುರಿತು ಔಷಧ ಅಭಿವೃದ್ಧಿ ಬಗ್ಗೆ ಚರ್ಚೆಯಲ್ಲಿ ತೊಡಗಿಸಿಕೊಳ್ಳಲಿದ್ದಾರೆ ಎಂದು ಅವರ ಕಚೇರಿ ಪ್ರಕಟಣೆ ತಿಳಿಸಿದೆ.

ಕೆಪಿಎಸ್‌ಸಿ ಮರುಪರೀಕ್ಷೆ ಸರ್ಕಾರದ ಬೇಜವಾಬ್ದಾರಿ ಪರಮಾವಧಿ


ಹೇಮಾ

ಮೈಸೂರು,ಸೆ.4–ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಶನರಿ ಆಫೀಸರ್ ಹುದ್ದೆಗಳ ನೇಮಕಾತಿಗೆ ನಡೆದ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಆದ ಲೋಪದಿಂದ ಮುಂದಿನ 2 ತಿಂಗಳಲ್ಲಿ ಮತ್ತೆ ಪರೀಕ್ಷೆ ನಡೆಸಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿರುವುದು ಸರಕಾರದ ಬೇಜವಾಬ್ದಾರಿಯ ಪರಮಾವಧಿ ಎಂದು ಬಿಜೆಪಿ ನಗರ ಉಪಾಧ್ಯಕ್ಷೆ ಹೇಮಾ ನಂದೀಶ್ ಟೀಕಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದಲ್ಲಿ ಲಕ್ಷಾಂತರ ಅಭ್ಯರ್ಥಿಗಳು ಪರೀಕ್ಷೆಗಾಗಿ ದೂರದ ಊರುಗಳಿಗೆ ಹೋಗಿ, ವಸತಿ ಗೃಹದಲ್ಲಿ ಉಳಿದು, ಸಾವಿರಾರು ರೂ. ಖರ್ಚು ಮಾಡಿ ಪರೀಕ್ಷೆ ಎದುರಿಸಿದ್ದಾರೆ. ಈಗ ಮತ್ತೊಮ್ಮೆ ಪರೀಕ್ಷೆ ಎದುರಿಸಬೇಕು ಎಂದರೆ ಸಾವಿರಾರು ಅಭ್ಯರ್ಥಿಗಳು ಮತ್ತೊಮ್ಮೆ ಪರೀಕ್ಷೆ ಕಷ್ಟಗಳನ್ನು ಎದುರಿಸಬೇಕಾಗಿದೆ ಎಂದರು.

ಸರಕಾರ ಅಕ್ರಮ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿದ್ದು ಅದರ ಜವಾಬ್ದಾರಿ. ಅದರ ಜತೆಗೆ ಮತ್ತೊಮ್ಮೆ ಪರೀಕ್ಷೆ ನಡೆಸಲೇಬೇಕಾದರೆ ಆ ಎಲ್ಲ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಮರುಪಾವತಿ ಮಾಡಬೇಕು. ಪರೀಕ್ಷೆಗೆ ಹಾಜರಾಗುವ ಎಲ್ಲ ವಿದ್ಯಾರ್ಥಿಗಳ ಖರ್ಚು ವೆಚ್ಚಗಳನ್ನು ನೀಡಬೇಕು. ಇಲ್ಲದಿದ್ದರೆ ಬಡ ಪ್ರತಿಭಾವಂತ ಅಭ್ಯರ್ಥಿಗಳು ಮತ್ತೊಮ್ಮೆ ಪರೀಕ್ಷೆಯಿಂದ ದೂರ ಉಳಿಯುವ ಸಾಧ್ಯತೆಯಿದೆ. ಸರ್ಕಾರ ಮತ್ತು ಅಧಿಕಾರಿಗಳು ಮಾಡಿದ ತಪ್ಪಿನಿಂದಾಗಿ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳ ಭವಿಷ್ಯ ಅತಂತ್ರವಾಗಲಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ ಹಾದಿ ಹಿಡಿಯಬೇಕಾಗುತ್ತದೆ ಎಂದು ಎಚ್ಚರಿಸಿದರು.

ಟೆರಿಷಿಯನ್ ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನೆ



ಕೊಲ್ಕತ್ತಾದಲ್ಲಿ ಡಾ.ಮೌಮಿತ ದೇಬ್‌ನಾಥ್ ಅವರ ಮೇಲಿನ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣ ವಿರೋಧಿಸಿ ಮೈಸೂರಿನ ಟೆರಿಷಿಯನ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಜಾಥಾ ನಡೆಸಿದರು. ಕಾಲೇಜು ಪ್ರಾಂಶುಪಾಲರಾದ ರೆ. ಸಿಸ್ಟರ್ ಜೆಸ್ಸಿ ಅನ್ಸು, ಉಪನ್ಯಾಸಕ ವರ್ಗದವರು ಭಾಗವಹಿಸಿದ್ದರು.


ಶ್ರೀ ರಕ್ಷೆ ಬಂಧನ ಮೈಸೂರು ಲಿಂಗ ದೇವರಕೊಪ್ಪಲಿನಲ್ಲಿರುವ ರಾಜಯೋಗ ರಿಟ್ರೀಟ್ ಸೆಂಟರ್‌ನಲ್ಲಿ ರಾಜಯೋಗ ಶಿಕ್ಷಕಿ ಸಹೋದರಿಯರಿಗೆ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ ಶ್ರೀರಕ್ಷೆಯನ್ನು ಬಂಧಿಸಿದರು.

ಗಣೇಶ ಚತುರ್ಥಿ: ಸೆ.7ರಂದು ಮಾಂಸ ಮಾರಾಟ ನಿಷೇಧ

ಮೈಸೂರು,ಸೆ.4– ಸೆ.7 ರಂದು ಗಣೇಶ ಚತುರ್ಥಿ ಪ್ರಯುಕ್ತ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುರಿ, ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿದ್ದು, ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ವಿವಿಧ ಮಾಂಸದ ಅಂಗಡಿಗಳನ್ನು ಮುಚ್ಚಲು ಆದೇಶ ನೀಡಲಾಗಿರುತ್ತದೆ ಎಂದು ಮೈಸೂರು ಮಹಾನಗರ ಪಾಲಿಕೆ ಆರೋಗ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ಪಾಲಚಂಡ ಪಾರ್ವತಿ ಕುಟ್ಟಪ್ಪ (ಪಾಚಿ)



ಮೈಸೂರು, ಸೆ.4–ಮೈಸೂರಿನ ಗಾಯಿತ್ರಿಪುರಂ ನಿವಾಸಿ, ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಸಂಸ್ಥಾಪಕ ಅಧ್ಯಕ್ಷ ದಿವಂಗತ ಪಾಲಚಂಡ ಎ.ಕುಟ್ಟಪ್ಪ ಅವರ ಪತ್ನಿ, ಪಾಲಚಂಡ ಪಾರ್ವತಿ ಕುಟ್ಟಪ್ಪ (ಪಾಚಿ, ತಾಮನೆ ಬಲ್ಲಣಮಡ) ಅವರು ಬುಧವಾರ ರಾತ್ರಿ ನಿಧನರಾದರು. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಪುತ್ರರಾದ ದಿನೇಶ್ ಧರ್ಮಪ್ಪ, ಉಮೇಶ್ ಮಾದಪ್ಪ, ಸತೀಶ್ ಸುಬ್ಬಯ್ಯ, ಸದಾಪೂವಣ್ಣ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಸೆ.5) ಮಧ್ಯಾಹ್ನ ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್‌ಹಾಜ್ ಮೊಹಮ್ಮದ್ ಫಾರೂಕ್



ಮೈಸೂರು,ಸೆ.4–ಮೈಸೂರಿನ ಲಷ್ಕರ್ ಮೊಹಲ್ಲಾದ ಕಾನ್ವೆಂಟ್ ರಸ್ತೆ ನಿವಾಸಿ ಅಲ್‌ಹಾಜ್ ಮೊಹಮ್ಮದ್ ಫಾರೂಕ್ (72) ಬುಧವಾರ ಉತ್ತರ ಪ್ರದೇಶದ ಆಲಿಘರ್‌ನಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಆಲಿಘರ್‌ನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬ್ರಿಗ್ ಅಜ್ಜಿನಿಕಂಡ ಸಿ.ಪೆಮ್ಮಯ್ಯ



ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಸ್ವಾಗತ್ ಅಪಾರ್ಟ್‌ಮೆಂಟ್ ನಿವಾಸಿ ನಿವೃತ್ತ ಬ್ರಿಗೇಡಿಯರ್ ಅಜ್ಜಿನಿಕಂಡ ಸಿ.ಪೆಮ್ಮಯ್ಯ ಮಂಗಳವಾರ ನಿಧನರಾದರು. ಮೂಲತಃ ಕೊಡಗಿನ ಪಾಲಿಬೆಟ್ಟದ ಚೆನ್ನಂಗಿಯವರಾದ ಇವರು ಪತ್ನಿ ಸುಲೋಚನಾ (ಚೆಂಡಂಡ), ಪುತ್ರರಾದ ಮನೀಶ್ ಮತ್ತು ಅಮ್ಮಟಂಡ ಬಿಂದು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗ್ರಾಮೀಣ ಮಟ್ಟದಲ್ಲಿ ಬಿಜೆಪಿ ಬಲಗೊಳಿಸೋಣ

ಬಿಜೆಪಿ ಸದಸ್ಯತ್ವ ಕಾರ್ಯಾಗಾರದಲ್ಲಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ವಿಶ್ವಾಸ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಜಿಲ್ಲಾ ಬಿಜೆಪಿ ಗ್ರಾಮಾಂತರ ಎಸ್.ಸಿ ಮೋರ್ಚಾ ವತಿಯಿಂದ ಆಯೋಜಿಸಿದ್ದ 'ಬಿಜೆಪಿ ಸದಸ್ಯತ್ವ' ಕಾರ್ಯಾಗಾರದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿದರು.

ಮೈಸೂರು, ಸೆ.4(ಎಂಟಿವೈ)– ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಾಯಕತ್ವದಲ್ಲಿ ಗ್ರಾಮೀಣ ಮಟ್ಟದಲ್ಲಿ ಬಿಜೆಪಿಯನ್ನು ಸಂಘಟಿಸುವ ನಿಟ್ಟಿನಲ್ಲಿ ಸದಸ್ಯತ್ವ ಅಭಿಯಾನವನ್ನು ಪರಿಣಾಮಕಾರಿಯಾಗಿ ನಡೆಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ತಿಳಿಸಿದ್ದಾರೆ.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಬುಧವಾರ ಜಿಲ್ಲಾ ಬಿಜೆಪಿ ಗ್ರಾಮಾಂತರ ಎಸ್.ಸಿ ಮೋರ್ಚಾ ವತಿಯಿಂದ ಆಯೋಜಿಸಿದ್ದ 'ಬಿಜೆಪಿ ಸದಸ್ಯತ್ವ' ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದ್ದು, ದೇಶದಾದ್ಯಂತ ಬಿಜೆಪಿ ಸೇರುವವರ ಸಂಖ್ಯೆ ಹೆಚ್ಚಾಗಿದೆ. ಕೇಂದ್ರ ಸರ್ಕಾರ ರೈತಪರ, ಮಹಿಳೆಯರ ಪರ ಯೋಜನೆಗಳು, ಬಡ ಹಾಗೂ ಮಧ್ಯಮ ವರ್ಗಗಳ ಹಿತಕಾಯುವ ಯೋಜನೆಗೆ ದೇಶದ ಜನ ಪ್ರಶಂಸೆ ವ್ಯಕ್ತಪಡಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲೆ ಕೇಂದ್ರ ಸರ್ಕಾರದ ಯೋಜನೆಗಳನ್ನು ಗ್ರಾಮೀಣ ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಪಕ್ಷದ ಕಾರ್ಯಕರ್ತರು ಮುಂದಾಗಬೇಕು ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಪಕ್ಷವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಶ್ರಮಿಸುತ್ತಿದ್ದಾರೆ. ಅವರ ನಾಯಕತ್ವವನ್ನು ಮೆಚ್ಚಿ ರಾಜ್ಯದ ಮೂಲೆ ಮೂಲೆಯಲ್ಲೂ ಯುವಕರು ಸ್ವಯಂ ಪ್ರೇರಣೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷ ಸೇರುತ್ತಿದ್ದಾರೆ. ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ನಿರೀಕ್ಷೆಗೂ ಮೀರಿದ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ, ಹಗರಣಗಳ ವಿರುದ್ಧ ಬೆಂಗಳೂರಿನಿಂದ ಮೈಸೂರಿನವರೆಗೆ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನಡೆದ ಪಾದಯಾತ್ರೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಕಾರ್ಯಕರ್ತರು ಆಗಮಿಸಿದ್ದರು. ಇದರಿಂದ ವಿಜಯೇಂದ್ರ ಅವರ ನಾಯಕತ್ವವನ್ನು ಪಕ್ಷದ ಯುವ ಕಾರ್ಯಕರ್ತರೂ ಸೇರಿದಂತೆ ಎಲ್ಲರೂ ಒಪ್ಪಿದ್ದರಿಂದಲೇ ಪಾದಯಾತ್ರೆ ಯಶಸ್ವಿಯಾಗಲು ಸಾಧ್ಯವಾಯಿತು ಎಂದರು.

ಬಿಜೆಪಿ ಎಸ್.ಸಿ.ಮೋರ್ಚಾ ಪದಾಧಿಕಾರಿಗಳು ಸದಸ್ಯತ್ವ ಅಭಿಯಾನಕ್ಕೆ ಕೈ ಜೋಡಿಸಿ ಹೆಚ್ಚು ಸದಸ್ಯರನ್ನು ನೋಂದಣಿ ಮಾಡಿಸುವ ಮೂಲಕ ಪಕ್ಷದಲ್ಲಿ ಎಸ್.ಸಿ. ಮೋರ್ಚಾ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಬೇಕು. ನರೇಂದ್ರ ಮೋದಿ ದೇಶದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದಾರೆ. ಅತ್ಯಂತ ಹೆಚ್ಚಿನ ಔದ್ಯಮಿಕ ಸಾಮರ್ಥ್ಯವನ್ನು ಹೊಂದಿರುವ ದೇಶ ಭಾರತವಾಗಿದ್ದು, ಉದ್ಯೋಗ ಅರಸುವ ಬದಲಾಗಿ ಉದ್ಯೋಗಾವಕಾಶ ಕಲ್ಪಿಸುವ ದೇಶವಾಗಿ ಹೊರಹೊಮ್ಮಿಸಲು ಕ್ರಮ ಕೈಗೊಂಡಿದ್ದಾರೆ. ಎನ್‌ಡಿಎ ಸರ್ಕಾರ ಉದ್ಯಮಶೀಲತೆಗೆ ಹೆಚ್ಚಿನ ಒತ್ತು ನೀಡುತ್ತಿದೆ. ಭಾರತದಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸುವ ಸಲುವಾಗಿ ಮೇಕ್ ಇನ್ ಇಂಡಿಯಾ ಅಭಿಯಾನ ಪ್ರಮುಖ ಪಾತ್ರ ವಹಿಸುತ್ತಿದೆ. ಇದು ನಾಲ್ಕು ಪ್ರಮುಖ ಆಧಾರಸ್ತಂಭಗಳ ಮೇಲೆ ರೂಪಿತವಾಗಿದೆ ಎಂದು ಹೇಳಿದರು.

ಮಾಜಿ ಶಾಸಕ ಹರ್ಷವರ್ಧನ್ ಮಾತನಾಡಿ, ರಾಷ್ಟ್ರವನ್ನು ಬಲಿಷ್ಠಗೊಳಿಸಲು ಹಾಗೂ ಭಾರತವನ್ನು ವಿಶ್ವ ಗುರುವಾಗಿಸಲು ನಾವೆಲ್ಲರೂ ಸದಸ್ಯತ್ವ ಅಭಿಯಾನ ಯಶಸ್ವಿಯಾಗಿಸಲು ಶ್ರಮಿಸಬೇಕು. ಎಲ್ಲರೂ ತಮ್ಮ ಶಕ್ತಿ ಮೀರಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ನೋಂದಣಿ ಮಾಡಿಸಬೇಕು. ದೇಶದಲ್ಲಿ ಬಿಜೆಪಿಯನ್ನು ಇನ್ನಷ್ಟು ಶಕ್ತಿಯುತವಾಗಿಸಬೇಕು. ವಿಕಸಿತ ಭಾರತದ ಗುರಿಗೆ ನಾವೆಲ್ಲರೂ ಪ್ರಧಾನಿ ಮೋದಿ ಅವರ ಕೈ ಬಲಪಡಿಸಬೇಕು. ರಾಜ್ಯದ ಗ್ರಾಮೀಣ ಭಾಗದಲ್ಲಿ ಪಕ್ಷದ ಎಸ್.ಸಿ ಮೋರ್ಚಾ ಪದಾಧಿಕಾರಿಗಳು ಹೊಸದಾಗಿ ಸದಸ್ಯತ್ವ ಮಾಡಿಸಬೇಕು. ಆ ಮೂಲಕ ಮೋರ್ಚಾದ ಬಲವನ್ನು ಹೆಚ್ಚಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಹಿರಿಯ ಮುಖಂಡ ಎಸ್.ಮಹದೇವಯ್ಯ, ಮಾಜಿ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಜಿಲ್ಲಾ ಎಸ್.ಸಿ ಮೋರ್ಚಾ ಅಧ್ಯಕ್ಷ ಅನಿಲ್, ಮುಖಂಡ ಸಿ.ಎಂ.ಮಹದೇವಯ್ಯ ಸೇರಿದಂತೆ ಎಸ್.ಸಿ ಮೋರ್ಚಾ ಪದಾಧಿಕಾರಿಗಳು, ವಿವಿಧ ಮಂಡಲಗಳ ಅಧ್ಯಕ್ಷರು ಪಾಲ್ಗೊಂಡಿದ್ದರು.

ಕನ್ನಡ ಚಿತ್ರರಂಗದಲ್ಲೂ ಲೈಂಗಿಕ ದೌರ್ಜನ್ಯ ತನಿಖೆಗೆ ಆಗ್ರಹ

ಸಮಿತಿ ರಚಿಸುವಂತೆ ಸಿಎಂಗೆ ಸುದೀಪ್, ರಮ್ಯಾ ಸೇರಿ 153 ಮಂದಿ ಮನವಿ!

ಬೆಂಗಳೂರು, ಸೆ.4– ಮಲಯಾಳ ಚಿತ್ರರಂಗದಲ್ಲಿನ ಲೈಂಗಿಕ ದೌರ್ಜನ್ಯ ಕುರಿತು ರಚಿಸಲಾಗಿದ್ದ ನ್ಯಾಯಮೂರ್ತಿ ಹೇಮಾ ಸಮಿತಿಯ ವರದಿ ಕೇರಳದಲ್ಲಿ ಕೋಲಾಹಲ ಸೃಷ್ಟಿಸಿದೆ.

ಇದರ ಬೆನ್ನಲ್ಲೆ ಇದೀಗ ಕನ್ನಡ ಚಿತ್ರರಂಗದಲ್ಲೂ ಲೈಂಗಿಕ ದೌರ್ಜನ್ಯಗಳು ನಡೆದಿವೆ. ಈ ಕುರಿತಂತೆ ಸಮಿತಿ ರಚಿಸುವಂತೆ ನಟ ಸುದೀಪ್, ರಮ್ಯಾ ಸೇರಿದಂತೆ 153 ಮಂದಿ ಸಹಿ ಪತ್ರದ ಮೂಲಕ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಸ್ಯಾಂಡಲ್‌ವುಡ್‌ನಲ್ಲೂ ಹಲವು ನಟಿಯರ ಮೇಲೆ ಲೈಂಗಿಕ ದೌರ್ಜನ್ಯಗಳು ನಡೆದಿದ್ದು, ಇಲ್ಲೂ ಸಮಿತಿ ರಚಿಸುವಂತೆ ನಟ, ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ನೇತೃತ್ವದಲ್ಲಿ 153 ಮಂದಿ ಈ ಪತ್ರಕ್ಕೆ ಸಹಿ ಹಾಕಿದ್ದು ಸಿಎಂ ಸಿದ್ದರಾಮಯ್ಯ ಅವರನ್ನು ಮನವಿ ಮಾಡಿದ್ದಾರೆ.

ಸ್ಯಾಂಡಲ್‌ವುಡ್‌ನಲ್ಲಿ ಕೆಲಸ ಮಾಡುವ ಮಹಿಳೆಯರ ಸಮಸ್ಯೆಗಳ ಕುರಿತಂತೆ ಹೋರಾಡಲು ಈ ಹಿಂದೆ ಫಿಲ್ಮ್ ಇಂಡಸ್ಟ್ರಿ ಫಾರ್ ರೈಟ್ಸ್ ಅಂಡ್ ಇಕ್ವಾಲಿಟಿ (ಫೈರ್) ರಚಿಸಲಾಗಿತ್ತು. 2017ರಲ್ಲಿ ರಚಿಸಲಾಗಿದ್ದ ಈ ಸಂಸ್ಥೆಯಲ್ಲಿ ಚೇತನ್ ಅಹಿಂಸಾ, ನಿರ್ದೇಶಕಿ ಕವಿತಾ ಲಂಕೇಶ್ ಸೇರಿದ್ದರು. ಈ ಸಂಸ್ಥೆ ಇದೀಗ ಮತ್ತೆ ಲೈಂಗಿಕ ಕಿರುಕುಳದ ವಿರುದ್ಧ ಹೋರಾಟಕ್ಕೆ ನಿಂತಿದೆ. ಮನವಿ ಪತ್ರಕ್ಕೆ ಫೈರ್ ಅಧ್ಯಕ್ಷೆ, ನಿರ್ದೇಶಕಿ ಕವಿತಾ ಲಂಕೇಶ್, ಚೇತನ್ ಅಹಿಂಸಾ, ನಟ ಸುದೀಪ್, ಕಿಶೋರ್, ವಿನಯ್ ರಾಜ್‌ಕುಮಾರ್, ಪವನ್ ಒಡೆಯರ್, ನಟಿಯರಾದ ರಮ್ಯಾ ಇನ್ನಿತರರು ಸಹಿ ಮಾಡಿದ್ದಾರೆ.

ಮಹಾವೀರಾಚಾರ್ಯ ಪುರಸ್ಕಾರ...


ಅಯೋಧ್ಯೆಯಲ್ಲಿ ನಡೆದ ಸಮಾರಂಭದಲ್ಲಿ ಮಾನಸಗಂಗೋತ್ರಿಯ ಗಣಿತಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಪದ್ಮಾವತಮ್ಮ ಅವರು ರಚಿಸಿರುವ ಗಣಿತ ಸಾರಸಂಗ್ರಹದ ಕನ್ನಡ ಅನುವಾದ ಪುಸ್ತಕಕ್ಕೆ ದಿಗಂಬರ ಜೈನ ತ್ರಿಲೋಕ ಶೋದ ಸಂಸ್ಥಾನ, ಹಸ್ತಿನಾಪುರ ಇವರ ವತಿಯಿಂದ ಮಹಾವೀರಾಚಾರ್ಯ ಪುರಸ್ಕಾರ ನೀಡಿ, ಸನ್ಮಾನಿಸಲಾಯಿತು.

ಬಸವ ಮಾರ್ಗ ಸಂಸ್ಥೆ ದತ್ತು ಪಡೆದಿರುವ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ವಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಶಸ್ತಿ


ಮೈಸೂರು ದಕ್ಷಿಣ ವಲಯ ಹಾಗೂ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಶಸ್ತಿ ಪಡೆದ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಶಾಲೆ ದತ್ತು ಪಡೆದಿರುವ ಬಸವಮಾರ್ಗ ಸಂಸ್ಥೆಯ ಬಸವರಾಜು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

ಮೈಸೂರು, ಸೆ.4– ಮೈಸೂರಿನ ಬಸವ ಮಾರ್ಗ ಸಂಸ್ಥೆ ದತ್ತು ಪಡೆದಿರುವ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ವಾಲಿಬಾಲ್ ಪಂದ್ಯಾವಳಿಯ ದಕ್ಷಿಣ ವಲಯ ಮಟ್ಟದಲ್ಲಿ ಪ್ರಥಮ ಹಾಗೂ ಜಿಲ್ಲಾ ಮಟ್ಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಗರದ ಕಾವೇರಿ ಶಾಲೆಯ ಮೈದಾನದಲ್ಲಿ ಆಯೋಜಿಸಲಾಗಿದ್ದ ಪಂದ್ಯಾವಳಿಯಲ್ಲಿ ಜಿಲ್ಲೆಯ 18ಕ್ಕೂ ಹೆಚ್ಚು ಶಾಲೆಯ ತಂಡಗಳು ಪಾಲ್ಗೊಂಡಿದ್ದವು. ಅತ್ಯುತ್ತಮ ಪ್ರದರ್ಶನದೊಂದಿಗೆ ಫೈನಲ್ ಪ್ರವೇಶಿಸಿದ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ ತಂಡವು ದಕ್ಷಿಣ ವಲಯ ಮಟ್ಟದಲ್ಲಿ ಗೆಲುವು ಸಾಧಿಸಿತು.

ಹಾಗೆಯೇ ದರ್ಶನ್ ಮತ್ತು ಚಂದ್ರಶೇಖರ್ ಸ್ಮರಣಾರ್ಥ ಮೈಸೂರು ವೆಸ್ಟ್ ಲಯನ್ಸ್ ಸೇವಾನಿಕೇತನ ಶಾಲೆ ಹಾಗೂ ಮೈಸೂರು ನಗರ ದೈಹಿಕ ಶಿಕ್ಷಣ ಶಿಕ್ಷಕರ ಕ್ರೀಡಾ ಕ್ಲಬ್ ಸಹಯೋಗದಲ್ಲಿ ಗೋಕುಲಂನ ಲಯನ್ಸ್ ಶಾಲೆ ಮೈದಾನದಲ್ಲಿ ನಡೆದ ವಾಲಿಬಾಲ್ ಪಂದ್ಯಾವಳಿಯಲ್ಲಿ ಇದೇ ತಂಡ ದ್ವಿತೀಯ ಸ್ಥಾನ ಪಡೆಯಿತು.


ಈ ಹಿನ್ನೆಲೆಯಲ್ಲಿ ತಂಡದಲ್ಲಿದ್ದ ಚಂದು, ಹೆಚ್.ಚೆಲುವರಾಜು, ಪ್ರತಾಪ್, ಆರ್. ಹೇಮಂತ್, ಎನ್.ಹೇಮಂತ್ ಕುಮಾರ್, ರಾಕೇಶ್, ಪುನೀತ್, ದರ್ಶನ್, ಹೆಚ್. ಅಭಿಲಾಷ್, ಬಿ.ಜೀವನ್, ಬಸವ ಶೆಟ್ಟಿ, ಹೆಚ್.ಆದರ್ಶ್‌ನನ್ನು ಶಾಲೆಯ ವತಿಯಿಂದ ಅಭಿನಂದಿಸಿ, ಪ್ರೋತ್ಸಾಹಿಸಲಾಯಿತು.

ಈ ವೇಳೆ ಬಸವ ಮಾರ್ಗ ಸಂಸ್ಥೆಯ ಸಂಸ್ಥಾಪಕ ಬಸವರಾಜು ಮಾತನಾಡಿ, ಸರ್ಕಾರಿ ಶಾಲೆ ವಿದ್ಯಾರ್ಥಿಗಳೆಂದರೆ ಕಲಿಕೆಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲೂ ಹಿಂದುಳಿಯುತ್ತಾರೆ ಎಂಬ ಅಪವಾದವಿದೆ. ಆದರೆ ಅವರಿಗೆ ಸರಿಯಾದ ಮಾರ್ಗದರ್ಶನ ಹಾಗೂ ಅವಕಾಶ ಕಲ್ಪಿಸಿದರೆ ಯಾವ ಸ್ಪರ್ಧೆಯಾದರೂ ಜಯಿಸಿ, ಸಾಧಿಸುತ್ತಾರೆ. ಇದಕ್ಕೆ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳೇ ನಿದರ್ಶನ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಶಾಲೆಯನ್ನು ಬಸವ ಮಾರ್ಗ ಸಂಸ್ಥೆ ದತ್ತು ಪಡೆದಿದ್ದು, ವಿದ್ಯಾರ್ಥಿಗಳ ಸರ್ವತೋಮುಖ ವಿಕಸನಕ್ಕೆ ನೆರವಾಗಲು ಸದಾ ಸಿದ್ಧವಿದೆ. ಮೂಲಸೌಕರ್ಯದ ಜೊತೆಗೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವ ಪ್ರತಿಭೆ ಗುರುತಿಸಿ, ಪ್ರೋತ್ಸಾಹ ನೀಡಲಾಗುತ್ತಿದೆ. ಅಗತ್ಯವಿದ್ದಾಗ ತಜ್ಞರಿಂದ ತರಬೇತಿಯನ್ನೂ ಕಲ್ಪಿಸಲಾಗುತ್ತಿದೆ. ಎಲ್ಲಾ ಅವಕಾಶ ಹಾಗೂ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಂಡು ದೇಶಕ್ಕೆ ಉತ್ತಮ ಪ್ರಜೆಗಳಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕ ಚಂದ್ರು, ದೈಹಿಕ ಶಿಕ್ಷಣದ ಶಿಕ್ಷಕಿ ಜಿ. ಸಾವಿತ್ರಿ, ಶಿಕ್ಷಕ ಜಿ.ಮಹೇಶ್, ತರಬೇತುದಾರ ಅನಿಲ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.09.2024 ಗುರುವಾರ, ಮಳೆ ನಕ್ಷತ್ರ: ಪುಬ್ಬ, 31.08.2024 ರಿಂದ 12.09.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಹಸ್ತ, ರಾಹುಕಾಲ : ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀ ಅಭಯಂ ಫೌಂಡೇಷನ್:** ಸುಪ್ರಭಾತ ಸೇವಾ ಸುಮಂಗಲಿಯರಿಗೆ ಸ್ವರ್ಣಗೌರಿ, ಗಣೇಶ ಹಬ್ಬದ ಪ್ರಯುಕ್ತ ಬಾಗಿನ ಸಮರ್ಪಣಾ ಕಾರ್ಯಕ್ರಮ, ಸಾನ್ನಿಧ್ಯ: ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನದ ಅಧ್ಯಕ್ಷ ಕೆ.ಆರ್.ಮೋಹನ್‌ಕುಮಾರ್, ಉದ್ಘಾಟನೆ: ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಉಪಸ್ಥಿತರು: ಫೌಂಡೇಷನ್ ಅಧ್ಯಕ್ಷ ಡಾ.ಎಂ.ಎಸ್. ಮುರಳೀಧರ ಶಾಸ್ತ್ರಿ, ಜಿ.ಸಿ.ಪುಟ್ಟಸ್ವಾಮಿ, ಸವಿತಾ ಘಾಟ್ಕೆ, ಲಯನ್ ಟಿ.ಸುರೇಶ್ ಗೋಲ್ಡ್, ಡಾ. ಚಕ್ರಪಾಣಿ, ವಿಕ್ರಂ ಅಯ್ಯಂಗಾರ್, ಸ್ಥಳ: ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ, ಒಂಟಿಕೊಪ್ಪಲು, ಬೆಳಗ್ಗೆ 7ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** 'ಬಂಜೆತನ, ಮುಟ್ಟಿನ ಸಮಸ್ಯೆ' ಹಾಗೂ ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಅವಧೂತ ದತ್ತ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ದತ್ತಪೀಠ ಉತ್ತರಾಧಿಕಾರಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಇಷ್ಟಿಯಾಗ (ವಿಶೇಷ ಫಲವನ್ನು ನೀಡುವ ಸಾರಸ್ವತೇಷ್ಟಿ ಎಂಬ ಮಹಾಯಾಗ), ಬಲರಾಮ ಜಯಂತಿ, ವರಾಹ ಜಯಂತಿ, ಶಿಕ್ಷಕರ ದಿನಾಚರಣೆ, ಸ್ಥಳ: ಆಶ್ರಮದ ಆವರಣ, ಬೆಳಗ್ಗೆಯಿಂದ.

■ **ಮೈಸೂರು ವಿಶ್ವವಿದ್ಯಾನಿಲಯ:** ಶಿಕ್ಷಕರ ದಿನಾಚರಣೆ, ಮುಖ್ಯ ಅತಿಥಿಗಳು: ಡಾ.ಸುದರ್ಶನ ರಾಮರಾಜು, ಅಧ್ಯಕ್ಷತೆ: ಮೈವಿವಿ ಕುಲಪತಿ ಪ್ರೊ.ಲೋಕನಾಥ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಶಿಕ್ಷಕರ ದಿನಾಚರಣೆ ಮತ್ತು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆ, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಮುಖ್ಯ ಅತಿಥಿಗಳು: ಹಿರಿಯ ಪ್ರಾಧ್ಯಾಪಕ ಪ್ರೊ.ಪಿ.ಕಣ್ಣನ್, ಉಪಸ್ಥಿತರು: ಕರಾಮುವಿವಿ ಕುಲಪತಿ ಪ್ರೊ.ಕೆ.ಬಿ.ಪ್ರವೀಣ, ಡೀನ್ ಪ್ರೊ.ಎನ್.ಲಕ್ಷ್ಮೀ, ಕುಲಸಚಿವ ಡಾ.ಹೆಚ್.ವಿಶ್ವನಾಥ್, ಹಣಕಾಸು ಅಧಿಕಾರಿ ಹೆಚ್.ವಿ.ಶ್ವೇತ, ಕರಾಮುವಿವಿ ಡೀನ್ ಪ್ರೊ.ಎಂ.ರಾಮನಾಥಂ ನಾಯುಡು, ಪ್ರಾಸ್ತಾವಿಕ ನುಡಿ: ಡಾ.ಚಂದ್ರೇಗೌಡ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11.30ಕ್ಕೆ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು:** ಶಿಕ್ಷಕರ ದಿನಾಚರಣೆ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಪ್ರಾದೇಶಿಕ ಶಿಕ್ಷಣ ಸಂಸ್ಥೆ ಪ್ರಾಂಶುಪಾಲ ಪ್ರೊ.ಯಜ್ಞಮೂರ್ತಿ ಶ್ರೀಕಾಂತ್, ಅಧ್ಯಕ್ಷತೆ: ಶ್ರೀನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ, ಸನ್ಮಾನಿತರು: ಕುಮಾರ ರಾಘವನ್, ಸ್ಥಳ: ಶ್ರೀ ನಟರಾಜ ಸಭಾಂಗಣ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಂವಹನ ಸಮಾಚಾರ–ಬಾನುಲಿ ಸರಣಿ, ಪ್ರಸ್ತುತಿ: ಅಲಕಾ ಕಟ್ಟೆಮನೆ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಾ.ಎಂ.ಎ.ಜ್ಯೋತಿ, ವ್ಯಾಖ್ಯಾನ–ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಅರಣ್ಯ ಇಲಾಖೆ, 8.30 ಕನ್ನಡ ಚಿತ್ರಗೀತೆಗಳು, 9.05 ಸಾರ್ಕೋಮ ಜಾಗೃತಿ ಕುರಿತು ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು ಎಂ.ನಾಗರಾಜ್ ಮತ್ತು ಡಾ. ಮೈಸೂರು. ಎಂ.ಮಂಜುನಾಥ್–ವಯೋಲಿನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.30 ದೇವರನಾಮ, 12.45 ಚಿತ್ರಗೀತೆಗಳು, 1.20 ಭಾವಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯಾರಾಗ: ಸಾಮಾಜಿಕ ಕಳಕಳಿಯ ಹಿರಿಯರಾದ ಡಾ.ಮಲ್ಲಿಕಾ ಬಿ.ಆರ್. ಅವರೊಂದಿಗೆ ಆತ್ಮೀಯ ಸಂವಾದ, ಭಾಗವಹಿಸುವವರು: ಜಿ.ಶಾಂತಕುಮಾರ್, 6.10 ಸಂವಹನ ಸಮಾಚಾರ–ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಆಹಾರ ಸಂಸ್ಕರಣಾ ತಾಂತ್ರಿಕತೆಗಳ ಅಳವಡಿಕೆ. ಈ ಕುರಿತು ಮೈಸೂರಿನ ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾಲಯದ ಹಿರಿಯ ತಾಂತ್ರಿಕ ಅಧಿಕಾರಿ ಡಾ.ಎಸ್.ವಿ.ರಾಘವೇಂದ್ರ ಅವರೊಂದಿಗೆ ಸಂದರ್ಶನ. ಪ್ರಸ್ತುತಿ: ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ 'ಶಿಕ್ಷಕರ ದಿನಾಚರಣೆ' ಈ ಕುರಿತು ಮೈಸೂರು ಕೃಷ್ಣಮೂರ್ತಿ ಅವರಿಂದ ಭಾಷಣ, 8.00 ಯುವವಾಣಿ, 10.00 ನಾಟಕ, 10.30 ಸವಿನೆನಪು

■ **ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ:** ಉಚಿತ ಕೃತಕ ಕಾಲು ಜೋಡಣೆಯ ಅಳತೆ, ಮೌಲ್ಯಮಾಪನ ಶಿಬಿರ, ಉದ್ಘಾಟನೆ: ವಿಕಲಚೇತನರ ಕಲ್ಯಾಣಾಧಿಕಾರಿ ಶಂಕರಗೌಡ ಪಾಟೀಲ, ಅಧ್ಯಕ್ಷತೆ: ಸುದರ್ಶನ ಶರ್ಮಾ, ಅತಿಥಿಗಳು: ಕ್ಷೇತ್ರಾಧಿಕಾರಿ ಅಭಿಲಾಷ್, ಜಯವೇಲು, ನಾಗರಾಜು, ಸ್ಥಳ: ಸಿಎಸ್‌ಐ ವೆಸ್ಲಿ ಹೆಲ್ಡ್ ಹಾಲ್, ಬೆಳಗ್ಗೆ 11ಕ್ಕೆ.

■ **ಜೀವಧಾರ ರಕ್ತನಿಧಿ ಕೇಂದ್ರ :** ಗೌರಿ ಗಣೇಶ ಹಬ್ಬದ ಅಂಗವಾಗಿ ಪೌರಕಾರ್ಮಿಕರಿಗೆ ಬಾಗಿನ ವಿತರಣೆ, ಮುಖ್ಯ ಅತಿಥಿಗಳು: ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಉಪಾಧ್ಯಕ್ಷೆ ಹೇಮಾ ನಂದೀಶ್, ಮುಡಾ ಮಾಜಿ ಸದಸ್ಯೆ ಲಕ್ಷ್ಮೀದೇವಿ, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಸಹನಗೌಡ, ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರ, ನ್ಯೂ ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11ಕ್ಕೆ.

■ **ಶಾರದಾ ವಿಲಾಸ ಕಾಲೇಜು :** ಪಠ್ಯೇತರ ಚಟುವಟಿಕೆಗಳು, ಶಾರದೆ ಅಲ್ಯೂಮ್ನಿ ಮ್ಯಾಗಜಿನ್, ಶಿಕ್ಷಕರ ದಿನಾಚರಣೆ ಕಾರ್ಯಕ್ರಮ, ಉದ್ಘಾಟನೆ: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ಮುಖ್ಯ ಅತಿಥಿಗಳು: ಚಾಮರಾಜನಗರ ಧೀನಬಂಧು ಟ್ರಸ್ಟ್ ಸಂಸ್ಥಾಪಕ ಜಿ.ಎಸ್. ಜಯದೇವ, ಗೌರವ ಅತಿಥಿಗಳು: ಎಸ್‌ವಿಇಐ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಕಾರ್ಯದರ್ಶಿ ಎನ್. ಚಂದ್ರಶೇಖರ್, ಅಧ್ಯಕ್ಷತೆ : ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ಶತಮಾನೋತ್ಸವ ಸಭಾಂಗಣ, ಬೆಳಗ್ಗೆ 11.30ಕ್ಕೆ

■ **ಜೆಎಸ್‌ಎಸ್ ಪಾಲಿಟೆಕ್ನಿಕ್:** ಜೆಎಸ್‌ಎಸ್ ಪಾಲಿಟೆಕ್ನಿಕ್ ಘಟಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು: ಡಾ. ರಾಘವೇಂದ್ರ ಬಿ. ಕುಲಕರ್ಣಿ, ಡಿಟಿಇ ಡೆಪ್ಯೂಟಿ ಡೈರೆಕ್ಟರ್ ಶ್ರೀಮತಿ ಎಸ್. ಮಂಜುಳಾ, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ಸ್ಥಳ: ಸೆಮಿನಾರ್ ಹಾಲ್, ಜೆಎಸ್‌ಎಸ್ ಪಾಲಿಟೆಕ್ನಿಕ್, ಮಧ್ಯಾಹ್ನ 3ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದಜಿ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಶ್ರೀ ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 5 ರಿಂದ.

ಮೈಸೂರಲ್ಲಿ ಕಂಗೊಳಿಸುತ್ತಿವೆ ವಿಘ್ನ ನಿವಾರಕನ ನಾನಾ ರೂಪದ ಮೂರ್ತಿಗಳು!









ಮೈಸೂರು, ಸೆ.4(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಸಂಕಷ್ಟಹರ ಗಣೇಶ ಚತುರ್ಥಿ ಸಂಭ್ರಮ ಮನೆ ಮಾಡಿದ್ದು, ಅಯೋಧ್ಯೆಯ ಬಾಲರಾಮ, ಮಲೈ ಮಹದೇಶ್ವರಸ್ವಾಮಿ, ಶ್ರೀ ಗುರುರಾಘವೇಂದ್ರ ಸ್ವಾಮಿ ಸೇರಿದಂತೆ ವಿವಿಧ ರೂಪಗಳಲ್ಲಿ ವಿನ್ಯಾಸಗೊಂಡಿರುವ ಗಣಪತಿಯ ಮೂರ್ತಿಗಳು ಭಕ್ತರ ಆಕರ್ಷಣೆಯಾಗಿವೆ...

ಗೌರಿ–ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನ ಹಲವೆಡೆ ಗಣಪತಿ ವಿಗ್ರಹಗಳ ಮಾರಾಟ ಚುರುಕಾಗಿದ್ದು, ವಿಭಿನ್ನ ವಿನ್ಯಾಸದ ಮೂರ್ತಿಗಳು ನೋಡುಗರ ಗಮನ ಸೆಳೆಯುತ್ತಿವೆ. ಅದರಲ್ಲೂ ದೇಶದಾದ್ಯಂತ ಸಂಚಲನ ಸೃಷ್ಟಿಸಿದ ಅಯೋಧ್ಯೆ ಬಾಲರಾಮ ಮೂರ್ತಿಯನ್ನೇ ಹೋಲುವಂತೆ ರೂಪಿಸಿರುವ ವಿಘ್ನ ನಿವಾರಕ 'ಬಾಲ ಗಣಪನ' ಮೂರ್ತಿ ವಿಶೇಷವಾಗಿದೆ.

ಹಾಗೆಯೇ ಮಲೈ ಮಹದೇವಶ್ವರಸ್ವಾಮಿ, ಶ್ರೀ ಗುರುರಾಘವೇಂದ್ರ ಸ್ವಾಮಿ, ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಜೊತೆಗಿರುವಂತೆ ಹಾಗೂ ಗಣೇಶನ ಕೈಯಲ್ಲಿ ಬೆಟ್ಟದ ಹೂ ಚಿತ್ರದಲ್ಲಿ ಪುನೀತ್ ರಾಜ್‌ಕುಮಾರ್ ಮಾದರಿಯ ಗಣೇಶನ ಮೂರ್ತಿಗಳು ಭಕ್ತರು ಹಾಗೂ ಪುನೀತ್ ಅಭಿಮಾನಿಗಳ ಸೆಳೆಯುತ್ತಿದ್ದು, ಮೈಸೂರಿನ ಲಷ್ಕರ್ ಪೊಲೀಸ್ ಠಾಣೆ ಹಿಂಭಾಗದ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿರುವ ಕೆ.ಟಿ.ಸ್ಟ್ರೀಟ್‌ನ ಕಲಾವಿದ ಮಂಜುನಾಥ್ ಕೈಚಳಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.

ಪ್ರತಿ ವರ್ಷದಂತೆ ಈ ವರ್ಷವೂ ವಿಭಿನ್ನವಾಗಿ ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ತಯಾರಿಸಿರುವ ಮಂಜುನಾಥ್, ಈ ವರ್ಷದ ಬಾಲ ಗಣಪನ ವಿಗ್ರಹಕ್ಕೆ ಡಿಮ್ಯಾಂಡ್ ಹೆಚ್ಚಾಗಿದೆ. ನಗರದ ಯುವಕರು ಸೇರಿದಂತೆ ನಾನಾ ಕಡೆಗಳಿಂದ ಬಾಲ ರಾಮನ ಮಾದರಿಯ ಬಾಲ ಗಣಪತಿ ಮೂರ್ತಿಗಳನ್ನು ಹೇಳಿ ಮಾಡಿಸುತ್ತಿದ್ದಾರೆ. ಯಶ್, ಪುನೀತ್ ರಾಜಕುಮಾರ್ ಜೊತೆ ಗಣೇಶ ಇರುವ ಮಾದರಿಗಳನ್ನು ಕಳೆದ ಎರಡು ವರ್ಷ ಮಾಡುತ್ತಿದ್ದೇನೆ. ಈ ವರ್ಷ ಬಾಲ ರಾಮನ ವಿಗ್ರಹ ಮಾದರಿಯ ಬಾಲ ಗಣಪತಿ ಮೂರ್ತಿ ಮಾಡಿಕೊಡುವಂತೆ ನಗರದ ಯುವಕರ ತಂಡವೊಂದು ಫೋಟೋ ತಂದು ಕೊಟ್ಟರು. ಕಳೆದ 10–15 ದಿನಗಳಿಂದ ಜೇಡಿ ಮಣ್ಣಿನಲ್ಲಿ ರಾಮಲಲ್ಲಾ ಮಾದರಿಯ ಹಲವು ಬಾಲ ಗಣಪತಿ ಮೂರ್ತಿಗಳನ್ನು ತಯಾರಿಸಲಾಗಿದೆ. ಎಲ್ಲಾ ಮೂರ್ತಿಗಳು 3 ಅಡಿ ಎತ್ತರ ಇವೆ. ಆದರೆ, ಸಮಯದ ಅಭಾವದಿಂದ ಬೇಡಿಕೆಗಳಿಗೆ ತಕ್ಕಂತೆ ಪೂರ್ತಿ ಸಿದ್ಧಪಡಿಸಲು ಸಾಧ್ಯವಾಗಲಿಲ್ಲ ಎಂದು ಕಲಾವಿದ ಮಂಜುನಾಥ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.ಬಾಳ ಗಣಪತಿ ಮೂರ್ತಿ ಜೊತೆಗೆ ಶ್ರೀ ರಾಘವೇಂದ್ರ ಸ್ವಾಮಿ, ಹುಲಿಯ ಮೇಲೆ ಕುಳಿತಿರುವ ಮಲೈ ಮಹದೇಶ್ವರ ಸ್ವಾಮಿ ಹಾಗೂ ಕುಕ್ಕೆ ಸುಬ್ರಮಣ್ಯ ಸ್ವಾಮಿ ಮಾದರಿಯ ಗಣಪತಿ ಮಾಡಲಾಗಿದೆ. ಇದೇ ರೀತಿ ಸಾವಿರಾರು ಮಣ್ಣಿನ ಗಣಪತಿ ಮಾಡಲಾಗಿದೆ ಎಂದು ತಿಳಿಸಿದರು.

ವ್ಯಾಪಾರ ಜೋರು, ಚಪ್ಪರ ನಿರ್ಮಾಣ: ಮೈಸೂರು ನಗರ ಹಲವೆಡೆ ಗಣೇಶ ಮೂರ್ತಿಗಳ ವ್ಯಾಪಾರ ಜೋರಾಗಿದ್ದು, ಗಾತ್ರ ಮತ್ತು ಎತ್ತರಕ್ಕೆ ಅನುಗುಣವಾಗಿ ಮಾರಾಟ ಮಾಡಲಾಗುತ್ತಿದೆ. ಅಲ್ಲದೆ ಮನೆ ಮನೆಗೆ ತೆರಳಿ ದೇಣಿಗೆ ಪಡೆಯುತ್ತಿರುವ ಯುವಕರು ತಮ್ಮ ತಮ್ಮ ಬಡಾವಣೆ ವ್ಯಾಪ್ತಿಯಲ್ಲಿ ಚಪ್ಪರ ಕಟ್ಟುವ ಕಾರ್ಯದಲ್ಲಿ ತೊಡಗಿದ್ದಾರೆ. ಹಾಗೆಯೇ ಮಾರುಕಟ್ಟೆಗಳಲ್ಲಿ ಪೂಜಾ ಸಾಮಗ್ರಿಗಳ ಖರೀದಿಯೂ ಜೋರಾಗಿದೆ.

ಇಂದು ಸಂಜೆ ಮೈಸೂರು ಅರಮನೆಗೆ ದಸರಾ ಗಜಪಡೆಯ ಎರಡನೇ ತಂಡ ಆಗಮನ

5 ಆನೆಗಳನ್ನು ಸಾಂಪ್ರದಾಯಿಕ ಪೂಜೆ ಮಾಡಿ ಬರಮಾಡಿಕೊಳ್ಳಲು ಸಿದ್ಧತೆ

ಮೈಸೂರು,ಸೆ.4(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿದ್ದ ಎರಡನೇ ತಂಡದ ಐದು ಆನೆಗಳು ಗುರುವಾರ ಸಂಜೆ ಮೈಸೂರು ಅರಮನೆ ಪ್ರವೇಶಿಸಿ, ಗಜಪಡೆಯನ್ನು ಸೇರಲಿವೆ. ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಅ.3ರಿಂದ ಆರಂಭವಾಗ ಲಿದ್ದು, ಅ.12ರಂದು ಜಂಬೂ ಸವಾರಿ ನಡೆಯಲಿದೆ. ಈಗಾಗಲೇ ಮೊದಲ ತಂಡದಲ್ಲಿ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ 9 ಆನೆಗಳು ಆಗಮಿಸಿ ಅರಮನೆಯಲ್ಲಿ ಬೀಡು ಬಿಟ್ಟಿವೆ. ಮೊದಲ ತಂಡ ಆಗಮಿಸಿದ 15 ದಿನಗಳ ಬಳಿಕ ಎರಡನೇ ತಂಡದಲ್ಲಿ 5 ಆನೆಗಳು ವಿವಿಧ ಕ್ಯಾಂಪ್‌ಗಳಿಂದ ಅರಮನೆಗೆ ಆಗಮಿಸಲಿವೆ. ಎರಡು ಹೆಣ್ಣು, ಮೂರು ಗಂಡಾನೆಯುಳ್ಳ ಎರಡನೇ ತಂಡ ಮೈಸೂರು ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ನಾಳೆ ಸಂಜೆ 4ರಿಂದ 4.30 ರೊಳಗೆ ತಲುಪಲಿವೆ. ಬಳಿಕ ಸಾಂಪ್ರದಾಯಿಕ ಪೂಜೆ ನೆರವೇರಿಸಿ ಎರಡನೇ ತಂಡದ ಆನೆಗಳನ್ನು ಬರಮಾಡಿಕೊಳ್ಳಲಾಗುತ್ತದೆ. ಎರಡನೇ ತಂಡದಲ್ಲಿ ಮತ್ತಿಗೋಡು ಶಿಬಿರದಿಂದ ಮಹೇಂದ್ರ (41), ದುಬಾರೆ ಶಿಬಿರದಿಂದ ಪ್ರಶಾಂತ (51), ಸುಗ್ರೀವ (42), ಹೆಣ್ಣಾನೆಗಳಾದ ದೊಡ್ಡಹರವೆ ಶಿಬಿರದ ಲಕ್ಷ್ಮೀ (53) ಹಾಗೂ ಬಂಡೀ ಪುರ ಅರಣ್ಯದ ರಾಂಪುರ ಕ್ಯಾಂಪ್ ನಿಂದ ಹಿರಣ್ಯ(47) ಆಗಮಿಸಲಿವೆ.

ಅರಮನೆ ಆವರಣದಲ್ಲಿ ಪೂರ್ಣ ಪ್ರಮಾಣದ ಗಜಪಡೆ: ಮೊದಲ ತಂಡದಲ್ಲಿ 9 ಆನೆಗಳು ಆಗಮಿಸಿ ದ್ದರೂ, ಕೆಲ



ಆನೆಗಳ ಮಾವುತ, ಕಾವಾಡಿಗಳ ಕುಟುಂಬದ ಸದಸ್ಯರು ಇನ್ನು ಅರಮನೆಗೆ ಆಗಮಿಸಿಲ್ಲ. ಎರಡನೇ ತಂಡದ ಗಜಪಡೆಯ ಅರಮನೆಗೆ ಆಗಮಿಸುತ್ತಿರುವುದರಿಂದ ಅರಮನೆ ಆವರಣದಲ್ಲಿರುವ ಗಜಪಡೆಯ ಬಿಡಾರ ಪೂರ್ಣ ಪ್ರಮಾಣದಲ್ಲಿ ಕಂಗೊಳಿಸಲಿದೆ. ಎರಡನೇ ತಂಡದ ಮಾವುತ, ಕಾವಾಡಿಗಳ ಕುಟುಂಬದ ಸದಸ್ಯರೂ ಸೇರಿದಂತೆ ಇನ್ನು ಆಗಮಿಸದೇ ಇರುವ ಮೊದಲ ತಂಡದ ಮಾವುತ, ಕಾವಾಡಿಗಳ ಕೆಲ ಕುಟುಂಬದ ಸದಸ್ಯರು ಸೆ.9ರಂದು ಅರಮನೆ ಪ್ರವೇಶಿಸಲಿದ್ದು, ಆ ಬಳಿಕ ಬಿಡಾರದಲ್ಲಿ ಮಾವುತ, ಕಾವಾಡಿಗಳ ಕುಟುಂಬದ ಮಕ್ಕಳ ಚಟುವಟಿಕೆ ಗರಿಗೆದರಲಿದೆ.

ತಾಲೀಮಿನ ಸಾಲು ಬರು ಜೋರು: ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು 14 ಆನೆಗಳನ್ನು ಆಯ್ಕೆ ಮಾಡಲಾಗಿದ್ದು, ಆ.21ರಂದು ಮೈಸೂರಿಗೆ ಮೊದಲ ತಂಡದಲ್ಲಿ ಬಂದ 9 ಆನೆಗಳು ಆ.25ರಿಂದ ಜಂಬೂಸವಾರಿ ಮಾರ್ಗದಲ್ಲಿ ತಾಲೀಮು ನಡೆಸುತ್ತಿದ್ದವು. ಕಂಜನ್ ಕಾಲಿಗೆ ಗಾಯವಾದ ಹಿನ್ನೆಲೆಯಲ್ಲಿ ಬಹುತೇಕ ತಾಲೀಮಿನಲ್ಲಿ 8 ಆನೆಗಳು ಮಾತ್ರ ಭಾಗವಹಿಸಿದ್ದು, ಎರಡನೇ ತಂಡದ 5 ಆನೆಗಳು ಸೇರಿದಂತೆ 14 ಆನೆಗಳು ಸೆ.8ರಿಂದ ಜಂಬೂಸವಾರಿ ಮಾರ್ಗದಲ್ಲಿ ಸಾಗಲಿವೆ. ಇದರಿಂದ ಸಾಲು ಸಾಲಾಗಿ ಸಂಚರಿಸುವ ಆನೆಗಳ ಸುಂದರ ದೃಶ್ಯ ಕಣ್ತುಂಬಿಕೊಳ್ಳುವ ಅವಕಾಶ ಮೈಸೂರಿಗರಿಗೆ ಲಭ್ಯವಾಗಲಿದೆ.

ಟೆಂಟ್‌ಗಳ ನಿರ್ಮಾಣ: ಎರಡನೇ ತಂಡದ ಆನೆಗಳಿಗೆ ತಂಗುದಾಣ ಹಾಗೂ ಮಾವುತ, ಕಾವಾಡಿಗಳಿಗಾಗಿ ಶೆಡ್ ನಿರ್ಮಿಸಲಾಗಿದೆ. ಅಲ್ಲದೆ, ನಾಳೆಯಿಂದಲೇ ಆನೆ ಹಾಗೂ ಮಾವುತರಿಗೆ ಬೇಕಾದ ಸೌಲಭ್ಯಗಳನ್ನು ನೀಡುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. 14 ಆನೆಗಳಿಗೂ ಆಲದ ಸೊಪ್ಪು, ಹಸಿ ಹುಲ್ಲು ಸರಬರಾಜು ಮಾಡಲು ಸೂಚಿಸಲಾಗಿದೆ.

ರೋಡ್ ರೋಲರ್ ಮೂಲಕ ಮಾರ್ಪಾಡಿತ 217 ಸೈಲೆನ್ಸರ್ ನಾಶಗೊಳಿಸಿದ ಪೊಲೀಸರು

ನಾಲ್ಕು ದಿನಗಳ ವಿಶೇಷ ಕಾರ್ಯಾಚರಣೆಯಲ್ಲಿ ಇಂತಹ ಸೈಲೆನ್ಸರ್ ಹೊಂದಿದ 94 ವಾಹನಗಳ ಜಪ್ತಿ



ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಸಿದ್ಧಾರ್ಥ ಸಂಚಾರ ಠಾಣೆ ಬಳಿ ದೋಷಪೂರಿತ 217 ಸೈಲೆನ್ಸರ್‌ಗಳನ್ನು ಬುಧವಾರ ರೋಡ್ ರೋಲರ್ ಮೂಲಕ ನಾಶಗೊಳಿಸಲಾಯಿತು. ಡಿಸಿಪಿಗಳಾದ ಎಂ. ಮುತ್ತುರಾಜು, ಎಸ್. ಜಾಹ್ನವಿ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಸೆ. 4(ಆರ್‌ಕೆ)– ಅಬ್ಬರ ಹಾಗೂ ಕರ್ಕಶ ಶಬ್ದ ಬರುವಂತೆ ಮಾರ್ಪಾಡಿಸಿದ ಸೈಲೆನ್ಸರ್ ಅಳವಡಿಸಿಕೊಂಡಿದ್ದ ದ್ವಿಚಕ್ರ ವಾಹನಗಳನ್ನು ಸಂಚಾರ ಠಾಣೆ ಪೊಲೀಸರು ವಶಪಡಿಸಿಕೊಂಡು, ಇಂತಹ ಬೈಕ್ ಚಾಲಕರು ಮತ್ತು ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ, ದಂಡ ವಸೂಲಿ ಮಾಡುತ್ತಿದ್ದಾರೆ.

ಮೈಸೂರು ನಗರದಾದ್ಯಂತ ಆಗಸ್ಟ್ 31ರಿಂದ ಸೆಪ್ಟೆಂಬರ್ 3ರವರೆಗೆ 4 ದಿನ ಸಂಚಾರ ಠಾಣೆ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಮಾರ್ಪಾಡಿತ ಸೈಲೆನ್ಸರ್ ಅಳವಡಿಸಿಕೊಂಡು ಸಂಚರಿಸುತ್ತಿದ್ದ 94 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಕಾರ್ಯಾಚರಣೆ ವೇಳೆ ಭಾರಿ ಶಬ್ದ ಬರುವಂತೆ ಮಾರ್ಪಾಡಿಸಿದ ಸೈಲೆನ್ಸರ್ ಮಫ್ಲರ್ ಬದಲಿಸಿಕೊಂಡು ದ್ವಿಚಕ್ರ ವಾಹನ, ಬುಲೆಟ್, ಎನ್‌ಫೀಲ್ಡ್ ಬೈಕ್, ಕಾರುಗಳನ್ನು ಓಡಿಸುತ್ತಿದ್ದುದು ಕಂಡು ಬಂದ ಕಾರಣ ಅವುಗಳನ್ನು ವಶಪಡಿಸಿಕೊಂಡಿರುವ ಪೊಲೀಸರು, ಪ್ರಕರಣ ದಾಖಲಿಸಿ ದಂಡ ಪಾವತಿಸಿ ವಾಹನಗಳನ್ನು ಆರ್‌ಸಿ ಮಾಲೀಕರಿಗೆ ಹಿಂತಿರುಗಿಸುತ್ತಿದ್ದಾರೆ. 2024ರ ಜನವರಿಯಿಂದ ಜುಲೈವರೆಗೆ 84, ಆಗಸ್ಟ್ ಒಂದೇ ತಿಂಗಳಲ್ಲಿ 133 ಸೇರಿ ದೇವರಾಜ ಸಂಚಾರ ಠಾಣೆಯಲ್ಲಿ 26, ಕೆಆರ್‌ನಲ್ಲಿ 40, ಎನ್‌ಆರ್‌ನಲ್ಲಿ 51, ಸಿದ್ಧಾರ್ಥನಗರದಲ್ಲಿ 37 ಹಾಗೂ ವಿವಿ ಪುರಂ ಸಂಚಾರ ಠಾಣೆಯಲ್ಲಿ 63 ಸೇರಿದಂತೆ ಒಟ್ಟು 217 ದೋಷಪೂರಿತ ಸೈಲೆನ್ಸರ್ ಉಳ್ಳ ವಾಹನಗಳನ್ನು ಸಂಚಾರ ಪೊಲೀಸರು ವಶಪಡಿಸಿಕೊಂಡಿದ್ದರು.

ವಾಹನಗಳ ಆರ್‌ಸಿ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ, ದಂಡ ಕಟ್ಟಿಸಿಕೊಂಡು ಸೈಲೆನ್ಸರ್‌ಗಳನ್ನು ಮಾಲೀಕರಿಂದಲೇ ಬದಲಿಸಿದ ನಂತರ ವಾಹನಗಳನ್ನು ವಾಪಸ್ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದರು.

ವಾಹನಗಳಿಂದ ತೆಗೆದ 217 ದೋಷಪೂರಿತ ಸೈಲೆನ್ಸರ್‌ಗಳನ್ನೂ ಇಂದು ಲಲಿತ ಮಹಲ್ ರಸ್ತೆ ಪೊಲೀಸ್ ಕ್ಯಾಂಟೀನ್‌ನಲ್ಲಿರುವ ಸಿದ್ಧಾರ್ಥನಗರ ಸಂಚಾರ ಠಾಣೆ ಬಳಿ ರಸ್ತೆಯಲ್ಲಿ ಸಾಲಾಗಿ ಜೋಡಿಸಿ ಅವುಗಳ ಮೇಲೆ ರೋಡ್ ರೋಲರ್ ಹಲವು ಬಾರಿ ಹರಿಸಿ, ನಾಶ ಮಾಡಲಾಯಿತು.

ಮೈಸೂರು ನಗರದಾದ್ಯಂತ ವಾಹನಗಳಿಗೆ ವಿಶೇಷವಾಗಿ ಬುಲೆಟ್ ಬೈಕ್‌ಗಳಿಗೆ ಒಂದು ರೀತಿ ಕ್ರೇಜ್ ಎಂಬಂತೆ ಕರ್ಕಶ ಶಬ್ದ ಬರುವ ಸೈಲೆನ್ಸರ್‌ಗಳನ್ನು ಅಳವಡಿಸಿ ರೋಗಿಗಳು, ಮಕ್ಕಳು ಹಾಗೂ ಹಿರಿಯ ನಾಗರಿಕರಿಗೆ ತೊಂದರೆ ಉಂಟು ಮಾಡುವ ಪ್ರಕರಣಗಳು ಹೆಚ್ಚಾಗುತ್ತಿದ್ದು, ಸಂಚಾರ ಠಾಣೆ ಪೊಲೀಸರು ಮುಂದೆಯೂ ಇಂತಹ ದ್ವಿಚಕ್ರ ವಾಹನ ಸವಾರರ ವಿರುದ್ಧ ಕಾರ್ಯಾಚರಣೆ ನಡೆಸಲಿದ್ದಾರೆ ಎಂದು ಸೀಮಾ ಲಾಟ್ಕರ್ ತಿಳಿಸಿದರು.

ಡಿಸಿಪಿಗಳಾದ ಎಂ. ಮುತ್ತುರಾಜು, ಎಸ್. ಜಾಹ್ನವಿ, ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ಎಲ್ಲಾ ಸಂಚಾರ ಠಾಣೆಗಳ ಇನ್‌ಸ್ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳು ಸೈಲೆನ್ಸರ್ ನಾಶಪಡಿಸುವ ವೇಳೆ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು,ಸೆ.4– ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯಂದು ಹುಣಸೂರು ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಜನಾಂಗದವರ ಏಳಿಗೆಗಾಗಿ ಶ್ರಮಿಸಿದ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಾಧಕರಿಗೆ ರಾಜ್ಯ ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ದಾಖಲಾತಿಗಳನ್ನು ಸೆ.15 ರೊಳಗಾಗಿ ಸಲ್ಲಿಸಬಹುದು. ಮಾಹಿತಿಗಾಗಿ ದೂ.ಸಂ:08222-252812ನ್ನು ಸಂಪರ್ಕಿಸಬಹುದು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು, ಅದರ ಜಂಟೀ ಮಾಲೀಕರಾದ, ಬೆಂಗಳೂರು ಉತ್ತರ, ಇಂದ್ರನಗರ 1ನೇ ಹಂತ, ಆಫ್ ಸಿ.ಎಂ.ಹೆಚ್. ರಸ್ತೆ, 7ನೇ ಕ್ರಾಸ್, ಮನೆ ನಂಬರ್.196 ರಲ್ಲಿ ವಾಸವಾಗಿರುವ ಶ್ರೀಮತಿ.ಸಿ.ತುಳಶೀಜಾ ಕೋಂ ಸಿ.ಪ್ರೇಮ ಚಂದರ್ ರೆಡ್ಡಿ ಮತ್ತು ಮೈಸೂರು ನಗರ, ವಿಜಯನಗರ 2ನೇ ಹಂತ, 7ನೇ ಮುಖ್ಯ ರಸ್ತೆ, ಮನೆ ನಂಬರ್.1751 ರಲ್ಲಿ ವಾಸವಾಗಿರುವ ಶ್ರೀ. ಪಿ. ದಿನೇಶ್ ರೆಡ್ಡಿ ಬಿನ್ ಪಿ. ಕೃಷ್ಣ ರೆಡ್ಡಿ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಅದರ ಮಾಲೀಕರನ್ನು ಹೊರತುಪಡಿಸಿ ಇತರ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ಸೂಕ್ತ ದಾಖಲಾತಿಗ ಳೊಂದಿಗೆ ನನ್ನ ಕಛೇರಿ ವೇಳೆಯಲ್ಲಿ ಸಂಪರ್ಕಿಸ ತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ ಭಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅದರ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ಮದರಗಳ್ಳಿ ಗ್ರಾಮದ ಸರ್ವೆ ನಂಬರ್.26/7ರಲ್ಲಿನ ಮೂರು ಎಕರೆ (3.00.00) ವಿಸ್ತೀರ್ಣದ ಖುಷ್ಕಿ ಜಮೀನಿನ ಪೈಕಿ ಹದಿನೆಂಟು (0.18.00.00) ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್ 27 ರ ಶ್ರೀ.ಶಿವಕುಮಾರ್ ರವರ ಜಮೀನು, ಪಶ್ಚಿಮಕ್ಕೆ:– ಶ್ರೀಮತಿ.ತುಳಶೀಜಾ ಕೋಂ ಸಿ.ಪ್ರೇಮಚಂದರ್ ರೆಡ್ಡಿ ಮತ್ತು ಶ್ರೀ ಪಿ. ದಿನೇಶ್ ರೆಡ್ಡಿ ಬಿನ್ ಪಿ. ಕೃಷ್ಣ ರೆಡ್ಡಿರವರಿಗೆ ಸೇರಿದ ಬ್ಲಾಕ್ ನಂ.1, ಉತ್ತರಕ್ಕೆ:– ಸರ್ವೆ ನಂಬರ್.14 ಸಿ.ಬಾಬು ರೆಡ್ಡಿ ಬಿನ್ ಚಿಕ್ಕರಾಮಯ್ಯರವರ ಜಮೀನು, ದಕ್ಷಿಣಕ್ಕೆ:– ರಸ್ತೆ

Sd/- M.N. Prakash kalappa, KAR -1996-2000
2-3, First Floor, PRI Complex, 67/7A, New Sayyajirao Road, Fort Mohalla, Mysore 570004. Mob: 93431 12535
E-mail: mnprakashkalappa@gmail.com
ದಿನಾಂಕ :–04/09/2024

ಪುರಸಭಾ ಕಾರ್ಯಾಲಯ, ಬೇಲೂರು–573115 ಹಾಸನ ಜಿಲ್ಲೆ.

ದೂರವಾಣಿ: 08177–222221 www.belurtown.gov.in E-mail : itstaff_ulb_belur@yahoo.co.in, townmunicipal.belur@gmail.com

ಸಂಖ್ಯೆ: ಪು.ಬೇ/ಜೆ.ಇ/ಟೆಂಡರ್–08/2023–24 ದಿನಾಂಕ:31–09–2024

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್)

ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಸಿವಿಲ್ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ. 1)ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ: 21.09.2024 ಸಂಜೆ 5.30 ಗಂಟೆಗೆ 2)ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 23.09.2024 ಬೆಳಿಗ್ಗೆ 11.30 ಗಂಟೆಗೆ 3)ಆರ್ಥಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 26.09.2024 ಬೆಳಿಗ್ಗೆ 11.30 ಗಂಟೆಗೆ 4)ಕೆಲಸ ಮುಗಿಸಲು ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) (ಟೆಂಡರ್‌ನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಪ್ರಚುರ ಪಡಿಸಲಾಗುವುದು)

ಕ್ರ.ಸಂ.	ಕಾಮಗಾರಿ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ
1	DMA/2024-25/WS/WORK_INDENT28680 (ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದ ಕಾಮಗಾರಿ)	4,12,000/–	5,150/–
2	DMA/2024-25/RD/WORK_INDENT28761	15,36,000/–	38,400/–
3	DMA/2024-25/OW/WORK_INDENT28767	10,00,000/–	25,000/–
4	DMA/2024-25/BD/WORK_INDENT28774 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದ ಕಾಮಗಾರಿ)	10,40,000/–	13,000/–
5	DMA/2024-25/BD/WORK_INDENT28777 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದ ಕಾಮಗಾರಿ)	8,00,000/–	10,000/–
6	DMA/2024-25/OW/WORK_INDENT28780	1,41,000/–	3,525/–

ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕಾಮಗಾರಿ ಶಾಖೆಯಲ್ಲಿ ಕೆಲಸದ ವೇಳೆಯಲ್ಲಿ ಮತ್ತು http://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–(ಅಶೋಕ್.ಎ.ಆರ್)
ಅಧ್ಯಕ್ಷರು, ಪುರಸಭೆ ಬೇಲೂರು.

ಸಹಿ/–(ಎಸ್.ಎಂ.ಸುಜಯಕುಮಾರ್)
ಮುಖ್ಯಾಧಿಕಾರಿ, ಪುರಸಭೆ ಬೇಲೂರು.

ವಾಸಾಸಂಇ/ಹಿಸನಿ/ಹಾಸನ/401/ಕೆಎಸ್‌ಎಂಸಿಎ/2024–25

ನಕ್ಕರೆ ಅದೇ ಸ್ವರ್ಗ

ಹುಡುಗಿ : ಚೆನ್ನೈ ಎಕ್ಸ್‌ಪ್ರೆಸ್ ಟ್ರೈನ್ ಯಾವಾಗ ಬರುತ್ತೆ?
ಟೀಸಿ : ಐದು ಗಂಟೆಗೆ
ಹುಡುಗಿ : ಲೋಕಲ್ ಟ್ರೈನ್ ಯಾವಾಗ ಬರುತ್ತೆ?
ಟೀಸಿ : ಒಂಬತ್ತು ಗಂಟೆಗೆ
ಹುಡುಗಿ : ಮತ್ತೆ ಗೂಡ್ಸ್?
ಟೀಸಿ : ಒಂದು ಗಂಟೆಗೆ, ಹೌದು ನೀನು ಎಲ್ಲಿಗೆ ಹೋಗಬೇಕು?
ಹುಡುಗಿ : ಹಳಿ ಮೇಲೆ ನಿಂತು ಸೆಲ್ಫಿ ತಗೋಬೇಕು!

ಮೈಸೂರು ಮಿತ್ರ

ಗುರುವಾರ, 5 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಡೆಯುವ ದಾರಿಯಲ್ಲಿ ನಿಂತು ಇದ್ದರೆ ತಡೆಯುವ ತಾಕತ್ತು ಯಾರಿಗೂ ಇರುವುದಿಲ್ಲ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಲ್ಲಿರುವ ತನಕ ಊಟ
ಕಣ್ಣಿರುವ ತನಕ ನೋಟ.

ನಿಮ್ಮ ಪತ್ರಗಳು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಒಂದು ಕಪ್ಪುಚುಕ್ಕೆ

ಮಾನ್ಯರೇ,

1904ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ದೂರ ದೃಷ್ಟಿಯಿಂದ ಮೈಸೂರು ನಗರವನ್ನು ವ್ಯವಸ್ಥಿತವಾಗಿ ರೂಪಿಸುವ ಸಲುವಾಗಿ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಸ್ಥಾಪಿಸಿದರು. ನಂತರದ ದಿನಗಳಲ್ಲಿ ಅದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಿ ರೂಪಗೊಂಡಿತು. ಈಗ ಈ ಪ್ರಾಧಿಕಾರ ಹಗರಣಗಳಿಂದ ಮುಳುಗಿರುವ ಸಂಸ್ಥೆಯಾಗಿ ಮೈಸೂರಿನ ನಗರಕ್ಕೆ ಕಪ್ಪುಚುಕ್ಕೆ ತಂದಿದೆ.

ನಗರದಲ್ಲಿ ಮನೆ ನಿರ್ಮಾಣ ಮಾಡಬೇಕು ಎಂದು ಕನಸು ಕಾಣುವ ಪ್ರತಿಯೊಬ್ಬರಿಗೂ ಕೈಗೆಟಕುವ ದರದಲ್ಲಿ ನಿವೇಶನ ನೀಡಬೇಕಿರುವ ಪ್ರಾಧಿಕಾರ ಇಂದು ಉಳ್ಳವರಿಗೆ ಮಾತ್ರ ನಿವೇಶನ ನೀಡಲು ಇರುವುದು ಎನ್ನುವಂತಾಗಿದೆ. ಮುಡಾ ಹೊಸ ಬಡಾವಣೆಗಳನ್ನು ನಿರ್ಮಿಸಿ ಸಾಮಾನ್ಯ ಜನರ ಕೈಗೆ ಎಟುಕುವ ಬೆಲೆಯಲ್ಲಿ ಹಂಚಿಕೆ ಮಾಡಬೇಕಿರುವ ಪ್ರಾಧಿಕಾರ ಇತ್ತೀಚಿನ ದಿನಗಳಲ್ಲಿ ಬದಲಿ ನಿವೇಶನ ಹಾಗೂ ಖಾಸಗಿ ಬಡಾವಣೆಗಳ ಬಗ್ಗೆ ಹೆಚ್ಚು ಆಸಕ್ತಿ ತೋರುತ್ತಿರುವುದು ಮಾಧ್ಯಮಗಳ ಮೂಲಕ ಕಂಡು ಬಂದಿರುವುದು ನೋಡಿದರೆ ಸಾಮಾನ್ಯ ಜನರಿಗೆ ಮುಡಾ ನಿವೇಶನ ಸಿಗುವುದು ಕನಸಿನ ಮಾತಾಗಿದೆ.

ಸಾವಿರಾರು ಕೋಟಿ ರೂಪಾಯಿಗಳು ಅಕ್ರಮ ನಡೆದಿದೆ ಎಂದು ಹೇಳಲಾಗಿರುವ ಪ್ರಾಧಿಕಾರದಲ್ಲಿ ಬಗೆದಷ್ಟು ಆಳ ಎನ್ನುವಂತೆ ದಿನನಿತ್ಯ ಮಾಧ್ಯಮಗಳ ಮೂಲಕ ಅದರ ಕರ್ಮಕಾಂಡ ಗೊತ್ತಾಗುತ್ತಿದೆ. ಖಾಸಗಿ ಬಡಾವಣೆಗಳಲ್ಲಿ ಉದ್ಯಾನವನಕ್ಕೂ ಜಾಗ ಬಿಡದೆ ಆ ಜಾಗವನ್ನು ನಿವೇಶನ ಮಾಡಿರುವ ಉದಾಹರಣೆ ಇದೆ. 50:50 ಅನುಪಾತದಲ್ಲಿ ಸಮಾನಾಂತರ ನಿವೇಶನಗಳ ತಾರತಮ್ಯ ಕೂಡ ಬಯಲಿಗೆ ಬಂದಿದೆ.

ಅಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ನಗರದ ಜನರ ಅನುಕೂಲಕ್ಕಾಗಿ ಸಮರ್ಪಕವಾಗಿ ಮೂಲಸೌಕರ್ಯಗಳನ್ನು ಒದಗಿಸಲು ಹಾಗೂ ಆಡಳಿತ ಒತ್ತಡ ಕಡಿಮೆ ಮಾಡಲು ಸ್ಥಾಪಿಸಿದ ನಗರ ವಿಶ್ವಸ್ಥ ಮಂಡಳಿ ಸಂಸ್ಥೆ ಇಂದಿನ ಹಗರಣಗಳಿಂದ ಕೂಡಿರುವುದು ನಗರಕ್ಕೆ ಒಂದು ಕಪ್ಪುಚುಕ್ಕೆಯಾಗಿದೆ.

–ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಶಿಕ್ಷಕರ ದಿನಾಚರಣೆ, ಶಿಕ್ಷಕರ ಸಮಸ್ಯೆಗಳು!

ಮಾನ್ಯರೆ,

ನಮಗೆ ಕಲಿಸುವ, ಶಿಕ್ಷಣ ನೀಡುವ, ತಮ್ಮಲ್ಲಿರುವ ಜ್ಞಾನವನ್ನು ನಮಗೆ ಧಾರೆಯೆರೆದು ಕೈ ಹಿಡಿದು ಮುನ್ನಡೆಸುವ ಮಾರ್ಗದರ್ಶಕ, ಮಾರ್ಗದರ್ಶಿ ಎಲ್ಲವೂ ನಮ್ಮ ಶಿಕ್ಷಕರೆ... ಶಿಕ್ಷಕರು ನಮ್ಮ ಎರಡನೇ ಪೋಷಕರು. ನಮ್ಮ ಹೆತ್ತವರ ರೀತಿಯಲ್ಲಿಯೇ ಶಿಕ್ಷಕರು ನಮ್ಮನ್ನು ಪೋಷಿಸುತ್ತಾರೆ. ಒಬ್ಬ ಶಿಕ್ಷಕರಿಗೆ ಮಾತ್ರ ಪೋಷಕರಂತೆ ಪ್ರೀತಿಸಲು ಮತ್ತು ಕಾಳಜಿ ವಹಿಸಲು ಸಾಧ್ಯವಾಗುತ್ತದೆ.

ಇಂದು ಸೆಪ್ಟೆಂಬರ್ 5. ನಮಗೆ ಅಕ್ಷರ ಕಲಿಸಿದ ಗುರುಗಳ ದಿನಾಚರಣೆ. ಬಾಲ್ಯದಲ್ಲಿ ನಮ್ಮನ್ನು ಸ್ವೀಕರಿಸಿದ ಮತ್ತು ನಮ್ಮನ್ನು ಎರಡೂ ತೋಳುಗಳಿಂದ ಶಾಲೆಗೆ ಸ್ವಾಗತಿಸಿದ, ನಮ್ಮ ಸ್ವಂತ ಮನೆಯಂತೆ ನಮ್ಮನ್ನು ಹಾಯಾಗಿರಿಸಿದ, ನಮ್ಮ ಹೆತ್ತವರಂತೆ ನಮ್ಮನ್ನು ಪ್ರೀತಿಸಿದ ಮತ್ತು ಕಾಳಜಿ ತೋರಿದ ಹಿರಿದಾದ ವ್ಯಕ್ತಿತ್ವ ನಮ್ಮ ಶಿಕ್ಷಕರದ್ದು. ನಮ್ಮ ಸಮಾಜದ ಪ್ರತಿಯೊಬ್ಬರು ಒಳ್ಳೆಯ ಮತ್ತು ಮೆಚ್ಚಿನ ಶಿಕ್ಷಕರನ್ನು ಹೊಂದಿದ್ದಾರೆ. ನಮ್ಮ ಗುರುಗಳು ನಮಗೆ ತುಂಬಾ ವಿಶೇಷವಾಗುವುದು ಅವರ ಬೋಧನೆಗಳಿಂದ ಮಾತ್ರವಲ್ಲ, ಅವರ ಗುಣಗಳು ನಮ್ಮ ಹೃದಯವನ್ನು ವಶಪಡಿಸಿಕೊಂಡ ಅವರ ಅನನ್ಯತೆಯಿಂದ. ಪ್ರತಿಯೊಬ್ಬರ ಜೀವನದಲ್ಲಿನ ಸರಿ ಮತ್ತು ತಪ್ಪುಗಳ ನಡುವೆ ವ್ಯತ್ಯಾಸವನ್ನು ಗುರುತಿಸಲು ನೆರವಾದ ನಮ್ಮ ಶಿಕ್ಷಕರನ್ನು ಸದಾ ನೆನೆದು ಗೌರವಿಸುವುದು ನಮ್ಮ ಹೆಮ್ಮೆ ಹಾಗೂ ಕರ್ತವ್ಯ.

ಸರ್ಕಾರ ಪ್ರತಿ ವರ್ಷ ತಮ್ಮ ದುಡಿಮೆಯುದ್ದಕ್ಕೂ ಉತ್ತಮವಾಗಿ ಕಾರ್ಯನಿರ್ವಹಿಸಿದ ಶಿಕ್ಷಕರಿಗೆ ಶಿಕ್ಷಕರ ದಿನಾಚರಣೆಯಂದು ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಕೊಟ್ಟು ಸಾಂಪ್ರದಾಯಿಕವಾಗಿ ಕಾರ್ಯಕ್ರಮವನ್ನು ಮಾಡಿ ಮುಗಿಸುತ್ತದೆ. ಆದರೆ ಇತ್ತೀಚೆಗೆ ಶಿಕ್ಷಕರು ತಮ್ಮ ವೃತ್ತಿ ಬದುಕಿನಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಶಾಲೆಗಳಲ್ಲಿ ಮೂಲಭೂತ ಅವಶ್ಯಕತೆಗಳ ಕೊರತೆ, ತಾನು ಪಡೆದಿರುವ ಪದವಿಗೆ ತಕ್ಕಂತೆ ಸೂಕ್ತ ಸ್ಥಾನಮಾನ ದೊರೆಯದಿರುವುದು, ಹಿಂಬಡ್ತಿ ಹಾಗೂ ಮುಂಬಡ್ತಿ ಸಮಸ್ಯೆಗಳು, ಮುಂಬಡ್ತಿ ಪಡೆದವರು ಕಾಲಮಿತಿ ವೇತನದಿಂದ ವಂಚಿತರಾಗುತ್ತಿರುವುದು. ಹೀಗೆ ನಾನಾ ರೀತಿಯ ಸಮಸ್ಯೆಗಳ ಸುಳಿಯಲ್ಲಿ ತಮ್ಮ ವೃತ್ತಿಯನ್ನು ಮುಂದುವರಿಸಿದ್ದಾರೆ. ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಪಾಠ ಬೋಧಿಸುವ ಶಿಕ್ಷಕರು ತಮ್ಮ ತರಗತಿಯಲ್ಲಿ ಉತ್ತಮ ಕಲಿಕೆಯ ವಾತಾವರಣ ಸೃಷ್ಟಿಸಲು ಕಷ್ಟಸಾಧ್ಯವಾಗುತ್ತದೆ. ಹೀಗಾಗಿ ಸರ್ಕಾರ ಶಿಕ್ಷಕರನ್ನು ಶಿಕ್ಷಕ ದಿನಾಚರಣೆಯಂದು ಗೌರವಿಸಿ ಪ್ರಶಸ್ತಿ ನೀಡಿದರಷ್ಟೇ ಸಾಲದು. ಅವರ ವೃತ್ತಿ ಬದುಕಿನಲ್ಲಿ ಎದುರಾಗುತ್ತಿರುವ ಸಮಸ್ಯೆಗಳತ್ತ ಗಮನಹರಿಸಿ ಅವುಗಳನ್ನು ಈಡೇರಿಸುವತ್ತ ಪ್ರಾಮಾಣಿಕ ಪ್ರಯತ್ನ ಮಾಡಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ನ್ಯಾಯಮೂರ್ತಿ ನಾಗಪ್ರಸನ್ನರ ಕನ್ನಡ ಪ್ರೇಮ ಅನುಕರಣೀಯ

ಮಾನ್ಯರೆ,

ತಮ್ಮ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ಆದೇಶವನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯ ಹೈಕೋರ್ಟ್‌ನಲ್ಲಿ ಹೂಡಿರುವ ರಿಟ್ ಅರ್ಜಿಯ ವಿಚಾರಣೆ ನಡೆಸುತ್ತಿರುವ ಗೌರವಾನ್ವಿತ ನ್ಯಾಯಮೂರ್ತಿ ನಾಗಪ್ರಸನ್ನ ಅವರು ವಿಚಾರಣೆಯ ವೇಳೆ ಕನ್ನಡ ಭಾಷೆಯನ್ನು ಬಳಸುತ್ತಿರುವುದು ಶ್ಲಾಘನೀಯವಾಗಿದೆ. ವಾದಿ ಮತ್ತು ಪ್ರತಿವಾದಿಗಳ ಪೈಕಿ ಕೆಲ ವಕೀಲರು ಆಂಗ್ಲ ಭಾಷೆಯಲ್ಲಿ ವಾದವನ್ನು ಮಂಡಿಸುತ್ತಿದ್ದರೂ ಸಹ ಗೌರವಾನ್ವಿತ ನ್ಯಾಯಮೂರ್ತಿಗಳು ಅವರಿಗೆ ಕನ್ನಡದಲ್ಲೇ ಸೂಚನೆಗಳನ್ನು ನೀಡುತ್ತಿದ್ದುದು ವಿಚಾರಣೆಯ ವೇಳೆ ಕಂಡು ಬಂದಿತು. ಇಂತಹ ಭಾಷಾ ಪ್ರೇಮವನ್ನು ಹೊಂದಿರುವ ನ್ಯಾಯಮೂರ್ತಿಗಳ ಅಗತ್ಯ ರಾಜ್ಯಕ್ಕಿದೆ. ಇದೀಗ ಇಡೀ ದೇಶವೇ ಗೌರವಾನ್ವಿತ ನ್ಯಾಯಮೂರ್ತಿ ನಾಗಪ್ರಸನ್ನ ನೀಡುವ ತೀರ್ಪನ್ನೇ ಕಾತುರದಿಂದ ಕಾಯುತ್ತಿದೆ. ಗೌರವಾನ್ವಿತ ನ್ಯಾಯಮೂರ್ತಿ ನಾಗಪ್ರಸನ್ನ ಅವರಿಗೆ ಹಾರ್ದಿಕ ಅಭಿನಂದನೆಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಆದರ್ಶ ಶಿಕ್ಷಕರು ಸರ್ವಪಲ್ಲಿ ಡಾ.ರಾಧಾಕೃಷ್ಣನ್

'ಡಾ.ರಾಧಾಕೃಷ್ಣನ್ ಅವರು ಯಾವ ವಿಷಯ ಉಪನ್ಯಾಸ ಮಾಡಲಿ ಅದೊಂದು ಅಮೃತಧಾರೆ. ಅವರಂತೆ ಸಮಸ್ಯೆಯ ಹೃದಯಕ್ಕೆ ನೇರವಾಗಿ ನುಗ್ಗಿ ವಿಚಾರ ಪುಷ್ಪವನ್ನು ಅರಳಿಸುವ ಶಕ್ತಿಯುಳ್ಳವರು ಅಪರೂಪ. ರಾಧಾಕೃಷ್ಣನ್ ಕೇವಲ ಉಪನ್ಯಾಸಕರಲ್ಲ ಐಂದ್ರಜಾಲಿಕರು....'

–ಪ್ರೊ.ಎ.ಎನ್.ಮೂರ್ತಿರಾವ್



ಸರ್ವಪಲ್ಲಿ ಡಾ.ರಾಧಾಕೃಷ್ಣನ್

ಜಗತ್ತಿನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಇರುವಷ್ಟು ಮಹತ್ವ ಬೇರೆ ಯಾವುದೇ ಕ್ಷೇತ್ರಗಳಿಗೂ ಇಲ್ಲ. ಏಕೆಂದರೆ ಎಲ್ಲಾ ಕ್ಷೇತ್ರಗಳಿಗೂ ಗುರು ಶಿಕ್ಷಣ ಕ್ಷೇತ್ರವೇ. ಶಿಕ್ಷಣ ಮೊದಲು ನಂತರ ಮಿಕ್ಕಿದ್ದೆಲ್ಲ. ಹಾಗೆಯೇ ಶಿಕ್ಷಕ ವೃತ್ತಿಗಿರುವಷ್ಟು ಗೌರವ, ಘನತೆ, ನೆಲೆ, ಬೆಲೆ ಬೇರಾವ ವೃತ್ತಿಗಳಿಗೂ ಇಲ್ಲ. ಎಲ್ಲಾ ವೃತ್ತಿಗಳ ಸೃಷ್ಟಿಗೂ, ಎಲ್ಲಾ ಕ್ಷೇತ್ರಗಳ ನಿರ್ಮಾಣಕ್ಕೂ ಶಿಕ್ಷಕರೇ ಕಾರಣರು. ಇಂಥ ಪವಿತ್ರವಾದ ಶ್ರೇಷ್ಠಾತಿಶ್ರೇಷ್ಠ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಣದ ಮೂಲಕ ನವ ಭಾರತವನ್ನು ಕಟ್ಟಿ ಸಹಸ್ರ ಸಹಸ್ರ ಶ್ರೇಷ್ಠ ಶಿಕ್ಷಕರು ಇತರರಿಗೆ ಮಾದರಿಯಾಗಿ ದೇಶದಲ್ಲಿ ಆಗಿಹೋಗಿದ್ದಾರೆ. ಅಂತಹವರ ಸಾಲಿನಲ್ಲಿ ಎದ್ದು ಕಾಣುವ ಹೆಸರು ಭಾರತರತ್ನ ಸರ್ವಪಲ್ಲಿ ರಾಧಾಕೃಷ್ಣನ್!

ಅದು ಸ್ವಾತಂತ್ರ್ಯಪೂರ್ವದ ಕಾಲ. ಆಗಲೇ ಪ್ರಸಿದ್ಧಿಯ ಶಿಖರ ಕಂಡಿತ್ತು ಮೈಸೂರಿನ ಮಹಾರಾಜ ಕಾಲೇಜು. ಆಗ ಅಲ್ಲಿ ಅಷ್ಟೇ ಪ್ರಸಿದ್ಧಿ ಗಳಿಸಿದ್ದ ಆದರ್ಶ ಶಿಕ್ಷಕರೊಬ್ಬರಿದ್ದರು. ತಮ್ಮ ಮಹಾನ್ ಪ್ರತಿಭೆ, ಪಾಂಡಿತ್ಯ, ವಿನಯ, ವಿದ್ವತ್ತು, ಸರಳತೆ, ಸಜ್ಜನಿಕೆ, ಪ್ರಾಮಾಣಿಕತೆ, ಸಹೃದಯತೆಗಳ ಮೆಟೀರಿಯಲ್‌ಗಳಿಂದಲೇ ಅವರು ತಮ್ಮದೇ ಆದ ಬೃಹತ್ ಶಿಷ್ಯ ಕೋಟಿಯನ್ನು ಕಟ್ಟಿಬಿಟ್ಟಿದ್ದರು. ಅದು ಅಂತಿಂಥಾ ಶಿಷ್ಯ ಕೋಟಿಯಲ್ಲ, 'ಸಿಡಿಲಿಗೂ ಬೆಚ್ಚದ ಉಕ್ಕಿನ ಕೋಟೆ' ಅಂಥಾರಲ್ಲ ಅಂಥಾದ್ದು. ಏಕೆಂದರೆ, ಅವರಲ್ಲಿ ಕಲಿತ ವಿದ್ಯೆ ಅಷ್ಟು ಗಟ್ಟಿಮುಟ್ಟಾದದ್ದು. ಇಂಥ ಉತ್ತಮೋತ್ತಮ ಶಿಕ್ಷಕ ಅರ್ಥಾತ್ ಶ್ರೇಷ್ಠಗುರು ಯಾರಿಗೆ ತಾನೆ ಇಷ್ಟವಾಗಲ್ಲ? ಹಾಗಾಗಿ ಅವರ ಸುತ್ತ ಯಾವಾಗಲೂ ಸುಮಧುರ ಹೂವಿಗೆ ಮುತ್ತುವ ಜೇನ್ನೊಣಗಳಂತೆ ಶಿಷ್ಯರು ತುಂಬಿರುತ್ತಿದ್ದರು. ಆಶ್ಚರ್ಯವೆಂದರೆ ಶಿಷ್ಯರಿಗಷ್ಟೇ ಅಲ್ಲದೆ ಸಹೋದ್ಯೋಗಿಗಳಿಗೂ ಅವರು ಅಷ್ಟೇ ಆಪ್ತರಾಗಿದ್ದರು.

ಇಂಥ ಶಿಕ್ಷಕರಿಗೆ ಇದ್ದಕ್ಕಿದ್ದಂತೆಯೇ 1921ರಲ್ಲಿ ಕೊಲ್ಕತ್ತ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿ ಬರುವಂತೆ ನೇಮಕಾತಿ ಪತ್ರ ಕೈ ಸೇರಿತು. ಸುದ್ದಿ ತಿಳಿದ ಶಿಷ್ಯಕೋಟಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಇಂಥ ತಮ್ಮ ಮನ ಸೆಳೆದ ಗುರು ಕೊಲ್ಕತ್ತಗೆ ಹೊರಟು ಬಿಡುತ್ತಾರಲ್ಲ ಎಂಬ ದುಃಖ ಅವರನ್ನು ಆವರಿಸಿತು. ಆದರೇನಂತೆ ಮೆಚ್ಚಿನ ಗುರು ಕೊಲ್ಕತ್ತಾಗೆ ಹೊರಡುವ ದಿನ ಬಂದೇ ಬಿಟ್ಟಿತು. ಆದರೆ ಅವತ್ತು ತಮ್ಮ ದುಃಖವನ್ನೆಲ್ಲಾ ಅದುಮಿಟ್ಟುಕೊಂಡು ತಮ್ಮ ಅಚ್ಚುಮೆಚ್ಚಿನ ಗುರುವನ್ನು ಆ ಶಿಷ್ಯಕೋಟಿ ಬೀಳ್ಕೊಟ್ಟ ಪರಿ ಇದೆಯಲ್ಲ ವ್ಹಾಹ್ ಅದ್ಭುತವಾದದ್ದು! ಜಗತ್ತಿನ ಯಾವ ದೇಶದ ಸರ್ವಾಧಿಕಾರಿ, ಮಹಾರಾಜ, ಸಾರ್ವಭೌಮ, ಚಕ್ರವರ್ತಿಗೂ ಸಿಗಲಾರದಂಥಾದ್ದು!

ಅಲ್ಲಿ ಅನಗತ್ಯವಾದ ವೈಭವ– ವೈಭೋಗಗಳಿರಲಿಲ್ಲ. ಢಂಬಾಚಾರ–ಬೂಟಾಟಿಕೆಯ ದರ್ಶನವಿರಲಿಲ್ಲ. ಅಲ್ಲಿದ್ದಿದ್ದು ಬರೀ ಗುರುಭಕ್ತಿ ಮಾತ್ರ. ಅದಕ್ಕೆ ಒಂದಿನಿತೂ ಕಲ್ಮಶವಿರಲಿಲ್ಲ. ಯಾರ ನೇತೃತ್ವ, ಗುಂಪುಗಾರಿಕೆ, ಒತ್ತಾಯವಿಲ್ಲದೆ ತನ್ನಂತಾನೆ ಪರಿಶುದ್ಧ ಹಾಲ ನದಿಯಾಗಿ ಗುರು ಪ್ರೇಮವೆಂಬುದು ಶಿಷ್ಯರ ಎದೆಗಡಲು ತುಂಬಿ ಹರಿದಿತ್ತು. ಅದನ್ನು ಮೈಸೂರು ಸಾಕ್ಷೀಕರಿಸಿ ಇತಿಹಾಸದ ಪುಟಗಳಲ್ಲಿ ದಾಖಲಿಸಿತ್ತು. ಅವತ್ತು ಶಿಷ್ಯರೆಲ್ಲರೂ ಸೇರಿ ಅಲಂಕರಿಸಿ ತಂದಿದ್ದ ಟಾಂಗಾ ಗಾಡಿಯಲ್ಲಿ ಅಕ್ಷರಶಃ 'ಗುರುದೇವೋ ಮಹೇಶ್ವರ' ಎಂಬಂತೆ ತಮ್ಮ ಗುರುದೇವನನ್ನು ಕೂರಿಸಿದ್ದರು. ಆದರೆ ಟಾಂಗಾ ಗಾಡಿ ಎಳೆಯಲು ಕುದುರೆಗೆ ಅವಕಾಶ ಕೊಡದೆ ಶಿಷ್ಯರೇ ಹೆಗಲು ಕೊಟ್ಟು ಲಕ್ಷ್ಮೀಪುರಂನಲ್ಲಿದ್ದ ತಮ್ಮ ಗುರುವಿನ ಮನೆಯಿಂದ ರೈಲ್ವೆ ನಿಲ್ದಾಣದವರೆಗೂ ಟಾಂಗಾ ಗಾಡಿಯನ್ನು ಎಳೆದು ನಡೆದಿದ್ದರು. ಗುರುವಿಗೆ ಜೈಕಾರ ಹಾಕುತ್ತಾ ಸಾಗರದಂತೆ ವಿವಿಧ ಕಡೆಗಳಿಂದ ಹರಿದುಬಂದ ಶಿಷ್ಯ ಕೋಟಿಯ ಮಹಾ ಪ್ರವಾಹದಿಂದ ಅಂದು ಇಡೀ ರಸ್ತೆ ತುಂಬಿ ತುಳುಕಿತ್ತು. ಅಷ್ಟೇ ಅಲ್ಲ, ಆ ಒಂದು ಕ್ಷಣ ಗುರು–ಶಿಷ್ಯರ ಇಂಥ ಬಾಂಧವ್ಯ ಕಂಡು ಇಡೀ ಮೈಸೂರು ಸಂಭ್ರಮಗೊಂಡು 'ವಾಹ್ಹ್ ಎಂಥಾ ಗುರು? ಎಂಥಾ ಶಿಷ್ಯರು!' ಎಂದು ಉದ್ಗರಿಸಿತ್ತು. ಇತ್ತ ಶಿಷ್ಯರಿಂದ ಗುರು ಮೆರವಣಿಗೆ ಸಾಗಿ ಬರುತ್ತಿದ್ದರೆ ಅತ್ತ ಒಂದು ಗುಂಪು ಮೊದಲೇ ಹೋಗಿ ತಮ್ಮ ಗುರು ಕುಳಿತುಕೊಳ್ಳುವ ರೈಲ್ವೆ ಕಂಪಾರ್ಟ್‌ಮೆಂಟನ್ನು ಚೆಂದವಾಗಿ ಸಿಂಗರಿಸಿತ್ತು. ಅಲ್ಲಿ ಕುಳಿತ ಆ ಗುರುದೇವನನ್ನು ಹೊತ್ತ ರೈಲು ಮೈಸೂರು ನಿಲ್ದಾಣವನ್ನು ಬಿಡುವಾಗ ರೈಲಿನ ವೇಗದಂತೆಯೇ ಗುರು–ಶಿಷ್ಯರ ಅಗಲಿಕೆಯ ದುಃಖವೂ ಹೆಚ್ಚಾಗಿತ್ತು.

ವಿಶೇಷವಾಗಿ ಇಂಥ ಶಿಷ್ಯೋತ್ತಮರನ್ನು ಪಡೆದ ನಾನೇ ಧನ್ಯನೆಂಬ ಸಾರ್ಥಕ ಭಾವ ಅವತ್ತು ಆ ಗುರುವನ್ನು ಆವರಿಸಿ ಕಣ್ತುಂಬಿ ತುಳುಕಿತ್ತು.

ತಮ್ಮ ಶಿಷ್ಯಕೋಟಿಯಿಂದ ಇಂಥ ಬೀಳ್ಕೊಡುಗೆಯ ಮಹಾಗೌರವ ಪಡೆದ ಅಂಥ ಆದರ್ಶ ಶಿಕ್ಷಕರು ಬೇರಾರೂ ಅಲ್ಲ. ಅವರೇ ಡಾ. ಸರ್ವಪಲ್ಲಿ ರಾಧಾಕೃಷ್ಣನ್. ದೇಶದ ಉಪರಾಷ್ಟ್ರಪತಿ, ರಾಷ್ಟ್ರಪತಿ ಹುದ್ದೆಗೇರಿದರೂ ಅವರು ಮೈಸೂರಿನಲ್ಲಿ ತಮ್ಮ ಶಿಷ್ಯರು ಬೀಳ್ಕೊಟ್ಟ ಬೀಳ್ಕೊಡುಗೆಯ ಸಂದರ್ಭವನ್ನು ಆಗಾಗ್ಗೆ ನೆನೆದು 'ಆ ದಿನ ನನ್ನ ಶಿಷ್ಯರು ನನ್ನಲ್ಲಿ ತೋರಿದ ಪ್ರೀತಿಯನ್ನು ನೆನೆದರೆ ಈಗಲೂ ಕಣ್ಣೀರು ಉಕ್ಕುತ್ತದೆ' ಎಂದು ಭಾವುಕರಾಗುತ್ತಿದ್ದರಂತೆ.

ಆದರ್ಶ ಸಮಾಜದ ಕನಸುಗಳನ್ನು ಹೊತ್ತಿದ್ದ ಶಿಷ್ಯ ಪ್ರೀತಿಯ ರಾಧಾಕೃಷ್ಣನ್‌ರಂಥ ಶಿಕ್ಷಕರನ್ನು ನಾವಿಂದು ಕಾಣಲಾದೀತೆ? ಇಲ್ಲವೆಂದಲ್ಲ, ಕಾರ್ಗತ್ತಲಲ್ಲಿ ಕಾಣುವ ಬೆಳಕಿನ ಹನಿಗಳಂತೆ ಅಲ್ಲೊಬ್ಬರು, ಇಲ್ಲೊಬ್ಬರು ಸಿಗುತ್ತಾರಷ್ಟೆ. ಆದರೆ ಇಂಥ ಆದರ್ಶ ಶಿಕ್ಷಕರನ್ನು ಹೆಚ್ಚಿಸುವ ದಿಶೆಯಲ್ಲಿ ಶಿಕ್ಷಕರಷ್ಟೇ ಅಲ್ಲ ವಿದ್ಯಾರ್ಥಿಗಳೂ ಸೇರಿದಂತೆ ಪ್ರತಿಯೊಬ್ಬ ಪ್ರಜೆಯೂ ಪ್ರಾಮಾಣಿಕವಾಗಿ ಇಂದು ಚಿಂತಿಸಬೇಕಾಗಿದೆ. ಏಕೆಂದರೆ ಒಂದು ನಾಡಿನ ಸಂಸ್ಕೃತಿಯನ್ನು ಸಂವೃದ್ಧಿಗೊಳಿಸುವಲ್ಲಿ ಅಲ್ಲಿನ ಗುರು–ಶಿಷ್ಯ ಪರಂಪರೆಯ

> “ ಆದರ್ಶ ಸಮಾಜದ ಕನಸುಗಳನ್ನು ಹೊತ್ತಿದ್ದ ಶಿಷ್ಯ ಪ್ರೀತಿಯ ರಾಧಾಕೃಷ್ಣನ್‌ರಂಥ ಶಿಕ್ಷಕರನ್ನು ನಾವಿಂದು ಕಾಣಲಾದೀತೆ? ಇಲ್ಲವೆಂದಲ್ಲ, ಕಾರ್ಗತ್ತಲಲ್ಲಿ ಕಾಣುವ ಬೆಳಕಿನ ಹನಿಗಳಂತೆ ಅಲ್ಲೊಬ್ಬರು, ಇಲ್ಲೊಬ್ಬರು ಸಿಗುತ್ತಾರಷ್ಟೆ. ಆದರೆ ಇಂಥ ಆದರ್ಶ ಶಿಕ್ಷಕರನ್ನು ಹೆಚ್ಚಿಸುವ ದಿಶೆಯಲ್ಲಿ ಶಿಕ್ಷಕರಷ್ಟೇ ಅಲ್ಲ ವಿದ್ಯಾರ್ಥಿಗಳೂ ಸೇರಿದಂತೆ ಪ್ರತಿಯೊಬ್ಬ ಪ್ರಜೆಯೂ ಪ್ರಾಮಾಣಿಕವಾಗಿ ಇಂದು ಚಿಂತಿಸಬೇಕಾಗಿದೆ. ಏಕೆಂದರೆ ಒಂದು ನಾಡಿನ ಸಂಸ್ಕೃತಿಯನ್ನು ಸಂವೃದ್ಧಿಗೊಳಿಸುವಲ್ಲಿ ಅಲ್ಲಿನ ಗುರು–ಶಿಷ್ಯ ಪರಂಪರೆಯ ಪಾತ್ರ ಬಹು ದೊಡ್ಡದು. ಅದರಲ್ಲೂ ಗುರುವಿನ ಪಾತ್ರ ಬಹು ಮಹತ್ವದ್ದು.

ಇಂದು, ಭಾರತರತ್ನ ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮದಿನದ ಗೌರವಾರ್ಥ ಶಿಕ್ಷಕರ ದಿನಾಚರಣೆ. ತನ್ನಿಮಿತ್ತ ಈ ಲೇಖನ.

ಪಾತ್ರ ಬಹು ದೊಡ್ಡದು. ಅದರಲ್ಲೂ ಗುರುವಿನ ಪಾತ್ರ ಬಹು ಮಹತ್ವದ್ದು. ಇಂಥ ಶಿಕ್ಷಣ ಲೋಕದ ಧ್ರುವತಾರೆ ಗುರುವರ್ಯ ಡಾ.ಸರ್ವಪಲ್ಲಿ ರಾಧಾಕೃಷ್ಣನ್ 1888ರ ಸೆಪ್ಟೆಂಬರ್ 5ರಂದು ತಮಿಳುನಾಡಿನ ಚಿತ್ತೂರು ಜಿಲ್ಲೆಯ ತಿರುತ್ತಣಿ ಎಂಬ ಗ್ರಾಮದಲ್ಲಿ ಸಂಪ್ರದಾಯನಿಷ್ಠ ಸುಸಂಸ್ಕೃತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಂದೆ ಸರ್ವಪಲ್ಲಿ ವೀರಸ್ವಾಮಿ, ತಾಯಿ ಮಹಾಸಾಧ್ವಿ ಸೀತಮ್ಮ. ಈ ದಂಪತಿಯ ಆರು ಮಂದಿ ಮಕ್ಕಳಲ್ಲಿ ರಾಧಾಕೃಷ್ಣನ್ ಎರಡನೆಯವರು. ಇವರ ಪೂರ್ವಿಕರು ಮೂಲತಃ ಸರ್ವಪಲ್ಲಿಯವರಾಗಿದ್ದರು. ಹಾಗಾಗಿ ರಾಧಾಕೃಷ್ಣನ್ ಹೆಸರಿನ ಜೊತೆಯಲ್ಲಿ 'ಸರ್ವಪಲ್ಲಿ' ಎಂಬುದು ಸೇರಿಕೊಂಡಿತು. ಪ್ರಾಥಮಿಕ ಮತ್ತು ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಹುಟ್ಟಿದೂರಿನಲ್ಲೇ ಪೂರೈಸಿದ ಇವರು, ಕಾಲೇಜು ಶಿಕ್ಷಣಕ್ಕೆ ವೆಲ್ಲೂರಿಗೆ ಹೆಜ್ಜೆಯಿರಿಸಿದರು. ನಂತರ ತತ್ವಶಾಸ್ತ್ರ ವಿಷಯವನ್ನು ಆಯ್ಕೆ ಮಾಡಿ ಕೊಂಡು ಅಷ್ಟೇ ಆಸಕ್ತಿಯಿಂದ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕಲಿತರು. ಅಷ್ಟೇ ಅಲ್ಲ ತತ್ವಶಾಸ್ತ್ರದ ಬಗ್ಗೆ ಅಪಾರವಾದ ಪ್ರೀತಿ ಬೆಳೆಸಿಕೊಂಡರು. ಇನ್ನೂ ವಿದ್ಯಾರ್ಥಿಯಾಗಿ ಹದಿನೈದು ವರ್ಷದವರಾಗಿದ್ದಾಗಲೇ ಶಿವಕಾಮಿ ಅಮ್ಮಾಳ್ ಎಂಬುವವರೊಂದಿಗೆ ವಿವಾಹವಾದರು. ವಿದ್ಯಾಭ್ಯಾಸ ಮುಗಿದನಂತರ ಪ್ರತಿಷ್ಠಿತ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಏಳು ವರ್ಷಗಳ ಕಾಲ ಅಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿ ಅಲ್ಲಿ ವಿದ್ಯಾರ್ಥಿಗಳ ಮೆಚ್ಚಿನ ಗುರುವಾಗಿದ್ದರು. ಅಲ್ಲಿಂದ ಮುಂದುವರಿದು 1917ರಿಂದ ಒಂದು ವರ್ಷಕಾಲ ರಾಜಮಂಡ್ರಿಯಲ್ಲಿ ಅಧ್ಯಾಪಕರಾಗಿದ್ದ ರಾಧಾಕೃಷ್ಣನ್ ಅವರ ತತ್ವಜ್ಞಾನದ ಮಹಾಪಾಂಡಿತ್ಯವನ್ನು ಗುರುತಿಸಿ ಮೈಸೂರು ವಿಶ್ವವಿದ್ಯಾಲಯ ಅವರನ್ನು ಬಹು ಗೌರವಯುತವಾಗಿ ಆಹ್ವಾನಿಸಿ ತತ್ವಶಾಸ್ತ್ರ ಪೀಠದ ಅಧ್ಯಕ್ಷರನ್ನಾಗಿ ನೇಮಿಸಿತು.

1918ರಿಂದ 1921ರವರೆಗೆ ಮೈಸೂರು ಮಹಾರಾಜ ಕಾಲೇಜಿನ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ರಾಧಾಕೃಷ್ಣನ್ ಅವರು ಅಕ್ಷರಶಃ ವಿದ್ಯಾರ್ಥಿಗಳ ಪಾಲಿಗೆ ಗುರುಬ್ರಹ್ಮರಾಗಿದ್ದರು. ವಿದ್ಯಾರ್ಥಿಗಳ ಬಗ್ಗೆ ಅವರಿಗಿದ್ದ ಅವಿನಾಭಾವ ಸಂಬಂಧ, ಪ್ರೀತಿ, ವಾತ್ಸಲ್ಯ, ಕಾಳಜಿ, ಕಳಕಳಿಯ ಕಾರಣದಿಂದಾಗಿ ಪ್ರತಿಯೊಬ್ಬ ವಿದ್ಯಾರ್ಥಿಯ ಹೃದಯ ಮಂದಿರದಲ್ಲಿ ನೆಲೆಸಿಬಿಟ್ಟಿದ್ದರು. ಇದರ ಪ್ರತಿಫಲವೆಂಬಂತೆ ರಾಧಾಕೃಷ್ಣನ್ ಅವರು 1921ರಲ್ಲಿ ಮೈಸೂರು ವಿಶ್ವವಿದ್ಯಾಲಯವನ್ನು ಬಿಟ್ಟು ಕೊಲ್ಕತ್ತ ವಿಶ್ವವಿದ್ಯಾಲಕ್ಕೆ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ತೆರಳಿದಾಗ ಇಡೀ ಮಹಾರಾಜ ಕಾಲೇಜು ಕಂಬನಿಯ ಸಾಗರವಾಗಿತ್ತು. ಇವತ್ತಿಗೂ ಈ ಘಟನೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಚಿರಸ್ಥಾಯಿಯಾಗಿದೆ. ಅಷ್ಟು ಮಾತ್ರವಲ್ಲ ರಾಜರೂರು ಮೈಸೂರಿನ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ.

ಶಿಕ್ಷಕನೆಂಬುವ ಹೇಗಿರಬೇಕೆಂಬುದಕ್ಕೆ ಬಹು ದೊಡ್ಡ ಉದಾಹರಣೆಯಾಗಿ ಉದಾತ್ತ ಧ್ಯೇಯದೊಡನೆ ಶಿಕ್ಷಕ ವೃತ್ತಿಯನ್ನು ಬಹಳ ಬಹಳವಾಗಿ ಗೌರವಿಸುತ್ತಾ ಭಾರತೀಯ ಶಿಕ್ಷಣ ಕ್ಷೇತ್ರಕ್ಕೊಂದು ಸಾರ್ಥಕವೆನಿಸುವ ಅರ್ಥಪೂರ್ಣ ಚೌಕಟ್ಟನ್ನು ನೀಡುವ ಮೂಲಕ ಶಿಕ್ಷಣ ಕ್ಷೇತ್ರದ ಸರ್ವತೋಮುಖ ಪ್ರಗತಿಗಾಗಿ ತಮ್ಮ ಜೀವನವನ್ನು ಮೀಸಲಿಟ್ಟಿದ್ದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಓರ್ವ ಶ್ರೇಷ್ಠ ಶಿಕ್ಷಕ ಹಾಗೂ ಶ್ರೇಷ್ಠ ಶಿಕ್ಷಣ ತಜ್ಞ ಮಾತ್ರ ಆಗಿರಲಿಲ್ಲ. ಅಪಾರ ಅನುಭವವುಳ್ಳ, ಅಸಾಧಾರಣ ಅಧ್ಯಯನವುಳ್ಳ ತತ್ವಜ್ಞಾನಿಯೂ ಆಗಿದ್ದರು. ಈ ದಿಸೆಯಲ್ಲಿ ಇವರು ರಚಿಸಿದ್ದ 'ದಿ ಎಥಿಕ್ಸ್ ಆಫ್ ವೇದಾಂತ' ಪ್ರಬಂಧ ಪುಸ್ತಕ ಮತ್ತು 'ಜಿನ್ಯೂನ್ ಮ್ಯಾನಿಫೆಸ್ಟೇಷನ್ ಆಫ್ ಇಂಡಿಯನ್ ಸ್ಪಿರಿಟ್' ಹಾಗೂ 'ದಿ ರೀಜನ್ ಆಫ್ ರಿಲಿಜಿಯನ್ ಇನ್ ಕಾಂಟೆಂಪರರಿ ಫಿಲಾಸಫಿ' ಮುಂತಾದ ಕೃತಿಗಳು ಮಹತ್ವವೆನಿಸಿದ್ದು ವಿಶ್ವ ಮನ್ನಣೆ ಗಳಿಸಿವೆ. ಯಾವುದೇ ವ್ಯಕ್ತಿ ಬಡವನಾಗಿ ಹುಟ್ಟಿರಲಿ, ಸಿರಿವಂತನಾಗಿ ಹುಟ್ಟಿರಲಿ ಸಾಧನೆಗೆ ಇದಾವುದೂ ಅಡ್ಡಿಯಾಗದು. ಗುರಿ ಸಾಧಿಸುವ ಛಲದ ಜೊತೆ ಇಚ್ಛಾಶಕ್ತಿ, ಕ್ರಿಯಾಶಕ್ತಿ ಹಾಗೂ ಜ್ಞಾನಶಕ್ತಿ ಇದ್ದರೆ ಎಂಥಾ ಅದ್ಭುತವನ್ನಾದರೂ ಸಾಧಿಸಬಹುದು ಎಂಬುದಕ್ಕೆ ರಾಧಾಕೃಷ್ಣನ್ ಅವರ ಜೀವನವೊಂದು ಮಹಾ ಪಠ್ಯವಾಗಿ ನಮ್ಮ ಮುಂದಿದೆ. ಪ್ರತಿಯೊಬ್ಬರೂ ಅದನ್ನು ಅರಿತು ನಡೆಯಬೇಕಷ್ಟೆ.

1951ರಲ್ಲಿ ದೇಶದ ಮೊದಲ ಉಪರಾಷ್ಟ್ರಪತಿಯೂ ಆಗಿ 1962ರಲ್ಲಿ ರಾಷ್ಟ್ರಪತಿಯಾಗಿ ರಾಧಾಕೃಷ್ಣನ್ ಅವರು ಆಯ್ಕೆಯಾದ ಹಿನ್ನೆಲೆಯಲ್ಲಿ ಅವರ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸಲು ಅವರ ಶಿಷ್ಯಕೋಟಿ ಬಯಸಿತು. ಆದರೆ ಆಗ ರಾಧಾಕೃಷ್ಣರು ಶಿಕ್ಷಕ ಮತ್ತು ಶಿಕ್ಷಣ ಕ್ಷೇತ್ರದ ಮೇಲೆ ತಮಗಿದ್ದ ಅಭಿಮಾನದಿಂದ ತಮ್ಮ ಹುಟ್ಟುಹಬ್ಬವನ್ನು ಶಿಕ್ಷಕರ ದಿನವನ್ನಾಗಿ ಆಚರಿಸುವಂತೆ ಸಲಹೆ ನೀಡಿದರು. ಅದರಂತೆ ಅಂದಿನಿಂದ ಪ್ರತಿವರ್ಷ ಸೆಪ್ಟೆಂಬರ್ 5ರಂದು ಶಿಕ್ಷಕರ ದಿನಾಚರಣೆ ಆಚರಿಸಲಾಗುತ್ತಿದೆ. ರಾಧಾಕೃಷ್ಣನ್ ರಾಷ್ಟ್ರಪತಿಗಳಾದರೂ ಶಿಕ್ಷಕರಾಗಿಯೇ ರಾರಾಜಿಸಿದವರು.


ತತ್ವಜ್ಞಾನದ ಹಿನ್ನೆಲೆಯಲ್ಲಿ ತಮ್ಮ ವ್ಯಕ್ತಿತ್ವವನ್ನು ಊರ್ಧ್ವಮುಖಿಯಾಗಿ ಬೆಳೆಸಿಕೊಳ್ಳುತ್ತಾ ಹೋದ ರಾಧಾಕೃಷ್ಣನ್ 1951ರಲ್ಲಿ ಭಾರತದ ಉಪ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದರು. 1962ರವರೆಗೆ ಸ್ವತಂತ್ರ ಭಾರತದ ಉಪರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ ಇವರು 1962ರಿಂದ 1967ರ ತನಕ ಭಾರತದ ಎರಡನೆ ರಾಷ್ಟ್ರಪತಿಯಾಗಿ ಓರ್ವ ಶಿಕ್ಷಕರಾಗಿ ಚರಿತ್ರೆ ಬರೆದರು. ತಮ್ಮ ದಕ್ಷ ಆಡಳಿತದಿಂದ ದೇಶದ ಹೆಮ್ಮೆಯಾದರು. ಡಾ.ರಾಧಾಕೃಷ್ಣನ್ ಅವರು ದೇಶಕ್ಕೆ ಸಲ್ಲಿಸಿದ ಸೇವೆಗಾಗಿ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ "ಭಾರತ ರತ್ನ"ಕ್ಕೆ 1954ರಲ್ಲಿ ಭಾಜನರಾದರು. 87 ವಸಂತಗಳ ಸಾರ್ಥಕ ಬದುಕನ್ನು ಕಂಡ ಭಾರತರತ್ನ ಡಾ.ಎಸ್. ರಾಧಾಕೃಷ್ಣನ್ ಅವರು 1975ರ ಏಪ್ರಿಲ್ 17ರಂದು ಇಹಲೋಕಕ್ಕೆ ವಿದಾಯ ಹೇಳಿದರು.

ಕಾಂಗ್ರೆಸ್ ಎಂದರೆ ಅಧಿಕಾರಕ್ಕೇ ಇರುವಂತಹ ಪಕ್ಷವಾಗಿದೆ

- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವ್ಯಂಗ್ಯ
- ಅಧಿಕಾರ ಇಲ್ಲದೆ ಬದುಕಲು ಕಾಂಗ್ರೆಸ್‌ಗೆ ಸಾಧ್ಯವೇ ಇಲ್ಲ
- ಬಿಜೆಪಿ ಸೇವೆ ಸಂಘಟನೆ

ಬೆಂಗಳೂರು ಸೆ.4(ಕೆಎಂಶಿ)– ಕಾಂಗ್ರೆಸ್ ಎಂದರೆ ಅಧಿಕಾರದಿಂದ ಅಧಿಕಾರಕ್ಕೋಸ್ಕರ ಇರುವ ಪಕ್ಷ. ಅಧಿಕಾರ ಇಲ್ಲವೆಂದರೆ ಆ ಪಕ್ಷದವರು ನೀರಿನಿಂದ ಹೊರಗೆ ಬಿದ್ದ ಮೀನಿನ ಪರಿಸ್ಥಿತಿ ಹೊಂದಿರುತ್ತಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ತಾವೂ ಸದಸ್ಯತ್ವ ಪಡೆದು ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಧಿಕಾರ ಇಲ್ಲದೆ ಬದುಕಲು ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವೇ ಇಲ್ಲ ಎಂದು ನುಡಿದರು.



ಬೆಂಗಳೂರಿನ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸದಸ್ಯತ್ವ ಅಭಿಯಾನಕ್ಕೆ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಬುಧವಾರ ಚಾಲನೆ ನೀಡಿದರು.

ಮತ್ತೊಂದು ಕಡೆ ಬಿಜೆಪಿ ಸೇವೆಯೇ ಸಂಘಟನೆ ಎಂಬ ಶ್ರೇಷ್ಠ ಭಾವನೆಯಿಂದ ದೇಶ ಮೊದಲು, ನಂತರ ಪಕ್ಷ ಎಂಬ ಉತ್ತಮ ಸಿದ್ಧಾಂತ ಹೊಂದಿದೆ. ಕೋವಿಡ್ ದಿನಗಳಲ್ಲಿ ದೇಶದ ಇತರ ರಾಜಕೀಯ ಪಕ್ಷದವರು ಮನೆಯಲ್ಲಿ ಕೂತಿದ್ದರು. ಆದರೆ, ನಮ್ಮ ಪಕ್ಷವು ದೇಶದ ಲಕ್ಷಾಂತರ ಜನರ ಸಂಕಷ್ಟಕ್ಕೆ ಸ್ಪಂದಿಸಿತ್ತು. ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ಸೇರಿ, ಮುಖಂಡರು, ಕಾರ್ಯಕರ್ತರು ಆಹಾರದ ಕಿಟ್ ನೀಡುವುದು ಮಾತ್ರವಲ್ಲದೆ ಇಡೀ ರಾಜ್ಯದಲ್ಲಿ ಉಚಿತ ಔಷಧಿ, ಮಾತ್ರೆ ಕೊಡುವ ಕೆಲಸ ಮಾಡಿದ್ದರು ಎಂದು ನೆನಪಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಮೊನ್ನೆ ಈ ಅಭಿಯಾನಕ್ಕೆ ಚಾಲನೆ ಕೊಟ್ಟಿದ್ದಾರೆ. ಅರ್ಥಪೂರ್ಣ ಅಭಿಯಾನ ನಡೆಸಬೇಕೆಂದು ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅಪೇಕ್ಷೆ ಇದೆ. ಬಿಜೆಪಿ ಕೇವಲ ರಾಜಕೀಯ ಪಕ್ಷವಲ್ಲ. ಬಿಜೆಪಿ ಸರ್ವಸ್ಪರ್ಶಿ–ಸರ್ವವ್ಯಾಪಿ ಎಂದು ಹೇಳಿದರು.

ಕರ್ನಾಟಕ ರಾಜ್ಯ ಸಹ–ಉಸ್ತುವಾರಿ ಸುಧಾಕರ ರೆಡ್ಡಿ ಮಾತನಾಡಿ, ಇಲ್ಲಿ ಹಬ್ಬದ ವಾತಾವರಣ ಇದೆ. ಇದಕ್ಕಾಗಿ ವಿಜಯೇಂದ್ರ ಮತ್ತು ಅವರ ತಂಡಕ್ಕೆ ಅಭಿನಂದನೆಗಳು. ಗುರಿ ಮೀರಿ ಸಾಧನೆ ಮಾಡಿ. ನಮ್ಮದು ಸೇವೆ, ನಿಷ್ಠೆಯೊಂದಿಗೆ ದೇಶ ಹಿತದ ಪಕ್ಷ. ಕಾಂಗ್ರೆಸ್ಸಿನದು ಕುಟುಂಬದ ಪಕ್ಷ ಎಂದು ಟೀಕಿಸಿದರು.

ಕಾಂಗ್ರೆಸ್, ಕುಟುಂಬ ಮೊದಲು, ದೇಶ ಕೊನೆಯಲ್ಲಿ ಎಂಬ ಧ್ಯೇಯ ಹೊಂದಿದೆ. ಕಾಂಗ್ರೆಸ್ ಪಕ್ಷವನ್ನು ವಿದೇಶೀಯರು ಸ್ಥಾಪಿಸಿದರೆ, ನಮ್ಮದು ಭಾರತೀಯರೇ ಸ್ಥಾಪಿಸಿದ ಪಕ್ಷ. ಕಾಂಗ್ರೆಸ್‌ನದು ಬೆಲೆ ಏರಿಸುವ, ಬೇಜವಾಬ್ದಾರಿ, ಹಗರಣಗಳ ಸರ್ಕಾರ. ಖರ್ಗೆ, ಸಿದ್ದರಾಮಯ್ಯರು ಭ್ರಷ್ಟರು. ಮುಖ್ಯಮಂತ್ರಿಗೆ ಆ ಹುದ್ದೆಯಲ್ಲಿ ಮುಂದುವರೆಯುವ ಹಕ್ಕಿಲ್ಲ. ಅವರು ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.

> “ ಕಳೆದ ಬಾರಿ 1.04 ಕೋಟಿ ಸದಸ್ಯರ ನೋಂದಣಿ ಆಗಿತ್ತು. ಈ ಬಾರಿ ಇನ್ನೂ ಹೆಚ್ಚು ಸದಸ್ಯರನ್ನು ನೋಂದಣಿ ಮಾಡಲಾಗುವುದು. ಎಲ್ಲ ಜನಪ್ರತಿನಿಧಿಗಳು, ಕಾರ್ಯಕರ್ತರು ಭಾಗವಹಿಸುತ್ತಾರೆ. ಮುಂದಿನ 40–45 ದಿನಗಳ ಕಾಲ ಎರಡು ಹಂತಗಳ ಅಭಿಯಾನದಲ್ಲಿ ಭಾಗವಹಿಸೋಣ. **–ವಿಜಯೇಂದ್ರ**

ವಿರೋಧ' ಪಕ್ಷದ' ನಾಯಕ ಆರ್.ಅಶೋಕ್ ಮಾತನಾಡಿ, ಕಾಂಗ್ರೆಸ್ ಪಕ್ಷವು ಸದಸ್ಯತ್ವ ಆಧಾರದಲ್ಲಿ ಪಕ್ಷ ಬೆಳೆಸುವುದಿಲ್ಲ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ– ಅವರ ಕುಟುಂಬ ಇದೆಯೇ ಎಂಬುದು ಅವರಿಗೆ ಮಹತ್ವದ್ದು. ಒಂದೊಮ್ಮೆ ರಾಹುಲ್ ಗಾಂಧಿ ಅವರಿಗೆ ಬೇಸರವಾಗಿ ಇಟಲಿಗೆ ಹೋದರೆ ಆ ಪಕ್ಷ ಇರುವುದಿಲ್ಲ. ಅದು ಲೀಡರ್‌ಗಳ ಪಕ್ಷ. ನಮ್ಮದು ಕಾರ್ಯಕರ್ತರ ಪಕ್ಷ ಎಂದು ತಿಳಿಸಿದರು.

ಸದಸ್ಯತ್ವವನ್ನು ವಿಸ್ತೃತವಾಗಿ ಮಾಡಬೇಕಿದೆ. ಅದಕ್ಕಾಗಿ ಬೀದಿಗೆ ಇಳಿಯಬೇಕು ಎಂದು ಮನವಿ ಮಾಡಿದರು. ಕಾಂಗ್ರೆಸ್ ಪಕ್ಷವು ಹಣ ತಾವೇ ನೀಡಿ ಸದಸ್ಯರನ್ನು ಮಾಡುತ್ತದೆ. ಇಲ್ಲಿ ಹಾಗಿಲ್ಲ. ನಾವು ಸದಸ್ಯತ್ವಕ್ಕೆ ಶುಲ್ಕ ಇಟ್ಟಿಲ್ಲ. ಸಕ್ರಿಯ ಸದಸ್ಯರು 100 ರೂ. ಕೊಡಬೇಕಿದೆ. ಬಿಜೆಪಿಯ ಆಜೀವ ಕಾರ್ಯಕರ್ತರು ಮತ್ತು ಸದಸ್ಯರಲ್ಲಿದೆ ಎಂದು ಹೇಳಿದರು.

ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಸದಸ್ಯತ್ವ ನೋಂದಣಿ ಕಾರ್ಯವು ಹಬ್ಬದ ಮಾದರಿಯಲ್ಲಿ ನಡೆಯಲಿ. ರಾಜ್ಯದಲ್ಲಿ ನಾವು ಯಾವುದೇ ಸಂದರ್ಭದಲ್ಲೂ ಚುನಾವಣೆ ಎದುರಿಸುವ ಸ್ಥಿತಿ ಬರಬಹುದು. ಆದ್ದರಿಂದ ಪಕ್ಷವನ್ನು ಬಲಪಡಿಸಲು ಶ್ರಮಿಸೋಣ ಎಂದು ಅಭಿಪ್ರಾಯಪಟ್ಟರು.

ತಳಮುಖವಾಗಿ ಮೇಲಕ್ಕೆ ಬೆಳೆದ ಪಕ್ಷ ಬಿಜೆಪಿ. ಇದರ ಶಕ್ತಿ ನಾಯಕರಲ್ಲ. ಬಿಜೆಪಿ ಶಕ್ತಿ ಕಾರ್ಯಕರ್ತರ ರೂಪದಲ್ಲಿದೆ. ಸಮಾಜದ ಅನೇಕಾನೇಕ ಪ್ರಕೋಷ್ಠಗಳಲ್ಲಿ ಕೆಲಸ ಮಾಡುವವರೇ ಕಾರ್ಯಕರ್ತರು ಎಂದು ವಿಶ್ಲೇಷಿಸಿದರು.

1980ರಲ್ಲಿ ಶೇ.1 ಮತ ಪಡೆದರೆ ಖುಷಿಪಡುವ ಪಕ್ಷ ನಮ್ಮದಾಗಿತ್ತು. ಇದೀಗ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೇ ಅತೀ ಹೆಚ್ಚು ಸದಸ್ಯರನ್ನು ಹೊಂದಿದ ಪಕ್ಷ ಬಿಜೆಪಿ. ಹಿಂದೆ ದೇಶದಲ್ಲಿ 18 ಕೋಟಿ ಸದಸ್ಯರಿದ್ದು, ರಾಜ್ಯದಲ್ಲಿ 1.04 ಕೋಟಿ ಸದಸ್ಯರಿದ್ದರು. ವಿಜಯೇಂದ್ರ ಅವರು ಅಧ್ಯಕ್ಷರಾದ ಬಳಿಕ ನವಚೈತನ್ಯ ನಮ್ಮ ಪಕ್ಷಕ್ಕೆ ಲಭಿಸಿದೆ ಎಂದರು. ನಮ್ಮ ಶಕ್ತಿ ಈಗ ಏರುಮುಖವಾಗುತ್ತಿದೆ. ಕಾಂಗ್ರೆಸ್ ಪಕ್ಷದ ಆಡಳಿತವುಳ್ಳ ರಾಜ್ಯಗಳು ಇಳಿಮುಖವಾಗುತ್ತಿದೆ ಎಂದು ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಗುರುವಾರ 5 ಸೆಪ್ಟೆಂಬರ್ 2024

ಒಂದನೇ ಪುಟದಿಂದ

ಅಚ್ಚುಕಟ್ಟಾಗಿ ದಸರಾ ಆಚರಿಸೋಣ

ಹೆಣ್ಣು ಮಕ್ಕಳನ್ನು ಮನೆಯಿಂದ ಹೊರಗಿಡುವ ಅವಮಾನವೀಯ ಪದ್ಧತಿ ಇದೆ. ಈ ರೀತಿಯ ಮೌಢ್ಯ ವಿರೋಧಿಗೆ ಸಂಬಂಧಿಸಿದಂತೆ ಪರಿಣಾಮಕಾರಿ ಜಾಗೃತಿ ಮೂಡಿಸುವ ಸ್ತಬ್ಧಚಿತ್ರ ನಿರ್ಮಾಣ ಮಾಡಬೇಕು ಎಂದು ಸಲಹೆ ನೀಡಿದರು.

ಸ್ವಾಗತ, ಆಮಂತ್ರಣ ಮತ್ತು ಸ್ಥಳಾವಕಾಶ ಉಪ ಸಮಿತಿಯ ಉಪ ವಿಶೇಷಾಧಿಕಾರಿಯೂ ಆದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಮಾತನಾಡಿ, ಈ ಬಾರಿ ದಸರಾದಲ್ಲಿ ವಿಶೇಷ ಲೋಗೋ ತಯಾರು ಮಾಡಲಾಗುತ್ತಿದೆ. ಜೊತೆಗೆ ದಸರಾಗೆ ಸಂಬಂಧಿಸಿದಂತೆ ವಿಶೇಷ ಗೀತೆಯೊಂದನ್ನು ರಚಿಸಲಾಗುತ್ತಿದೆ ಎಂದು ಹೇಳಿದರು.

ಅಂಬಾರಿ ಆನೆ ಸ್ಮರಣಿಕೆ: ಈ ವೇಳೆ ಮಾತನಾಡಿದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪಾ, ಚಾಮುಂಡಿಬೆಟ್ಟದಲ್ಲಿ ನಡೆಯುವ ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ದಸರಾ ಉದ್ಘಾಟಕರಿಗೆ ಮರದ ಕೆತ್ತನೆಯ ಅಂಬಾರಿ ಆನೆಯ ವಿಶಿಷ್ಟ ಸ್ಮರಣಿಕೆ ನೀಡಲಾಗುವುದು ಎಂದು ಮಾಹಿತಿ ನೀಡಿ, ಅದರ ಮಾದರಿಯನ್ನು ಪ್ರದರ್ಶಿಸಿದರು.

ರೈತರಿಗೆ ಮಾಹಿತಿ: ರೈತ ದಸರಾ ಉಪ ಸಮಿತಿಯ ಉಪ ವಿಶೇಷಾಧಿಕಾರಿಯೂ ಆದ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣಂರಾಜು ಮಾತನಾಡಿ, ಈ ಬಾರಿಯ ರೈತ ದಸರಾದಲ್ಲಿ ನೂತನ ತಂತ್ರಜ್ಞಾನ ಆಧಾರಿತ ಬೆಳೆಗಳನ್ನು ಹೇಗೆ ಬೆಳೆಯ ಬಹುದು ಎಂಬ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ರೈತರಿಗೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

ವೈಜ್ಞಾನಿಕತೆ ಪರಿಚಯ: ಡ್ರೋನ್ ಮೂಲಕ ರಸಗೊಬ್ಬರ ಮತ್ತು ರಾಸಾಯನಿಕ ಸಿಂಪಡಣೆ, ಹೆಚ್ಚು ಮಾನವ ಬಳಕೆ ಇಲ್ಲದೆ ಸುಲಭ ಬೇಸಾಯ ಪದ್ಧತಿ ಸೇರಿದಂತೆ ಹಲವು ವಿಚಾರಗಳನ್ನು ಪ್ರಾತ್ಯಕ್ಷಿಕೆ ಮೂಲಕ ರೈತರಿಗೆ ವಿವರಿಸಲಾಗುವುದು ಎಂದರು. ಈ ವೇಳೆ ಮಾತನಾಡಿದ ಡಾ.ಮಹದೇವಪ್ಪ, ಕೇರಳದವರು ಕರ್ನಾಟಕಕ್ಕೆ ಬಂದು ಶುಂಠಿ ಬೆಳೆಯುತ್ತಿದ್ದಾರೆ. ಪರ್ಯಾಯ ಬೆಳೆ ಬೆಳೆಯದೆ ಶುಂಠಿ ಬೆಳೆಯನ್ನೆ ಮಾತ್ರ ಬೆಳೆದರೆ ಕೆಲವೇ ವರ್ಷದಲ್ಲಿ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತದೆ. ಇದರ ಪರಿಣಾಮ ಇಳುವರಿ ಕಡಿಮೆಯಾದಾಗ ಕೇರಳದವರು ಜಮೀನು ಬಿಟ್ಟು ಹೋಗುತ್ತಾರೆ. ತರುವಾಯ ಬೆಳೆ ಬೆಳೆಯಲು ಸಾಧ್ಯವಾಗದೆ ಸ್ಥಳೀಯ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ. ಈ ಹಿನ್ನೆಲೆಯಲ್ಲಿ ಪರ್ಯಾಯ ಬೆಳೆ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವಂತೆ ಸೂಚನೆ ನೀಡಿದರು.

ಆಹಾರ ಮೇಳದಲ್ಲಿ ಸ್ವಚ್ಛತೆ ಇರಲಿ: ದಸರಾ ಆಹಾರ ಮೇಳದಲ್ಲಿ ಸ್ವಚ್ಛತೆ ಕಾಪಾಡಬೇಕು. ರುಚಿ, ಶುಚಿಯಾದ ತಿಂಡಿ-ತಿನಿಸು ಮಾರಾಟಕ್ಕೆ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರಿಗೆ ಅಭಾವ ಉಂಟಾಗಬಾರದು ಎಂದು ಸೂಚಿಸಿದರು. ಪಂಜಿನ ಕವಾಯತು ಉಪ ಸಮಿತಿಯ ಉಪ ವಿಶೇಷಾಧಿಕಾರಿಯೂ ಆದ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮಾತನಾಡಿ, ಟಾರ್ಚ್ ಲೈಟ್ ಪರೇಡ್ ಕಾರ್ಯಕ್ರಮದಲ್ಲಿ ಗುಣಮಟ್ಟ ಕಾಯ್ದುಕೊಳ್ಳಲಾಗುವುದು. ಜೊತೆಗೆ ಸಮಯ ಉಳಿತಾಯದ ಬಗ್ಗೆ ಗಮನ ನೀಡಲಾಗುವುದು. ಈ ಹಿನ್ನೆಲೆ ಒಟ್ಟಾರೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುವ 1500 ಕಲಾವಿದರ ಸಂಖ್ಯೆಯಲ್ಲಿ ಸ್ವಲ್ಪ ಮಟ್ಟಿಗೆ ಇಳಿಕೆ ಮಾಡಲಾಗುವುದು ಎಂದು ಹೇಳಿದರು.

ದಸರಾ ವೇಳೆ ನಗರದ 103 ಕಿಲೋ ಮೀಟರ್ ರಸ್ತೆ ಜೊತೆಗೆ 56 ವೃತ್ತಗಳಲ್ಲಿ ವರ್ಣರಂಜಿತ ದೀಪಾಲಂಕಾರ ಮಾಡಲಾಗುವುದು ಎಂದು ಚೆಸ್ಕಾಂ ಅಧಿಕಾರಿಗಳು ಮಾಹಿತಿ ನೀಡಿದರು.

ದಸರಾ ಕ್ರೀಡಾಕೂಟಕ್ಕೆ 6 ಕೋಟಿ ಕೊಡಿ: ಕ್ರೀಡಾ ದಸರಾ ಉಪ ಸಮಿತಿಯ ಉಪ ವಿಶೇಷಾಧಿಕಾರಿಯೂ ಆದ ಮುಡಾ ಕಾರ್ಯದರ್ಶಿ ವಿ.ಕೆ.ಪ್ರಸನ್ನಕುಮಾರ್ ಮಾತನಾಡಿ, ಈ ಬಾರಿಯ ದಸರಾ ಕ್ರೀಡಾಕೂಟಕ್ಕೆ 6 ಕೋಟಿ ರೂಪಾಯಿ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಜೊತೆಗೆ ಕ್ರೀಡಾ ಉಪ ಸಮಿತಿ ವತಿಯಿಂದ 32 ಲಕ್ಷ ರೂಗೆ ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸಮಿತಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಕಳೆದ ಬಾರಿಯ ದಸರಾ ಕ್ರೀಡಾ ಕೂಟದಲ್ಲಿ ಕ್ರೀಡಾಪಟುಗಳಿಗೆ ಊಟ ಹಾಗೂ ವಾಸ್ತವ್ಯದ ತೊಂದರೆ ಆಗಿರುವ ಬಗ್ಗೆ ದೂರುಗಳು ಬಂದಿದೆ. ಈ ಬಾರಿ ಇಂತಹ ಯಾವುದೇ ತೊಂದರೆ ಆಗದಂತೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಬೇಕು ಎಂದು ಡಾ.ಮಹದೇವಪ್ಪ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಮುಖ್ಯಮಂತ್ರಿಗಳು ನಿರ್ಧರಿಸ್ತಾರೆ...

ಸರ್ಕಾರದ ನಿರ್ಧಾರದಂತೆ ದಸರಾ ಆಚರಿಸಲು ಎಲ್ಲಾ ಉಪಸಮಿತಿಗಳ ಜವಾಬ್ದಾರಿ ಬಗ್ಗೆ ಸುದೀರ್ಘ ಚರ್ಚೆ ಮಾಡಿ, ಕೆಲವು ಸಲಹೆ-ಸೂಚನೆ ನೀಡಿದ್ದೇನೆ ಎಂದರು.

ಗುಣಮಟ್ಟಕ್ಕೆ ಆದ್ಯತೆ: ದಸರಾದ ಪ್ರತಿಯೊಂದು ಕಾರ್ಯಕ್ರಮಗಳು ಮನರಂಜನೆ ಜೊತೆಗೆ ಸಂದೇಶಪೂರಿತವಾಗಿರಬೇಕು. ಮೈಸೂರಿನ ಹೆಮ್ಮೆ, ಸಂಸ್ಕೃತಿ, ಸಾಂಸ್ಕೃತಿಕ ಹಿರಿಮೆ, ಆಚಾರ-ವಿಚಾರ, ಆಹಾರ, ಉಡುಗೆ-ತೊಡುಗೆ, ನಾಗರಿಕ ಸಭ್ಯತೆ, ಐಕ್ಯತೆ-ಸಮಗ್ರತೆ, ಜನಜೀವನ, ಸಂವಿಧಾನ ಮತ್ತು ಪ್ರಜಾಸತ್ತಾತ್ಮಕ ಅಂಶಗಳ ಬಿಂಬಿಸುವ ಸ್ತಬ್ಧಚಿತ್ರಗಳನ್ನು ನಿರ್ಮಿಸಬೇಕು. ಉತ್ತಮ ಗುಣಮಟ್ಟದಿಂದ ಕಾಯ್ದುಕೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಗುಂಡಿಮುಕ್ತ ರಸ್ತೆ: ದಸರಾ ಹಿನ್ನೆಲೆಯಲ್ಲಿ ನೆಪಮಾತ್ರಕ್ಕೆ ಗುಂಡಿ ಮುಚ್ಚಲಾಗುತ್ತಿದ್ದು, ಅದೂ ಕಿತ್ತುಬರುತ್ತಿದೆ ಎಂಬ ದೂರಿಗೆ ಪ್ರತಿಕ್ರಿಯಿಸಿದ ಸಚಿವರು, ಎಲ್ಲಾ ರಸ್ತೆಗಳೂ ಗುಂಡಿಮುಕ್ತವಾಗಬೇಕು. ಇದಕ್ಕಾಗಿ ಅಧಿಕಾರಿಗಳಿಂದ ರಸ್ತೆಗಳ ಪಟ್ಟಿ ಕೇಳಿದ್ದೇನೆ. ರಸ್ತೆ ಅಕ್ಕಪಕ್ಕ ಸ್ವಚ್ಛತೆ ಕಾಯ್ದುಕೊಳ್ಳುವಂತೆ ಸೂಚಿಸಲಾಗಿದೆ. ದಸರಾ ವೇಳೆ ಸಂಚಾರ ದಟ್ಟಣೆ ನಿರ್ವಹಣೆಗೆ ಪೊಲೀಸರು ಸೂಕ್ತ ಕ್ರಮ ವಹಿಸಲಿದ್ದಾರೆ. ಜಂಬೂ ಸವಾರಿ ದಿನ ಗೋಲ್ಡ್ ಪಾಸ್ ಇದ್ದವರಿಗೆ ಆಸನ ಸಮಸ್ಯೆಯಾಗದಂತೆ ನಿಗಾ ವಹಿಸಲು ತಿಳಿಸಿದ್ದೇನೆ. ಈಗಾಗಲೇ 9 ಆನೆಗಳ ತಾಲೀಮು ನಡೆಯುತ್ತಿದ್ದು, ಗುರುವಾರ ಪ್ರಶಾಂತ, ಸುಗ್ರೀವ, ಮಹೇಂದ್ರ, ಹಿರಣ್ಯ ಹಾಗೂ ಲಕ್ಷ್ಮೀ ಆನೆಗಳು ಬರಲಿವೆ. ಜಿಲ್ಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿ ಎಲ್ಲಾ ಉಪಸಮಿತಿಗಳು ಸಮನ್ವಯತೆಯೊಂದಿಗೆ ದಸರಾ ಯಶಸ್ವಿಗೊಳಿಸಲು ಶ್ರಮಿಸಲು ತಿಳಿಸಲಾಗಿದೆ ಎಂದು ವಿವರಿಸಿದರು.

ಆಹಾರ ಮೇಳದಲ್ಲಿ ಹೊಸತನ

ಬದಲು 10-15 ಮಂದಿಗೆ ರೆಸ್ಟೋರೆಂಟ್ ಮಾದರಿ ತಾತ್ಕಾಲಿಕ ಶೆಡ್ ನಿರ್ಮಿಸಿಕೊಳ್ಳಲು ಜಾಗವನ್ನಷ್ಟೇ ನೀಡುವ ಚಿಂತನೆ ನಡೆದಿದೆಯಾದರೂ ಈ ಸಂಬಂಧ ಯಾವುದೇ ನಿರ್ಧಾರವಾಗಿಲ್ಲ. ಆದರೆ ಆಹಾರ ಮೇಳದ ಬಗ್ಗೆ ಸಚಿವರು ಪ್ರತಿಕ್ರಿಯಿಸಿ, ಈ ಬಾರಿ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ ಹಾಗೂ ಲಲಿತಮಹಲ್ ಪ್ಯಾಲೇಸ್ ಬಳಿ ಆಹಾರ ಮೇಳ ನಡೆಯಲಿದೆ. ಸ್ವಚ್ಛತೆ, ಶುದ್ಧ ಕುಡಿಯುವ ನೀರು, ಆಹಾರದ ಗುಣಮಟ್ಟಕ್ಕೆ ಆದ್ಯತೆ ನೀಡುವಂತೆ ಸೂಚಿಸಲಾಗಿದೆ ಎಂದಷ್ಟೇ ಹೇಳಿದರು.

ಇಂದಿನಿಂದ ರಾತ್ರಿ ದಾಸೋಹ

3.30ರವರೆಗೆ ಊಟದ ಮೂಲಕ ಅನ್ನಸಂತರ್ಪಣೆ ಇದೆ. ನಾಳೆಯಿಂದ ಸಂಜೆ 7.30ರಿಂದ 9.30ರವರೆಗೆ(ಅಗತ್ಯ ಬಿದ್ದರೆ 10 ಗಂಟೆವರೆಗೆ) ದಾಸೋಹ ಕಲ್ಪಿಸುವ ವ್ಯವಸ್ಥೆ ಆರಂಭಿಸಲಾಗುತ್ತಿದೆ.

ವಾರದಲ್ಲಿ ನಾಲ್ಕು ದಿನ ಭಕ್ತರ ಸಂಖ್ಯೆ ಜಾಸ್ತಿ: ಚಾಮುಂಡಿಬೆಟ್ಟಕ್ಕೆ ಪ್ರತಿ ಮಂಗಳವಾರ, ಶುಕ್ರವಾರ, ಶನಿವಾರ ಹಾಗೂ ಭಾನುವಾರ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಉಳಿದಂತೆ ಸೋಮವಾರ, ಬುಧವಾರ, ಗುರುವಾರ ಕಡಿಮೆ ಇರುತ್ತದೆ. ಈ ಎಲ್ಲಾ ಅಂಶವನ್ನು ಮನಗಂಡು ದಾಸೋಹ ಭವನದಲ್ಲಿ ದಾಸೋಹ ಯೋಜನೆ ರೂಪಿಸಲಾಗಿದೆ. ಪ್ರತಿದಿನ ಮಧ್ಯಾಹ್ನ ದಾಸೋಹದಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಿಯೇ ಇರುತ್ತದೆ. ರಾತ್ರಿಯೂ ಆರಂಭಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಚಾರ ಆಗುವವರೆಗೂ ಸೀಮಿತ ಸಂಖ್ಯೆಯ ಭಕ್ತರಿಗೆ ದಾಸೋಹ ನಡೆಸಲಾಗುತ್ತದೆ.

3991 ಪುಟಗಳ ಆರೋಪ ಪಟ್ಟಿ ಸಲ್ಲಿಕೆ

ಶೆಡ್‌ನಲ್ಲಿ ರೇಣುಕಾಸ್ವಾಮಿಯ ಮೇಲೆ ಹಲ್ಲೆ ಮಾಡಿದ ದರ್ಶನ್, ನಂತರ ಪಬ್‌ಗೆ ಮರಳಿದ್ದಾರೆ. ಆಗ ಇತರೆ ಹಲ್ಲೆಕೋರರು ರೇಣುಕಾಸ್ವಾಮಿ ಫೋಟೋಗಳನ್ನು, ದರ್ಶನ್ ಮೊಬೈಲ್‌ಗೆ ಕಳುಹಿಸಿದ್ದಾರೆ.

ಮತ್ತೆ ಪಬ್‌ನಿಂದ ಶೆಡ್‌ಗೆ ಹೋಗಿ ಅಲ್ಲಿಂದ ಆರ್‌ಆರ್ ನಗರದ ತಮ್ಮ ಮನೆಗೆ ಬಂದು ಬಟ್ಟೆ ಬದಲಾಯಿಸಿದ್ದಾರೆ. ಬೆಳಿಗ್ಗೆ ಬನಶಂಕರಿಯಲ್ಲಿರುವ ತಮ್ಮ ಪತ್ನಿ ವಿಜಯಲಕ್ಷ್ಮೀ ಅವರ ಮನೆಗೆ ತೆರಳಿದ್ದು, ಅಲ್ಲಿ ಪೂಜೆ ಮುಗಿಸಿ ನಂತರ ಮೈಸೂರಿಗೆ ತೆರಳಿದ್ದಾರೆ.

ತಮ್ಮ ಫಾರಂ ಹೌಸ್‌ನಿಂದ ಹೋಟೆಲ್‌ಗೆ ತೆರಳಿ, ಅಲ್ಲಿಂದ ಶೂಟಿಂಗ್ ಮುಗಿಸಿ ಮತ್ತೆ ಹೋಟೆಲ್‌ಗೆ ವಾಪಸ್ಸಾಗಿದ್ದಾರೆ. ಇದೆಲ್ಲದರ ಸಿಸಿಟಿವಿ, ಟವರ್ ಲೊಕೇಷನ್ ದೊರೆತಿದೆ ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಪ್ರತಿ ಹಂತದಲ್ಲಿ ದರ್ಶನ್ ನೋಡಿದ್ದ ಸಾಕ್ಷಿದಾರರ ಹೇಳಿಕೆಗಳು, ನಟ ಚಿಕ್ಕಣ್ಣ ಸೇರಿದಂತೆ ಅನೇಕ ಸಾಕ್ಷಿಗಳ ಹೇಳಿಕೆಗಳನ್ನು ನಮೂದಿಸಲಾಗಿದೆ. ಪ್ರದೋಷ್ ಮೊಬೈಲ್‌ನಲ್ಲಿ ಘಟನೆಗೆ ಸಂಬಂಧಿಸಿದ ವಿಡಿಯೋ, ಫೋನ್‌ಕಾಲ್, ಚಾಟಿಂಗ್‌ನಲ್ಲಿ ಸಂಚಿನ ಬಗ್ಗೆ ಮಾಹಿತಿ, ಶರಣಾಗತಿ ಮನವೊಲಿಸಿದ್ದು, ದರ್ಶನ್ ಹಣ ನೀಡಿರುವ ಸಾಕ್ಷ್ಯಗಳಿವೆ. ನಂತರ ಶವ ಸಾಗಾಣಿಕೆಗೆ ಸೂಚನೆ ನೀಡಿರುವುದು, ಹಣ ನೀಡಿ ಪ್ರಕರಣ ಮುಚ್ಚಿ ಹಾಕಿ ತಲೆಮರೆಸಿಕೊಳ್ಳುವ ಪ್ರಯತ್ನ ಮಾಡಿದ್ದಲ್ಲದೆ, ಕೊಲೆ ಸಂಚು, ಅಪಹರಣ, ಸಾಕ್ಷ್ಯನಾಶ ಎಲ್ಲದರಲ್ಲೂ ದರ್ಶನ ಪಾತ್ರವಿದೆ ಎಂಬುದನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ.

ದರ್ಶನ್ ಅಷ್ಟೇ ಅಲ್ಲ, ಪವಿತ್ರಗೌಡ ಸೇರಿದಂತೆ 17 ಆರೋಪಿಗಳ ವಿರುದ್ಧವೂ ಪೂರಕ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಕೊಲೆಯಲ್ಲಿ ಪ್ರತಿಯೊಬ್ಬರ ಪಾತ್ರವೇನು ಎಂಬುದನ್ನು ವಿವರಿಸಲಾಗಿದೆ. ಈ ಕೊಲೆಗೆ ಪವಿತ್ರ ಗೌಡ ಮೂಲ ಕಾರಣವೆಂದು ಆಕೆಯನ್ನು ಮೊದಲ ಆರೋಪಿ ಮಾಡಲಾಗಿದೆ. ಅಷ್ಟೇ ಅಲ್ಲ, ರೇಣುಕಾಸ್ವಾಮಿ ಮೇಲೆ ಹಲ್ಲೆ ನಡೆಯುವ ಸ್ಥಳದಲ್ಲಿದ್ದು, ತನ್ನ ಚಪ್ಪಲಿಯಿಂದ ಆತನ ಮೇಲೆ ಹಲ್ಲೆ ಮಾಡಿದ್ದಾಳೆ. ಆಕೆ ಬಳಸುತ್ತಿದ್ದ ಮೊಬೈಲ್ ಟವರ್ ಲೊಕೇಷನ್‌ನಿಂದ ಶೆಡ್‌ನಲ್ಲಿ ಹಲ್ಲೆ ಮಾಡುವಾಗ ಇತರೆ ಚಲನ-ವಲನಗಳಲ್ಲೂ ಆಕೆಯ ಪಾತ್ರವಿರುವುದು ಖಚಿತಗೊಂಡಿದೆ.

ಈ ದೋಷಾರೋಪ ಪಟ್ಟಿಯು 231 ಸಾಕ್ಷಿದಾರರನ್ನು ಒಳಗೊಂಡಂತೆ ಒಟ್ಟು 3991 ಪುಟಗಳುಳ್ಳ, 7 ಸಂಪುಟಗಳ ಹತ್ತು ಕಡತಗಳನ್ನು ಒಳಗೊಂಡಿದೆ.

ಸೆ.11ರಿಂದ 14ರವರೆಗೆ ಮೈಸೂರಲ್ಲಿ ಬ್ಲಾಗರ್ಸ್ ಮೀಟ್

20 ಮಂದಿ ಅಂತರರಾಷ್ಟ್ರೀಯ ಬ್ಲಾಗರ್‌ಗಳಿಂದ ಇಲ್ಲಿನ ಪ್ರವಾಸಿ ತಾಣಗಳ ವೀಡಿಯೋ ರೆಕಾರ್ಡಿಂಗ್, ಮಾಹಿತಿ ಸಂಗ್ರಹಿಸಿ ಸಾಮಾಜಿಕ ಜಾಲತಾಣದ ಮೂಲಕ ವಿಶ್ವದಾದ್ಯಂತ ಪ್ರಸರಣ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪ್ರವಾಸೋದ್ಯಮ ಇಲಾಖೆ ಜಂಟಿ ಕಾರ್ಯದರ್ಶಿ ಎಂ.ಕೆ.ಸವಿತಾ ಅವರು ಅಧಿಕಾರಿಗಳು, ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದರು.

ಮೈಸೂರು, ಸೆ.4(ಆರ್‌ಕೆ)-ಸೆಪ್ಟೆಂಬರ್ 11ರಿಂದ 14ರವರೆಗೆ ಮೈಸೂರಿನಲ್ಲಿ ಬ್ಲಾಗರ್ಸ್ ಮೀಟ್ ಆಯೋಜಿಸಲಾಗಿದೆ.

ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ ಸಹಯೋಗದೊಂದಿಗೆ ನಡೆಯಲಿರುವ ಬ್ಲಾಗರ್ಸ್ ಮೀಟ್-2024 (Discover Mysuru FAM-2024) ಅನ್ನು ಯಶಸ್ವಿಗೊಳಿಸಲು ಪ್ರವಾಸೋದ್ಯಮ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕಿ ಎಂ.ಕೆ. ಸವಿತಾ ಅವರು ಕಾರ್ಯಕ್ರಮ ಸಿದ್ಧಪಡಿಸಿ, ತಯಾರಿ ನಡೆಸುತ್ತಿದ್ದಾರೆ.

ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿ ಪ್ರವಾಸಿಗರ ಆಕರ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜಲದರ್ಶಿನಿ ಅತಿಥಿ ಗೃಹದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಬ್ಲಾಗರ್ಸ್ ಮೀಟ್ ಕಾರ್ಯಕ್ರಮದ ರೂಪು-ರೇಷೆಗಳನ್ನು ವಿವರಿಸಲಾಯಿತು.

ಸೆಪ್ಟೆಂಬರ್ 11ರಂದು ಮೈಸೂರಿಗೆ ಆಗಮಿಸಲಿರುವ 20 ಮಂದಿ ಅಂತರರಾಷ್ಟ್ರೀಯ ಬ್ಲಾಗರ್‌ಗಳು ಇಲ್ಲಿನ ಅರಮನೆ, ಸೆಂಟ್ ಫಿಲೋಮಿನಾ ಚರ್ಚ್, ಚಾಮುಂಡಿ ಬೆಟ್ಟ, ದೇವರಾಜ ಮಾರುಕಟ್ಟೆ ರೇಷ್ಮೆ ಕಾರ್ಖಾನೆ, ಸೋಮನಾಥಪುರಗಳಿಗೆ ಭೇಟಿ ನೀಡಿ ಅಲ್ಲಿನ ಪ್ರವಾಸೋದ್ಯಮ ಚಟುವಟಿಕೆ ಕುರಿತು ಮಾಹಿತಿ ಸಂಗ್ರಹಿಸಿ ವಿಡಿಯೋ ಚಿತ್ರೀಕರಣ ಮಾಡಿಕೊಳ್ಳುವರು.

ನಾಲ್ಕು ದಿನಗಳ ಕಾಲ ಪ್ರವಾಸಿ ತಾಣಗಳಿಗೆ ಭೇಟಿ ಜೊತೆಗೆ ಮೈಸೂರಿನ ಪಾರಂಪರಿಕ ಟಾಂಗಾ ರೈಡ್ ಮತ್ತು ಅಂಬಾರಿ ಡಬಲ್ ಡೆಕ್ಕರ್ ಬಸ್‌ನಲ್ಲಿ ಸಂಚರಿಸಿ ಸ್ವತಃ ಅನುಭವ ಪಡೆಯುವ ಮೂಲಕ ಮಾಹಿತಿ ಕಲೆ ಹಾಕುವರು. ನಂತರ ಬ್ಲಾಗರ್‌ಗಳು ತಮ್ಮ ಸಾಮಾಜಿಕ ಮಾಧ್ಯಮಗಳ ಮೂಲಕ ಮೈಸೂರಿನ ಪ್ರವಾಸೋದ್ಯಮ ಕುರಿತು ಪ್ರಪಂಚದಾದ್ಯಂತ ಪ್ರಸಾರ ಮಾಡುವರು ಎಂದು ಎಂ.ಕೆ.ಸವಿತಾ ಜಿಲ್ಲಾ ಉಸ್ತುವಾರಿ ಸಚಿವರಿಗೆ ವಿವರಿಸಿದರು.

ಪ್ರವಾಸೋದ್ಯಮ ದಿನಾಚರಣೆ: ಸೆಪ್ಟೆಂಬರ್ 27ರಂದು ಮೈಸೂರಲ್ಲಿ ವಿಶ್ವ ಪ್ರವಾಸೋದ್ಯಮ ದಿನ ಆಚರಿಸಲು ಸಿದ್ಧತೆ ಮಾಡಲಾಗುತ್ತಿದ್ದು, ಈ ಬಾರಿ 'ಶಾಂತಿ ಮತ್ತು ಪ್ರವಾಸೋದ್ಯಮ' ಧ್ಯೇಯವಾಕ್ಯದೊಂದಿಗೆ ಪ್ರವಾಸೋದ್ಯಮ ದಿನವನ್ನು ವಿಭಿನ್ನ ರೀತಿಯಲ್ಲಿ ಆಯೋಜಿಸಿ 'ಪ್ರವಾಸಿ ಮಾರ್ಗದರ್ಶಿಗಳು, ಹೋಟೆಲ್ ಮಾಲೀಕರು, ಕೈಗಾರಿಕೋದ್ಯಮಿಗಳು, ಟ್ರಾವೆಲ್ ಏಜೆಂಟರು ಹಾಗೂ ಇನ್ನಿತರ ಸ್ಟೇಕ್ ಹೋಲ್ಡರ್‌ಗಳೊಂದಿಗೆ ಆಚರಿಸಲು ನಿರ್ಧರಿಸಲಾಯಿತು.

ಪ್ರವಾಸಿಗರಿಗೆ ಅನುಕೂಲ: ದಸರಾ ನೋಡಲೆಂದು ಬರುವ ಪ್ರವಾಸಿಗರಿಗೆ ವಾಹನದ ತೆರಿಗೆ ಸಡಿಲಿಸಬೇಕು. ಗೋಲ್ಡ್ ಕಾರ್ಡ್ ಹೊಂದಿದವರಿಗೆ ಅರಮನೆ ಹಾಗೂ ಇತರ ಕಾರ್ಯಕ್ರಮಗಳಲ್ಲಿ ಆಸನ ಮೀಸಲಿರಿಸುವುದು, ಮೂಲಸೌಕರ್ಯ ಕಲ್ಪಿಸುವುದು, ಇಲ್ಲಿನ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ಒದಗಿಸುವ ಮೂಲಕ ದೇಶ-ವಿದೇಶಗಳಿಂದ ಹೆಚ್ಚು ಪ್ರವಾಸಿಗರನ್ನು ಮೈಸೂರಿಗೆ ಆಕರ್ಷಿಸಬೇಕೆಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ಸಂಘ-ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಪ್ರಶಾಂತ, ಜೆಎಸ್‌ಎಸ್ ಪ್ರತಿಷ್ಠಾನದ ಶ್ರೀಹರಿ ಹಾಗೂ ಇತರರು ಸಲಹೆ ನೀಡಿದರು.

ವೆಬ್‌ಸೈಟ್ ಅನಾವರಣ: ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ಮೈಸೂರಿನ ವೆಬ್‌ಸೈಟ್ ಅನ್ನು ಸೆ.27ರಂದು ಅನಾವರಣ ಮಾಡಲು ಸಿದ್ಧತೆ ನಡೆಸುತ್ತಿದ್ದು, ಸಾಮಾಜಿಕ ಜಾಲತಾಣಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಬಗ್ಗೆಯೂ ಸಭೆಯಲ್ಲಿ ಸಲಹೆಗಳು ಕೇಳಿಬಂದವು.

ಪ್ರವಾಸಿಗರಿಗೆ ಅನುಕೂಲವಾಗುವಂತೆ ಏಕರೂಪದ ಟಿಕೆಟ್ ವ್ಯವಸ್ಥೆ ಅಳವಡಿಸಿಕೊಳ್ಳುವುದು, ವಿಂಟೇಜ್ ಕಾರ್ ರ‍್ಯಾಲಿ, ಹೆಲಿರೈಡ್‌ಗಳಂತಹ ಕಾರ್ಯಕ್ರಮ ಏರ್ಪಡಿಸುವುದು, ಪ್ರವಾಸೋದ್ಯಮ ಉತ್ತೇಜಿಸಲು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಪಿಪಿಪಿ ಮಾದರಿಯಲ್ಲಿ ಯೋಜನೆಗಳನ್ನು ರೂಪಿಸುವುದು, ದಸರಾ ನಂತರ 'ಮೈಸೂರು ಫೆಸ್ಟ್' ಆಯೋಜಿಸುವ ಕುರಿತಂತೆಯೂ ಚರ್ಚಿಸಲಾಯಿತು.

ಮೈಸೂರಲ್ಲಿ ಪತ್ರಿಕಾ ವಿತರಕರ ದಿನಾಚರಣೆ...



ಪತ್ರಿಕಾ ವಿತರಕರ ದಿನಾಚರಣೆಯನ್ನು ಮೈಸೂರಿನ ಒಂಟಿಕೊಪ್ಪಲ್‌ನ ಪತ್ರಿಕಾ ವಿತರಣಾ ಕೇಂದ್ರದಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪ್ರಸರಣಾಧಿಕಾರಿ ಟಿ.ಎಸ್.ಗೋಪಿನಾಥ್ ಕೇಕ್ ಕತ್ತರಿಸುವುದರೊಂದಿಗೆ ಆಚರಿಸಲಾಯಿತು. ಈ ವೇಳೆ ಮೈಸೂರಿನ ನಗರ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಬಿ.ಸುರೇಶ್, ಉಪಾಧ್ಯಕ್ಷ ಜೆ.ನಾಗೇಶ್‌ಮೂರ್ತಿ, ವಿತರಕರಾದ ಚಂದ್ರಶೇಖರ್, ಸುರೇಶ್, ರಾಮು, ಸ್ವಾಮಿ, ಪ್ರಕಾಶ್, ಮಂಜು, ಚೇತನ್, ಲಿಂಗರಾಜು, ರಾಜು, ಸಂತೋಷ್ ಉಪಸ್ಥಿತರಿದ್ದರು.

ಯಾವುದೇ ಬ್ಯಾಂಕ್‌ನಿಂದ ಪಿಂಚಣಿ ಪಡೆಯಲು ಅವಕಾಶ: ಕೇಂದ್ರದ ಆದೇಶ

ನವದೆಹಲಿ, ಸೆ.4- ಇಪಿಎಸ್ ಪಿಂಚಣಿದಾರರಿಗೆ ಮುಂದಿನ ವರ್ಷದ ಜನವರಿ 1ರಿಂದ ದೇಶದ ಯಾವುದೇ ಭಾಗದಲ್ಲಿ, ಯಾವುದೇ ಬ್ಯಾಂಕ್ ಮತ್ತು ಯಾವುದೇ ಶಾಖೆಯಿಂದಾದರೂ ತಮ್ಮ ಪಿಂಚಣಿ ಪಡೆಯಲು ಅವಕಾಶ ದೊರೆಯಲಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವಿಯಾ ತಿಳಿಸಿದ್ದಾರೆ. ಕೇಂದ್ರೀಕೃತ ಪಿಂಚಣಿ ಪಾವತಿ ವ್ಯವಸ್ಥೆಯ (ಸಿಪಿಪಿಎಸ್) ಪ್ರಸ್ತಾವನೆಗೆ ಅನುಮೋದನೆ ನೀಡಿದ್ದು, ಅದರಿಂದ ಈ ಸೌಲಭ್ಯ ದೊರೆಯಲಿದೆ ಎಂದು ಅವರು ಹೇಳಿದ್ದಾರೆ. ಕೇಂದ್ರದ ಈ ನಿರ್ಧಾರದಿಂದ ಸುಮಾರು 78 ಲಕ್ಷ ಇಪಿಎಸ್ ಪಿಂಚಣಿದಾರರಿಗೆ ಉಪಯುಕ್ತವಾಗಲಿದೆ ಎಂದು ಮಾಹಿತಿ ನೀಡಿದ ಅವರು, ಮುಂದಿನ ಹಂತದಲ್ಲಿ ಅದನ್ನು ಆಧಾರ್ ಆಧಾರಿತ ಪಾವತಿ ವ್ಯವಸ್ಥೆಗೆ (ಎಬಿಪಿಎಸ್) ಪರಿವರ್ತಿಸಲು ಯೋಜಿಸಲಾಗಿದೆ ಎಂದು ತಿಳಿಸಿದ್ದಾರೆ. ಸಿಪಿಪಿಎಫ್‌ನ ಅನುಮೋದನೆಯು ಇಪಿಎಫ್‌ಒ ಆಧುನೀಕರಣದಲ್ಲಿ ಮಹತ್ವದ ಮೈಲಿಗಲ್ಲಾಗುತ್ತದೆ. ಈ ಮೂಲಕ ಪಿಂಚಣಿದಾರರು ಎದುರಿಸುತ್ತಿರುವ ದೀರ್ಘಕಾಲೀನ ಸವಾಲುಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆ. ಅಲ್ಲದೆ ತಡೆರಹಿತ ಪಾವತಿಯೂ ಇದರಿಂದ ಸಾಧ್ಯವಾಗುತ್ತದೆ ಎಂದಿದ್ದಾರೆ. ಪಿಂಚಣಿದಾರರು ಒಂದೆಡೆಯಿಂದ ಮತ್ತೊಂದೆಡೆಗೆ ಸ್ಥಳಾಂತರವಾದಾಗ ಪಿಂಚಣಿ ಪಾವತಿ ಆದೇಶವನ್ನು (ಪಿಪಿಒ) ಒಂದು ಕಚೇರಿಯಿಂದ ಇನ್ನೊಂದಕ್ಕೆ ಸ್ಥಳಾಂತರಿಸುವ ಅಗತ್ಯವಿಲ್ಲ.

ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸ್ಮಾರ್ಟ್‌ಕಾರ್ಡ್ ಮೂಲಕ ನೇರ ಪ್ರವೇಶ!

● ಚಾಮುಂಡಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಚಿಂತನೆ ● 12 ಸಾವಿರದಿಂದ 1 ಲಕ್ಷದವರೆಗೆ ದರ ನಿಗದಿ

ಬಾಪುಲಿಂಗರಾಜ್ ಅರಸ್

> "ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಸ್ಮಾರ್ಟ್‌ಕಾರ್ಡ್ ನೀಡುವ ಬಗ್ಗೆ ಯೋಜನೆ ರೂಪಿಸಿದೆ. ಆದರೆ ಪ್ರಾಧಿಕಾರದ ಸಭೆಯಲ್ಲಿ ಇದಕ್ಕೆ ಅನುಮತಿ ಇನ್ನೂ ಸಿಕ್ಕಿಲ್ಲ. ಮುಂದಿನ ಸಭೆಯಲ್ಲಿ ನಿರ್ಧರಿಸಲಾಗುವುದು.
> – ರೂಪಾ, ಕಾರ್ಯದರ್ಶಿ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮೈಸೂರು, ಸೆ.4- ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಸರದಿ ಸಾಲಿನಲ್ಲಿ ನಿಲ್ಲದೆ ನೇರವಾಗಿ ಚಾಮುಂಡೇಶ್ವರಿ ದರ್ಶನ, ಪೂಜೆ, ಲಾಡು ಪ್ರಸಾದ ಸೇರಿದಂತೆ ವಿಶೇಷ ವ್ಯವಸ್ಥೆಯನ್ನು ನಾನಾ ದರದ ಸ್ಮಾರ್ಟ್‌ಕಾರ್ಡ್ ಮೂಲಕ ಕಲ್ಪಿಸಲು ಶ್ರೀ ಚಾಮುಂಡಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಚಿಂತಿಸಿದೆ.

ಇತ್ತೀಚೆಗೆ ಚಾಮುಂಡಿಬೆಟ್ಟಕ್ಕೆ ಬರುವ ಭಕ್ತಾಧಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅದರಲ್ಲೂ ಶಕ್ತಿ ಯೋಜನೆ ಜಾರಿಗೊಂಡ ನಂತರವಂತೂ ಚಾಮುಂಡಿಬೆಟ್ಟ ಸದಾ ಭಕ್ತರು, ಪ್ರವಾಸಿಗರಿಂದ ತುಂಬಿರುತ್ತದೆ. ಇದರಿಂದ ದೇವಿಯ ದರ್ಶನ ಪಡೆಯಲು ಭಕ್ತರು ಗಂಟೆಗಟ್ಟಲೆ ಸರದಿ ಸಾಲಿನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಇದೆ. ಶನಿವಾರ, ಭಾನುವಾರ, ಶುಕ್ರವಾರ, ರಜಾ ದಿನ ಹಾಗೂ ಹಬ್ಬಗಳಲ್ಲಂತೂ ಚಾಮುಂಡೇಶ್ವರಿ ದರ್ಶನಕ್ಕೆ ಭಕ್ತರ ದಂಡೆ ಸೇರಿರುತ್ತದೆ.

ದೂರ ದೂರದ ಊರಿಂದ ಬಂದವರು ಸರದಿ ಸಾಲು ನೋಡಿ ಶಾಕ್ ಆಗುತ್ತಾರೆ. ಈಗ ಸಾಲಿನಲ್ಲಿ ನಿಂತರೆ ದರ್ಶನ ಪಡೆಯಲು ಬಹಳ ಸಮಯ ಬೇಕಾಗುತ್ತದೆ ಎಂದು ಕೆಲವರು ವಾಪಸ್ ಹೋಗಿರುವ ನಿದರ್ಶನಗಳು ಇದೆ. ವಯಸ್ಕರಿಗಂತೂ ಗಂಟೆಗಟ್ಟಲೆ ಸಾಲಿನಲ್ಲಿ ನಿಲ್ಲುವುದು ಮತ್ತಷ್ಟು ಕಷ್ಟ. 100 ರೂಪಾಯಿಗಳ ವಿಶೇಷ ಕೌಂಟರ್ ಇದ್ದರೂ ಅಲ್ಲಿ ಕೂಡ ಉದ್ದನೆ ಸಾಲು ಕಂಡು ಬರುತ್ತದೆ. ಇದರಿಂದ ದೇವರ ದರ್ಶನ ಪಡೆಯಲು ಭಕ್ತರು ತೊಂದರೆ ಅನುಭವಿಸುತ್ತಾರೆ. ಈ ಹಿನ್ನೆಲೆ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಸ್ಮಾರ್ಟ್ ಕಾರ್ಡ್ ಪರಿಚಯಿಸುತ್ತಿದೆ. ನಾಲ್ಕು ವಿಧದ ಸ್ಮಾರ್ಟ್‌ಕಾರ್ಡ್ ಪರಿಚಯಿಸುತ್ತಿದ್ದು, ಒಂದೊಂದು ಕಾರ್ಡ್‌ಗೆ ಒಂದೊಂದು ರೀತಿಯ ದರ ನಿಗದಿ ಮಾಡಲಾಗಿದೆ. ಆದರೆ ಯಾವುದೇ ಕಾರ್ಡ್ ಪಡೆದರೂ ತಿಂಗಳಲ್ಲಿ ಒಂದು ದಿನ ಮಾತ್ರ ದೇವಸ್ಥಾನಕ್ಕೆ ನೇರ ಪ್ರವೇಶವಿರುತ್ತದೆ. 12 ಸಾವಿರ ರೂ.ನ ಸ್ಮಾರ್ಟ್ ಕಾರ್ಡ್‌ಗೆ ತಿಂಗಳಲ್ಲಿ ಒಂದು ಬಾರಿಯಂತೆ ವರ್ಷದ 12 ತಿಂಗಳು ಒಬ್ಬರಿಗೆ ನೇರ ಪ್ರವೇಶವಿರುತ್ತದೆ. ಅವರಿಗೆ ಒಂದು ಲಾಡು ನೀಡಲಾಗುತ್ತದೆ. 25 ಸಾವಿರ ರೂ.ನ ಸ್ಮಾರ್ಟ್‌ಕಾರ್ಡ್‌ಗೆ 5 ಜನರಿಗೆ ನೇರ ಪ್ರವೇಶವಿದ್ದು, ಎರಡು ಲಾಡು ನೀಡಲಾಗುತ್ತದೆ. 50 ಸಾವಿರ ರೂ.ನ ಸ್ಮಾರ್ಟ್‌ಕಾರ್ಡ್‌ಗೆ 10 ಜನರಿಗೆ ನೇರ ಪ್ರವೇಶವಿದ್ದು, ತಲಾ 10 ಲಾಡು ಹಾಗೂ ಪಂಚಾಮೃತ ಪ್ರಸಾದ ನೀಡಲಾಗುತ್ತದೆ. ಒಂದು ಲಕ್ಷ ರೂಪಾಯಿಯ ಸ್ಮಾರ್ಟ್ ಕಾರ್ಡ್‌ಗೆ 10 ಜನರಿಗೆ ಪ್ರವೇಶವಿದ್ದು, ಅವರ ಹೆಸರಿನಲ್ಲಿ ವಿಶೇಷ ಪೂಜಾ ಕಾರ್ಯ ನೆರವೇರಿಸಲಾಗುತ್ತದೆ. ಜೊತೆಗೆ ಪಂಚಾಮೃತ ಪ್ರಸಾದದೊಂದಿಗೆ ತಲಾ 10 ಲಾಡುಗಳನ್ನು ನೀಡಲಾಗುತ್ತದೆ.

ಸ್ಮಾರ್ಟ್‌ಕಾರ್ಡ್‌ಗಳನ್ನು ನಕಲಿ ಮಾಡದಂತೆ ಡಿಜಿಟಲ್ ಭದ್ರತಾ ತಂತ್ರಜ್ಞಾನವನ್ನು ಅಳವಡಿಸಲಾಗಿದೆ ಸ್ಕ್ಯಾನ್ ಮಾಡಲು ಯಂತ್ರವೊಂದನ್ನು ಅಳವಡಿಸಲಾಗುವುದು. ಈ ಕಾರ್ಡ್ ಹೊಂದಿರುವವರು ಆ ಯಂತ್ರದಲ್ಲಿ ಸ್ಕ್ಯಾನ್ ಮಾಡಿ ಅದರ ಅನುಮತಿ ಪತ್ರ ಬಂದ ನಂತರ ನೇರವಾಗಿ ದೇವಸ್ಥಾನದ ಒಳಗೆ ಪ್ರವೇಶ ಪಡೆಯಬಹುದು. ಹಣವುಳ್ಳವರಿಗೆ ಮಾತ್ರ ಇದರ ಪ್ರಯೋಜನ ದೊರೆಯಲಿದೆ. ಸ್ಮಾರ್ಟ್‌ಕಾರ್ಡ್ ಉಳ್ಳವರು ಸರದಿ ಸಾಲಿನಲ್ಲಿ ನಿಲ್ಲುವ ಗೋಜಿಗೆ ಹೋಗದೆ ನೇರವಾಗಿ ದೇವಸ್ಥಾನ ಪ್ರವೇಶ ಪಡೆಯಬಹುದು. ಜೊತೆಗೆ ಲಾಡು, ಪಂಚಾಮೃತ ಪ್ರಸಾದ ಕೂಡ ಪಡೆಯಬಹುದು.



ಸ್ಮಾರ್ಟ್ ಕಾರ್ಡ್ ನೀಡುವುದರಿಂದ ಪ್ರಾಧಿಕಾರಕ್ಕೂ ಆದಾಯ ಬರುತ್ತದೆ. ಅದನ್ನು ಅಭಿವೃದ್ಧಿ ಕಾರ್ಯಕ್ಕೆ, ಭಕ್ತರಿಗೆ ಹೆಚ್ಚಿನ ಸೇವಾ ಸೌಲಭ್ಯಕ್ಕೆ ಬಳಸಬಹುದು ಎಂಬುದು ಅಧಿಕಾರಿಗಳ ಲೆಕ್ಕಾಚಾರ.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ನಂತರ ಇಂತಹ ಹಲವು ಸುಧಾರಣೆ ಮಾಡಲು ಯೋಜನೆ ರೂಪಿಸಲಾಗಿದೆ. ಆದರೆ, ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತದೆ ಎಂಬುದನ್ನು ಕಾದು ನೋಡಬೇಕು.

ಕೋರ್ಟ್ ತೀರ್ಪಿಗೂ ಮುನ್ನ ಗೌರವಯುತವಾಗಿ ರಾಜೀನಾಮೆ ನೀಡಿ



ಶಿವಮೊಗ್ಗ, ಸೆ.4- ರಾಜ್ಯಪಾಲರ ಪ್ರಾಸಿಕ್ಯೂಷನ್‌ಗೆ ಸಂಬಂಧಿಸಿದಂತೆ ನ್ಯಾಯಾಲಯ ತೀರ್ಪು ಪ್ರಕಟಿಸುವ ಮುನ್ನವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೌರವಯುತವಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಹಿರಿಯ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬುಧವಾರ ಸಲಹೆ ನೀಡಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪಿನ ನಂತರ ಸಿದ್ದರಾಮಯ್ಯ ರಾಜೀನಾಮೆ ನೀಡುವ ಪರಿಸ್ಥಿತಿ ಎದುರಾಗಲಿದೆ ಎಂದು ಅವರು ಭವಿಷ್ಯ ನುಡಿದಿದ್ದಾರೆ.

ಕೋರ್ಟ್ ತೀರ್ಪಿನ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ನೂರಕ್ಕೆ ನೂರರಷ್ಟು ರಾಜೀನಾಮೆ ನೀಡುವ ಪರಿಸ್ಥಿತಿ ಬರಲಿದೆ. ಗೌರವಯುತವಾಗಿ ಈಗಲೇ ರಾಜೀನಾಮೆ ನೀಡುವಂತೆ ನಾನು ಸಲಹೆ ನೀಡುತ್ತೇನೆ. ಅವರು ಮಾಡಿರುವ ಹಗರಣಗಳೆಲ್ಲವೂ ಸಾಬೀತಾಗಿರುವುದರಿಂದ ಅವರು ತಪ್ಪಿಸಿಕೊಳ್ಳಲು ಅವಕಾಶವಿಲ್ಲ ಎಂದರು. ಇನ್ನು ಹೋರಾಟದ ಅಗತ್ಯವಿಲ್ಲ. ಒಂದು ರೀತಿಯಲ್ಲಿ ಪ್ರಕರಣ ಅಂತಿಮ ಹಂತಕ್ಕೆ ಬಂದಿದ್ದು, ಸಹಜವಾಗಿಯೇ ಅವರು ರಾಜೀನಾಮೆ ನೀಡುವ ಪರಿಸ್ಥಿತಿ ಬರಲಿದೆ.

ಭೂಮಿ ಕಳೆದುಕೊಂಡ ರೈತರ ಕುಟುಂಬಕ್ಕೆ ಉದ್ಯೋಗ ಕಲ್ಪಿಸುವಂತೆ ಆಗ್ರಹಿಸಿ ಅಹೋರಾತ್ರಿ ಧರಣಿ

ಜಿಲ್ಲಾ ಕೈಗಾರಿಕಾ ಕೇಂದ್ರ, ಕೆಐಎಡಿಬಿ ವಿರುದ್ಧ ಆಕ್ರೋಶ



ಕೈಗಾರಿಕೆಗಳಿಗಾಗಿ ಭೂಮಿ ಕಳೆದುಕೊಂಡಿರುವ ವರುಣಾ ಕ್ಷೇತ್ರದ ಕೆಂಪಿಸಿದ್ದನಹುಂಡಿ ರೈತರು ಉದ್ಯೋಗಕ್ಕಾಗಿ ಆಗ್ರಹಿಸಿ ಜಿಲ್ಲಾ ಕೈಗಾರಿಕಾ ಕೇಂದ್ರ ಬಳಿ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ.

ಮೈಸೂರು, ಸೆ.4(ಎಸ್‌ಬಿಡಿ)- ಭೂಮಿ ಕಳೆದುಕೊಂಡ ರೈತ ಕುಟುಂಬದವರಿಗೆ ಉದ್ಯೋಗ ಕಲ್ಪಿಸುವಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಕೆಐಎಡಿಬಿ ವಿಫಲವಾಗಿವೆ ಎಂದು ವರುಣಾ ಕ್ಷೇತ್ರದ ಕೆಂಪಿಸಿದ್ದನಹುಂಡಿ ಗ್ರಾಮದ ರೈತರು ಬುಧವಾರ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ.

ನಗರದ ಕೆ.ಆರ್.ಆಸ್ಪತ್ರೆ-ಕೆ.ಟಿ.ಸ್ಟ್ರೀಟ್ ರಸ್ತೆಯಲ್ಲಿರುವ ಜಿಲ್ಲಾ ಕೈಗಾರಿಕಾ ಕೇಂದ್ರ (ಡಿಐಸಿ) ಕಚೇರಿ ಬಳಿ ಇಂದು ಸಂಜೆಯಿಂದ ಪ್ರತಿಭಟನೆ ಆರಂಭಿಸಿರುವ ರೈತರು, ತಮ್ಮಿಂದ ಭೂಮಿ ಪಡೆದು ಉದ್ಯೋಗ ನೀಡದ ಕೈಗಾರಿಕೆಗಳು ಹಾಗೂ ಕೆಐಎಡಿಬಿ ಅಧಿಕಾರಿಗಳಿಗೆ ಧಿಕ್ಕಾರ ಕೂಗಿ, ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸ್ಥಳದಲ್ಲೇ ರಾತ್ರಿ ಅಡುಗೆ ತಯಾರಿಸಿ ಧರಣಿ ಮುಂದುವರೆಸಿದ್ದಾರೆ.

ಕೆಂಪಿಸಿದ್ದನಹುಂಡಿ ಗ್ರಾಮದ ರೈತರ ಭೂಮಿಯನ್ನು ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆಂದು ಭೂ ಸ್ವಾಧೀನ ಪಡಿಸಿಕೊಂಡ ಸಂದರ್ಭದಲ್ಲಿ ಆ ರೈತರ ಕುಟುಂಬದ ಸದಸ್ಯರಿಗೆ ಕಾರ್ಖಾನೆಗಳಲ್ಲಿ ಖಾಯಂ ಉದ್ಯೋಗ ನೀಡುವುದಾಗಿ ಭರವಸೆ ನೀಡಲಾಗಿತ್ತು. ಆದರೆ ಬಹುತೇಕ ಕಾರ್ಖಾನೆಗಳು ಉದ್ಯೋಗವನ್ನು ನೀಡಿಲ್ಲ. ರೈತರ ಹೋರಾಟ ಪರಿಣಾಮ ಜಿಲ್ಲಾಧಿಕಾರಿಗಳು ಈ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಜಿಲ್ಲಾ ಕೈಗಾರಿಕೆಗಳ ಕೇಂದ್ರದ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಸಮಿತಿ ರಚನೆ ಮಾಡಿದರು. ಸಮಿತಿ ಶಿಫಾರಸ್ಸಿನಂತೆ ಭೂಮಿ ನೀಡಿದ ರೈತ ಕುಟುಂಬದವರಿಗೆ ಉದ್ಯೋಗ ನೀಡಬೇಕೆಂದು ಕೆಲವು ಕೈಗಾರಿಕೆಗಳಿಗೆ ಕೆಐಎಡಿಬಿ ಅಧಿಕಾರಿಗಳು ಪತ್ರ ನೀಡಿದ್ದಾರೆ. ಆದರೆ ಈ ಪತ್ರಗಳಿಗೆ ಕಾರ್ಖಾನೆಗಳಲ್ಲಿ ಕಿಮ್ಮತ್ತು ನೀಡುತ್ತಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದ್ದಾರೆ. ಕಾರ್ಖಾನೆಗಳಿಗೆ ಅಲೆದು ಏನೂ ಪ್ರಯೋಜನವಾಗದ ಕಾರಣ ಕಳೆದ ಆಗಸ್ಟ್ 29ರಂದು ಕೆಐಎಡಿಬಿ ಕಚೇರಿ ಮುಂಭಾಗ ಅನಿರ್ದಿಷ್ಟಾವಧಿ ಹೋರಾಟ ಆರಂಭಿಸಲಾಯಿತು. ಆಗ ಕೆಐಎಡಿಬಿ ಅಧಿಕಾರಿಗಳು ಸೆ.4ರಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಕಾರ್ಖಾನೆಗಳ ಪ್ರತಿನಿಧಿಗಳ ಸಭೆ ನಡೆಸಿ ನ್ಯಾಯ ಒದಗಿಸುವುದಾಗಿ ಆಶ್ವಾಸನೆ ನೀಡಿದ್ದರಿಂದ ಪ್ರತಿಭಟನೆ ಹಿಂಪಡೆಯಲಾಗಿತ್ತು. ಆದರೆ ಇಂದಿನ ಸಭೆಯಲ್ಲಿ ಉದ್ಯೋಗ ನೀಡುವ ಬಗ್ಗೆ ಯಾವುದೇ ತೀರ್ಮಾನವಾಗಲಿಲ್ಲ. ಆದ್ದರಿಂದ ರೈತ ಕುಟುಂಬಗಳಿಗೆ ನ್ಯಾಯ ಸಿಗುವವರೆಗೂ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಕಛೇರಿ ಬಳಿ ಅನಿರ್ದಿಷ್ಟಾವಧಿ ಹೋರಾಟ ನಡೆಸುವುದಾಗಿ ತಿಳಿಸಿದ್ದಾರೆ. ರೈತ ಮುಖಂಡ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಎಐಕೆಕೆಎಂಎಸ್ ರೈತ ಸಂಘಟನೆಯ ಜಿಲ್ಲಾ ಸಂಚಾಲಕ ಹೆಚ್.ಎಂ. ಬಸವರಾಜು ನೇತೃತ್ವದಲ್ಲಿ ನಡೆಸಲಾಗುತ್ತಿರುವ ಪ್ರತಿಭಟನೆಯಲ್ಲಿ ರೈತರಾದ ಉಮೇಶ್, ಮಂಜು, ರವಿ, ಮಧು, ಹೂವಮ್ಮ, ಮಂಜುಳಾ, ಶಿವಮ್ಮ, ನಾಗಮ್ಮ ಮತ್ತಿತರರು ಪಾಲ್ಗೊಂಡಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣ: ಮತ್ತೆ 12 ಆರೋಪಿಗಳ ಬಂಧನ

ಒಟ್ಟು 30 ಆರೋಪಿಗಳ ಬಂಧನ, ಸ್ಕ್ಯಾನಿಂಗ್ ಯಂತ್ರ, ಕಾರುಗಳು, ಮೊಬೈಲುಗಳ ವಶ

ಮಂಡ್ಯ,ಸೆ.4– ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದ್ದ ಹೆಣ್ಣು ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ಬಂಧಿಸಲು ರಚನೆಯಾಗಿದ್ದ ವಿಶೇಷ ಪೊಲೀಸ್ ತಂಡ ಮತ್ತೆ 12 ಮಂದಿ ಆರೋಪಿಗಳನ್ನು ಬಂಧಿಸಿದೆ ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ನಗರದ ಎಸ್ಪಿ ಕಚೇರಿಯಲ್ಲಿ ಬುಧವಾರ ಸಂಜೆ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿಗಳಾದ ಕಿಂಗ್‌ಪಿನ್ ಅಭಿಷೇಕ್ ಸೇರಿದಂತೆ ವೀರೇಶ್, ಪುಟ್ಟರಾಜು, ಕುಮಾರ್, ಶಾರದಮ್ಮ, ದಾಸೇಗೌಡ, ಲ್ಯಾಬ್ ಸತ್ಯ, ಮೀನಾ, ಮಲ್ಲಿಕಾರ್ಜುನ್, ಸೋಮಶೇಖರ್, ರತ್ನಮ್ಮ, ಪ್ರೇಮ ಆಲಿಯಾಸ್ ಪಾರ್ವತಿ ಎಂಬುವವರನ್ನು ಬಂಧಿಸಲಾಗಿದ್ದು, ಪ್ರಕರಣದ ಸಂಬಂಧ ಒಟ್ಟಾರೆ ಈವರೆಗೆ 12 ಮಂದಿ ಆರೋಪಿ ಸೇರಿ 30 ಮಂದಿಯನ್ನು ಬಂಧಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಮಂಡ್ಯ ಜಿಲ್ಲೆಯ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಕಳೆದ ಮೇ 6ರಂದು ಆರೋಗ್ಯ ಇಲಾಖೆ ಅಧಿಕಾರಿ ಡಾ.ಬೆಟ್ಟಸ್ವಾಮಿ ಅವರು ದೂರು ನೀಡಿದ ಸಂಬಂಧ ಪಾಂಡವಪುರ ಸರ್ಕಾರಿ ಆಸ್ಪತ್ರೆಯಲ್ಲಿ ಡಿ ಗ್ರೂಪ್ ನೌಕರೆಯಾಗಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅಶ್ವಿನಿ ಎಂಬಾಕೆಗೆ ಸೇರಿದ ವಸತಿ ಗೃಹದಲ್ಲಿ



ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡುತ್ತಿರುವ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ.

ಹೆಣ್ಣು ಭ್ರೂಣ ಹತ್ಯೆ ಮಾಡುತ್ತಿದ್ದ ಪ್ರಕರಣದಲ್ಲಿ ಒಟ್ಟು 19 ಜನ ಆರೋಪಿಗಳ ಪೈಕಿ 12 ಜನರನ್ನು ಬಂಧಿಸಿದ್ದು, ಉಳಿದ ಏಳು ಮಂದಿ ತಲೆ ಮರೆಸಿಕೊಂಡಿದ್ದಾರೆ ಎಂದರು.

ಇದಲ್ಲದೇ ಇನ್ನು ಕೆಲ ಕಡೆ ಭ್ರೂಣ ಹತ್ಯೆ ಮತ್ತು ಪತ್ತೆ ಆರೋಪದಡಿ ಮೇಲುಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಪ್ರಕರಣದಲ್ಲಿ ಏಳು ಆರೋಪಿಗಳ ಪೈಕಿ ಮೂವರನ್ನು ಬಂಧಿಸಲಾಗಿತ್ತು. ನಾಲ್ವರು ತಲೆಮರೆಸಿಕೊಂಡಿದ್ದು, ಬೆಳ್ಳೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹೆಣ್ಣು ಭ್ರೂಣ ತಪಾಸಣೆ ಮಾಡಲು ತೆರಳುತ್ತಿದ್ದಾಗ ದಾಳಿ ಮಾಡಿದ್ದ ಪ್ರಕರಣದಲ್ಲಿ ನಾಲ್ವರು ಆರೋಪಿಗಳ ಪೈಕಿ ಮೂವರನ್ನು ಬಂಧಿಸಲಾಗಿತ್ತು. ಮತ್ತೋರ್ವ ನಾಪತ್ತೆಯಾಗಿದ್ದನು ಎಂದು ವಿವರಿಸಿದರು.

ಅದೇ ರೀತಿ ಮೈಸೂರು ನಗರದ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯ ಪ್ರಕರಣ ಹಾಗೂ ಬೆಂಗಳೂರು ನಗರದ ಬೈಯಪ್ಪನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಎಲ್ಲಾ ಪ್ರಕರಣಗಳಲ್ಲಿ ತಲೆ ಮರೆಸಿಕೊಂಡ ಆರೋಪಿಗಳ ಪತ್ತೆ ಸಂಬಂಧ ಪೊಲೀಸರ ವಿಶೇಷ ತಂಡವನ್ನು ರಚನೆ ಮಾಡಲಾಗಿತ್ತು. ತಂಡ ಕಾರ್ಯಾಚರಣೆ ನಡೆಸಿ, ಪ್ರಮುಖ ಆರೋಪಿಗಳಾದ ಅಭಿಷೇಕ್ ಮತ್ತು ವೀರೇಶ್‌ರನ್ನು ಬಂಧಿಸಿ ವಿಚಾರಣೆ ನಡೆಸಿದ್ದರಿಂದ ಪ್ರಕರಣದಲ್ಲಿ ಭಾಗಿಯಾಗಿರುವ ಇತರ 10 ಆರೋಪಿಗಳಾದ ಪುಟ್ಟರಾಜು, ಕುಮಾರ್, ಶಾರದಮ್ಮ, ದಾಸೇಗೌಡ, ಲ್ಯಾಬ್ ಸತ್ಯ, ಮೀನಾ, ಮಲ್ಲಿಕಾರ್ಜುನ್, ಸೋಮಶೇಖರ್, ರತ್ನಮ್ಮ, ಪ್ರೇಮ ಆಲಿಯಾಸ್ ಪಾರ್ವತಿರನ್ನ ಬಂಧಿಸಲಾಗಿದೆ ಎಂದು ತಿಳಿಸಿದರು.

ಬಂಧಿತರಿಂದ ಅಕ್ರಮವಾಗಿ ಕೃತ್ಯಕ್ಕೆ ಉಪಯೋಗಿಸಿದ ಎರಡು ಸ್ಕ್ಯಾನಿಂಗ್ ಉಪಕರಣ, ಮಾರುತಿ ಎಸ್–ಕ್ರಾಸ್, ಮಾರುತಿ ಸಿಲಾರಿಯೋ ಮತ್ತು ಮಾರುತಿ ಒಮ್ನಿ ಕಾರು ಹಾಗೂ ಮೂರು ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಅದೇ ರೀತಿ ಪ್ರಕರಣಗಳಲ್ಲಿ ಭಾಗಿಯಾಗಿರುವ ಕೆಲವು ತಲೆ ಮರೆಸಿಕೊಂಡಿದ್ದು, ಇವರ ಪತ್ತೆ ಕಾರ್ಯಾಚರಣೆ ಮುಂದುವರೆದಿದೆ ಎಂದರು.

ಪತ್ತೆ ಕಾರ್ಯಾಚರಣೆಯಲ್ಲಿ ಭಾಗಿಯಾದ ಪೊಲೀಸ್ ಅಧಿಕಾರಿಗಳ ಕಾರ್ಯವನ್ನು ಶ್ಲಾಘಿಸಿ ತಂಡಕ್ಕೆ ಇಲಾಖೆಯಿಂದ ಪ್ರಶಂಸಾ ಪತ್ರ ಹಾಗೂ ನಗದು ಬಹುಮಾನ ಘೋಷಣೆ ಮಾಡಲಾಗಿದೆ ಎಂದು ಹೇಳಿದರು.

ಇನ್ನು ಆರೋಪಿಗಳು ಸಾಮಾನ್ಯ ಕಾಲ್ ಮಾಡಿದರೆ ಸಿಲುಕಿ ಬಿಡಬಹುದೆಂಬ ಹಿನ್ನೆಲೆಯಲ್ಲಿ ಇಂಟರ್‌ನೆಟ್ ಕಾಲ್‌ಗಳನ್ನು ಮಾಡುತ್ತಿದ್ದರು. ಇವರನ್ನು ಪತ್ತೆ ಹಚ್ಚುವ ಸಲುವಾಗಿ ಪೊಲೀಸರು ನಾನಾ ರೀತಿಯ ಕಾರ್ಯ ಯೋಜನೆಗಳನ್ನು ರೂಪಿಸಿ ಅಂತಿಮವಾಗಿ ಪ್ರಕರಣದ ಬಹುತೇಕ ಆರೋಪಿಗಳನ್ನು ಬಂಧಿಸಿದ್ದು, ಉಳಿದ ಆರೋಪಿಗಳನ್ನು ಶೀಘ್ರವೇ ಬಂಧಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಿಎಚ್‌ಓ ಡಾ.ಮೋಹನ್, ಎಎಸ್ಪಿಗಳಾದ ಡಾ.ತಿಮ್ಮಯ್ಯ, ಗಂಗಾಧರಸ್ವಾಮಿ ಉಪಸ್ಥಿತರಿದ್ದರು.

ತಹಸೀಲ್ದಾರ್ ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಮಂಡ್ಯದಲ್ಲಿ ರೈತನಿಂದ ಲಂಚ ಸ್ವೀಕರಿಸುತ್ತಿದ್ದ ಎಫ್‌ಡಿಎ ವಶಕ್ಕೆ



ತಿಪ್ಪೇಸ್ವಾಮಿ

ಮಂಡ್ಯ,ಸೆ.4– ಮಂಡ್ಯ ತಹಸೀಲ್ದಾರ್ ಕಚೇರಿ ಮೇಲೆ ಲೋಕಾಯುಕ್ತ ದಾಳಿ ನಡೆಸಿದ್ದು, ರೈತರೊಬ್ಬರಿಂದ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಭೂಮಿ ಶಾಖೆಯ ಎಫ್‌ಡಿಎ ತಿಪ್ಪೇಸ್ವಾಮಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

10 ಸಾವಿರ ರೂ ಲಂಚಕ್ಕೆ ಬೇಡಿಕೆ ಇಟ್ಟಿದ್ದ ತಿಪ್ಪೇಸ್ವಾಮಿ ವಿರುದ್ಧ ಮಂಡ್ಯ ತಾಲೂಕಿನ ಮರಕಾಡುದೊಡ್ಡಿ ಗ್ರಾಮದ ಮೋಹನ್ ಎಂಬುವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಲೋಕಾಯುಕ್ತ ಸಿಪಿಐ ಬ್ಯಾಟರಾಯಗೌಡ ನೇತೃತ್ವದಲ್ಲಿ ದಾಳಿ ನಡೆಸಿ, ತಿಪ್ಪೇಸ್ವಾಮಿಯನ್ನು ವಶಕ್ಕೆ ಪಡೆಯಲಾಗಿದೆ.


ಹೆಚ್ಚಿನ ವಿಚಾರಣೆಗೆ ಲೋಕಾಯುಕ್ತ ಕಚೇರಿಗೆ ತಿಪ್ಪೇಸ್ವಾಮಿಯನ್ನು ಅಧಿಕಾರಿಗಳು ಕರೆದೊಯ್ದಿದ್ದು, ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆ ನಡೆಸುತ್ತಿದ್ದಾರೆ.

ಗಗನಚುಕ್ಕಿ ಜಲಪಾತೋತ್ಸವ ಕಾರ್ಯಕ್ರಮ: ಅರ್ಜಿ ಆಹ್ವಾನ

ಮಂಡ್ಯ, ಸೆ.4– ಮಳವಳ್ಳಿ ತಾಲೂಕಿನ 2024–25 ನೇ ಸಾಲಿನ ಗಗನಚುಕ್ಕಿ ಜಲಪಾತೋತ್ಸವ ಕಾರ್ಯಕ್ರಮವನ್ನು ಸೆ.14 ಮತ್ತು 15 ರಂದು ಹಮ್ಮಿಕೊಳ್ಳಲಾಗಿದ್ದು ಕಾರ್ಯಕ್ರಮಕ್ಕೆ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಸೆ6ರೊಳಗೆ ತಮ್ಮ ಕಲಾ ಪ್ರಕಾರ ಮಾಹಿತಿಯೊಂದಿಗೆ ಬ್ಯಾಂಕ್ ಖಾತೆ ಜೆರಾಕ್ಸ್ ಪ್ರತಿ ಸಹಿತ ಮಂಡ್ಯ ಜಿಲ್ಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08232–223197 ಅನ್ನು ಸಂಪರ್ಕಿಸಬಹುದು

ಪಾಂಡವಪುರ ಬಳಿ ಬೋನಿಗೆ ಬಿದ್ದ ಚಿರತೆ



ಪಾಂಡವಪುರ,ಸೆ4– ತಾಲೂಕಿನ ಜಾಗಟೆ ಮಲ್ಲೇನಹಳ್ಳಿ ಗ್ರಾಮದ ಹೊರವಲಯದ ಯೋಗೇಶ್ ಅವರ ಜಮೀನಿನಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಇರಿಸಿದ್ದ ಬೋನಿಗೆ ನಾಲ್ಕು ವರ್ಷದ ಗಂಡು ಚಿರತೆ ಬಿದ್ದಿದೆ.

ರೈತ ಯೋಗೇಶ್ ಅವರ ಜಮೀನಿನ ಸುತ್ತಮುತ್ತ ಚಿರತೆ ಪದೇಪದೇ ಕಾಣಿಸಿಕೊಂಡು ಜನರಲ್ಲಿ ಆತಂಕ ಸೃಷ್ಟಿಸಿತ್ತು. ಜತೆಗೆ ಹಲವು ಕುರಿ, ಮೇಕೆಗಳನ್ನು ಸಹ ಕೊಂದು ತಿಂದಿತ್ತು. ಇದರಿಂದ ಸ್ಥಳೀಯರ ರೈತರು ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದ ಬಳಿಕ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದಾಗ ಚಿರತೆಯ ಹೆಜ್ಜೆಗಳು ಪತ್ತೆಯಾಗಿದ್ದವು.

ಇದರಿಂದ ರೈತ ಯೋಗೇಶ್ ಅವರ ಜಮೀನಿನಲ್ಲಿ ಅರಣ್ಯಾಧಿಕಾರಿಗಳು ಕಳೆದ ನಾಲ್ಕು ದಿನಗಳ ಹಿಂದೆ ಚಿರತೆ ಸೆರೆಗೆ ಬೋನ್ ಹಾಕಿ ನಾಯಿ ಕಟ್ಟಿದ್ದರು. ಮಂಗಳವಾರ ರಾತ್ರಿ ಚಿರತೆ ಅರಣ್ಯ ಇಲಾಖೆಯ ಬೋನಿಗೆ ಬಿದ್ದಿದೆ. ಬುಧವಾರ ಬೆಳಿಗ್ಗೆ ರೈತ ಯೋಗೇಶ್ ಜಮೀನಿ ಬಳಿ ಹೋದಂತಹ ಸಂದರ್ಭದಲ್ಲಿ ಚಿರತೆ ಬೋನಿಗೆ ಬಿದ್ದಿರುವ ವಿಚಾರ ತಿಳಿದಿದೆ. ತಕ್ಷಣ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಆಗಮಿಸಿದ ಅರಣ್ಯಾಧಿಕಾರಿ ಹಾಗೂ ಸಿಬ್ಬಂದಿಗಳು ಚಿರತೆಯನ್ನು ಬೋನ್ ಸಮೇತ ಕೊಂಡೊಯ್ದರು.

ಜಾಗಟೆ ಮಲ್ಲೇನಹಳ್ಳಿ ಗ್ರಾಮದ ಹೊರವಲಯದಲ್ಲಿ ಬೋನಿಗೆ ಬಿದ್ದಿರುವ 4 ವರ್ಷದ ಚಿರತೆಯನ್ನು ವೈದ್ಯಕೀಯ ಪರೀಕ್ಷೆ ನಡೆಸಿ, ಮೇಲಾಧಿಕಾರಿಗಳ ಸೂಚನೆಯಂತೆ ಮಹದೇಶ್ವರಬೆಟ್ಟದ ಅರಣ್ಯ ಪ್ರದೇಶಕ್ಕೆ ಬಿಡಲಾಗುವುದು ಎಂದು ವಲಯ ಅರಣ್ಯಾಧಿಕಾರಿ ಜಗದೀಶ್‌ಗೌಡ ತಿಳಿಸಿದರು.

ಸಿ.ಎಸ್.ಪುಟ್ಟರಾಜುಗೆ ಬಿಜೆಪಿ ಅಭಿನಂದನೆ

ಪಾಂಡವಪುರ, ಸೆ.4– ಪಾಂಡವಪುರ ಪುರಸಭೆಯಲ್ಲಿ ಜೆಡಿಎಸ್ ಸ್ಪಷ್ಟ ಬಹುಮತ ಹೊಂದಿದ್ದರು, ಬಿಜೆಪಿಯ ಸದಸ್ಯ ಎಲ್.ಅಶೋಕ್ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಮೂಲಕ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಮೈತ್ರಿಧರ್ಮ ಪಾಲಿಸಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್ ಹೇಳಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಪುರಸಭೆಯ ನೂತನ ಉಪಾಧ್ಯಕ್ಷ ಎಲ್.ಅಶೋಕ್ ಅವರನ್ನು ಅಭಿನಂದಿಸಿ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಪುರಸಭೆಯಲ್ಲಿ ಬಿಜೆಪಿ ಅಭ್ಯರ್ಥಿ ಎಲ್.ಅಶೋಕ್ ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡುವ ಮೂಲಕ ಎನ್‌ಡಿಎ ಮೈತ್ರಿ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದೆ ಎಂಬ ದೊಡ್ಡ ಸಂದೇಶವನ್ನು ನೀಡಿದ್ದಾರೆ. ಇದಕ್ಕೆ ಕಾರಣರಾದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರಿಗೆ ಪಕ್ಷದ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಮಳವಳ್ಳಿ ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷ ಗಾದಿ ಪಕ್ಷೇತರರ ಪಾಲು

ಮಳವಳ್ಳಿ,ಸೆ.4– ಪಟ್ಟಣದ ಪುರಸಭೆಯ ನೂತನ ಅಧ್ಯಕ್ಷರಾಗಿ ಪಕ್ಷೇತರ ಸದಸ್ಯ ಪುಟ್ಟಸ್ವಾಮಿ ಹಾಗೂ ಉಪಾಧ್ಯಕ್ಷರಾಗಿ ಪಕ್ಷೇತರ ಸದಸ್ಯ ಎನ್.ಬಸವರಾಜು(ಜಯಸಿಂಹ) ಆಯ್ಕೆಯಾದರು.


ಮಳವಳ್ಳಿ ಪುರಸಭೆಯಲ್ಲಿ 23 ಸದಸ್ಯರಿದ್ದು ಜೆಡಿಎಸ್ 9, ಕಾಂಗ್ರೆಸ್ 5, ಬಿಜೆಪಿ 2, 7 ಮಂದಿ ಪಕ್ಷೇತರರು ಆಯ್ಕೆಯಾಗಿದ್ದಾರೆ. ಬುಧವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನ ಎಂ.ಆರ್.ರಾಜಶೇಖರ್ ಹಾಗೂ ಪಕ್ಷೇತರ ಸದಸ್ಯ ಪುಟ್ಟಸ್ವಾಮಿ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಸದಸ್ಯರಾದ ಎಸ್.ಕವಿತಾ ಕೃಷ್ಣ ಎಂ.ಎನ್.ಶಿವಸ್ವಾಮಿ ಹಾಗೂ ಪಕ್ಷೇತರ ಎನ್.ಬಸವರಾಜು ನಾಮಪತ್ರ ಸಲ್ಲಿಸಿದ್ದರು. ಎಸ್.ಕವಿತಾ ಕೃಷ್ಣ ನಾಮ ಪತ್ರ ತಿರಸ್ಕೃತವಾಯಿತು.

ನಂತರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ 4ನೇ ವಾರ್ಡ್‌ನ ಪಕ್ಷೇತರ ಸದಸ್ಯ ಪುಟ್ಟಸ್ವಾಮಿ ಪರವಾಗಿ ಜೆಡಿಎಸ್‌ನ ಏಳು ಮಂದಿ, ಬಿಜೆಪಿಯ ಇಬ್ಬರು ಹಾಗೂ ನಾಲ್ವರು ಪಕ್ಷೇತರರು ಮತಚಲಾಯಿಸಿದರು. 14 ಮತ ಪಡೆದ ಅವರು ಅಧ್ಯಕ್ಷರಾಗಿ ಆಯ್ಕೆಯಾದರು. ಕಾಂಗ್ರೆಸ್‌ನ ಎಂ.ಆರ್.ರಾಜಶೇಖರ್ ಅವರಿಗೆ ಕಾಂಗ್ರೆಸ್‌ನ ಐವರು, ಜೆಡಿಎಸ್ ಹಾಗೂ ಪಕ್ಷೇತರ ತಲಾ ಇಬ್ಬರು ಸದಸ್ಯರು ಮತ ನೀಡಿದರು. 15 ಮತ ಪಡೆದ ಎನ್.ಬಸವರಾಜು ಉಪಾಧ್ಯಕ್ಷರಾಗಿ ಆಯ್ಕೆಯಾದರೆ, 8 ಮತ ಗಳಿಸಿದ ಎಂ.ಎನ್.ಶಿವಸ್ವಾಮಿ ಪರಾಭವಗೊಂಡರು.

ಚುನಾವಣಾಧಿಕಾರಿಯಾಗಿ ತಹಸೀಲ್ದಾರ್ ಕೆ.ಎನ್.ಲೋಕೇಶ್ ಹಾಗೂ ಸಹಾಯಕರಾಗಿ ಗ್ರೇಡ್–2 ತಹಶೀಲ್ದಾರ್ ಬಿ.ವಿ.ಕುಮಾರ್, ಪುರಸಭೆ ಮುಖ್ಯಾಧಿಕಾರಿ ಎಂ.ಸಿ.ನಾಗರತ್ನ ಕಾರ್ಯನಿರ್ವಹಿಸಿದ್ದರು. ಮತದಾನದ ಹಕ್ಕು ಹೊಂದಿದ್ದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಗೈರಾಗಿದ್ದರು. ನೂತನ ಅಧ್ಯಕ್ಷ ಉಪಾಧ್ಯಕ್ಷರನ್ನು ಅಭಿನಂದಿಸಿ ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ಮಳವಳ್ಳಿ ಪುರಸಭೆಯಲ್ಲಿ ಎನ್‌ಡಿಎ ಮೈತ್ರಿಕೂಟದ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದಿದ್ದು, ಪಟ್ಟಣದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಲಿ ಎಂದು ಸಲಹೆ ನೀಡಿದರು.

ಬಿಜೆಪಿ ಮುಖಂಡ ಜಿ.ಮುನಿರಾಜು ಮಾತನಾಡಿ, ಮಾಜಿ ಶಾಸಕ ಕೆಅನ್ನದಾನಿ ಅವರೊಂದಿಗೆ ಸೇರಿ ಜೆಡಿಎಸ್–ಬಿಜೆಪಿ ಸದಸ್ಯರ ಸಹಕಾರದಿಂದ ಎನ್‌ಡಿಎ ಮೈತ್ರಿಕೂಟದ ಪುಟ್ಟಸ್ವಾಮಿ, ಎನ್.ಬಸವರಾಜು ಆಯ್ಕೆಯಾಗಿದ್ದು, ಅಭಿವೃದ್ಧಿಗೆ ಮುಂದಾಗಲಿ ಎಂದು ಹೇಳಿದರು.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷಡಾ.ಇಂದ್ರೇಶ್ ಮಾತನಾಡಿ, ಮಂಡ್ಯ ನಗರಸಭೆ ಚುನಾವಣೆಯಲ್ಲಿ ಆರಂಭವಾದ ಸ್ಥಳೀಯ ಸಂಸ್ಥೆಯಲ್ಲಿನ ಜೆಡಿಎಸ್–ಬಿಜೆಪಿ ಮೈತ್ರಿ ಮತ್ತಷ್ಟು ಗಟ್ಟಿಯಾಗಿದ್ದು, ಈಗಾಗಲೇ ಪಾಂಡವಪುರ, ಮಳವಳ್ಳಿಯಲ್ಲೂ ಜೆಡಿಎಸ್–ಬಿಜೆಪಿ ಅಧಿಕಾರ ಹಿಡಿದಿದೆ. ಇದು ಮುಂದಿನ ದಿನಗಳಲ್ಲಿ ಮತ್ತಷ್ಟು ಬಲಿಷ್ಟವಾಗಲಿದೆ ಎಂದು ಅಭಿಪ್ರಾಯಪಟ್ಟರು. ಜೆಡಿಎಸ್–ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಜೆಡಿಎಸ್ ಜಿಲ್ಲಾ ಯುವ ಘಟಕದ ಅಧ್ಯಕ್ಷ ಬಿ.ರವಿ ಕಂಸಾಗರ, ಪುರಸಭೆ ಸದಸ್ಯರಾದ ಎಂ.ಎನ್.ಕೃಷ್ಣ, ಟಿ.ನಂದಕುಮಾರ್, ರವಿ, ಎಂ.ಟಿ.ಪ್ರಶಾಂತ್, ಆರ್.ಎನ್. ಸಿದ್ದರಾಜು, ಪಿ.ಕುಮಾರ್, ನಾಗೇಶ್, ನೂರುಲ್ಲಾ ಇದ್ದರು.



ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಿದ ಸಂದರ್ಭ.

ಪರಿಷತ್ ಸದಸ್ಯ ಡಾ.ತಿಮ್ಮಯ್ಯನವರ ಹುಟ್ಟುಹಬ್ಬ ಅರ್ಥಪೂರ್ಣ ಆಚರಣೆ

ಮೈಸೂರು, ಸೆ.4(ಎಸ್‌ಬಿಡಿ)– ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರು ವಿಶೇಷಚೇತನರೊಂದಿಗೆ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ನೇತೃತ್ವದಲ್ಲಿ ತಿಲಕ್‌ನಗರದ ಕಿವುಡು ಮತ್ತು ಅಂಧ ಮಕ್ಕಳ ಶಾಲೆಯಲ್ಲಿ ಬುಧವಾರ ಏರ್ಪಡಿಸಲಾಗಿದ್ದ 'ವಿಶೇಷಚೇತನಗಳೊಂದಿಗೆ ಜನುಮ ದಿನ ಆಚರಣೆ' ಕಾರ್ಯಕ್ರಮದಲ್ಲಿ ಡಾ.ಡಿ.ತಿಮ್ಮಯ್ಯ ಅವರೇ ಸಿಹಿ ತಿನಿಸು ಹಾಗೂ ಊಟ ಬಡಿಸಿದರು.

ಈ ವೇಳೆ ಮಾತನಾಡಿದ ಅವರು, ಆಡಂಬರದ ಹುಟ್ಟುಹಬ್ಬ ಆಚರಣೆ ಸಾಮಾನ್ಯ ಎನ್ನುವಂತಾಗಿರುವ ಈ ಕಾಲಘಟ್ಟದಲ್ಲಿ ನನ್ನ ಸ್ನೇಹಿತ ಶಿವರಾಮು, ವಿಕಲಚೇತನರೊಂದಿಗೆ ನನ್ನ ಹುಟ್ಟುಹಬ್ಬ ಆಚರಣೆ ಏರ್ಪಡಿಸಿರುವುದಕ್ಕೆ ತುಂಬಾ ಸಂತೋಷವಾಗಿದೆ ಎಂದು ಭಾವುಕರಾದರು.

ಯಾರೇ ಆದರೂ ಕಠಿಣ ಪರಿಶ್ರಮ ಹಾಗೂ ಬದ್ಧತೆಯಿಂದ ಓದಿದಾಗ ಮಾತ್ರ ಸಾಧನೆ ಮಾಡಲು ಸಾಧ್ಯ. ನಮ್ಮ ಹುಣಸೂರು ತಾಲೂಕಿನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡಿದವರಲ್ಲಿ ನಾನೇ ಮೊದಲಿಗ. ನನ್ನ ಸಾಧನೆ ಗುರುತಿಸಿ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ನನ್ನನ್ನು ಸರ್ಕಾರಿ ಸೇವೆಗೆ ಸೇರಿಸಿದರು. ಚಿಕ್ಕ ವಯಸ್ಸಿನಲ್ಲಿಯೇ ಜಿಲ್ಲಾ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದ್ದರಿಂದ ವಿವಿಧ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಿದೆ. ಇದಕ್ಕೆ ದೇವರಾಜ ಅರಸು ಅವರೇ ಮೂಲ ಕಾರಣಕರ್ತರು. ಮಕ್ಕಳು ಪರಿಶ್ರಮದೊಂದಿಗೆ ಅಧ್ಯಯನ ಮಾಡಿ, ಸಾಧನೆ ಹಾದಿಯಲ್ಲಿ ಹೆಜ್ಜೆ ಹಾಕಿದರೆ ಪ್ರೋತ್ಸಾಹಿಸುವವರು ಯಾರಾದರೂ ಇದ್ದೇ ಇರುತ್ತಾರೆ ಎಂದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ದೇವರಾಜ ಅರಸು ಅವರನ್ನು ಸಾಮಾಜಿಕ ನ್ಯಾಯದ ಪಿತಾಮಹ ಎಂದು ಜನ ಸ್ಮರಿಸಿಕೊಳ್ಳುತ್ತಾರೆ. ಹಾಗೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಶೋಷಿತರು ಹಾಗೂ ತಳ ಸಮುದಾಯದ ರಕ್ಷಕರಾಗಿದ್ದಾರೆ. ಅವರ ಒಡನಾಟದಲ್ಲಿ ಬೆಳೆದ ಡಾ.ಡಿ.ತಿಮ್ಮಯ್ಯ ಅವರೂ ವೈದ್ಯ ವೃತ್ತಿಯಲ್ಲಿ ಸರ್ಕಾರದ ಸವಲತ್ತುಗಳನ್ನು ಅರ್ಹರು ಹಾಗೂ ಬಡವರಿಗೆ ತಲುಪಿಸಿ, ಜನಪ್ರಿಯರಾದರು. ಆದ್ದರಿಂದಲೇ ಸಿದ್ದರಾಮಯ್ಯನವರು ವಿಧಾನಪರಿಷತ್ ಚುನಾವಣೆಗೆ ತಿಮ್ಮಯ್ಯ ಅವರಿಗೆ ಟಿಕೆಟ್ ನೀಡಿ ಗೆಲ್ಲಿಸಿಕೊಂಡರು. ಇವರ ಸಾಮಾಜಿಕ ಸೇವೆ ಹೀಗೆಯೇ ಮುಂದುವರೆಯಲಿ ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಾಹಿತಿ ಪ್ರೊ.ಕೆ.ಎಸ್.ಭಗವಾನ್, ಸಮಾಜ ಸೇವಕ ಡಾ.ಕೆ.ರಘುರಾಮ ವಾಜಪೇಯಿ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಉಪ್ಪಾರರ ಸಂಘದ ಯೋಗೀಶ್ ಉಪ್ಪಾರ್, ಮಡಿವಾಳ ಸಂಘದ ರವಿ, ಕುಂಬಾರರ ಸಂಘದ ಹೆಚ್.ಎಸ್.ಪ್ರಕಾಶ್, ವಿಶ್ವಕರ್ಮ ಸಂಘದ ಮೊಗಣ್ಣಾಚಾರ್, ಲೋಕೇಶ್ ಕುಮಾರ್ ಮಾದಾಪುರ, ಮಹೇಂದ್ರ ಕಾಗಿನೆಲೆ, ಎನ್.ಆರ್.ಸಿದ್ದು, ಹರೀಶ್ ಮೊಗಣ್ಣ, ಆರ್.ಕೆ.ರವಿ, ಸುನೀಲ್ ನಾರಾಯಣ್, ದಿನೇಶ್, ರಾಜಶೇಖರ್, ರವಿ ನಜರ್ಬಾದ್, ಮಹದೇವ್, ಡಿ.ಬಸಪ್ಪ(ಕೆಆರ್ ಬ್ಯಾಂಕ್), ದೀಪಕ್ ಪುಟ್ಟಸ್ವಾಮಿ, ಕೇಶವ್, ಲಕ್ಷ್ಮಿ ಮುಂತಾದವರು ಪಾಲ್ಗೊಂಡಿದ್ದರು.



ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಏರ್ಪಡಿಸಿದ್ದ 'ವಿಶೇಷಚೇತನಗಳೊಂದಿಗೆ ಜನ್ಮ ದಿನ ಆಚರಣೆ'ಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಕ್ಕಳಿಗೆ ಊಟ ಬಡಿಸಿದರು. ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಹಲವು ವೃತ್ತಗಳ ಸಿಗ್ನಲ್ ಲೈಟ್‌ಗಳಿಗೆ ಗ್ರಹಣ!



ಮಾನಸಗಂಗೋತ್ರಿ ಬಳಿಯ ಬೋಗಾದಿ ಮುಖ್ಯರಸ್ತೆಯ ಜಂಕ್ಷನ್.





ವಿವಿ ಪುರಂ ವೃತ್ತದಲ್ಲಿ ಸಿಗ್ನಲ್ ಲೈಟ್‌ಗೆ ಬಳ್ಳಿ ಹಬ್ಬಿರುವುದು. ಮತ್ತೊಂದು ಚಿತ್ರದಲ್ಲಿ ಇದೇ ವೃತ್ತದ ವಾಹನ ದಟ್ಟಣೆ ಕಾಣಬಹುದು.

• ಆತಂಕದಲ್ಲೇ ಹಾದುಹೋಗುತ್ತಿರುವ ವಾಹನ ಚಾಲಕರು • ಹಲವು ತಿಂಗಳುಗಳೇ ಕಳೆದರೂ ವ್ಯವಸ್ಥೆಯತ್ತ ಯಾರೂ ಗಮನವೂ ಇಲ್ಲ • ಸುಗಮ ಸಂಚಾರಕ್ಕೆ ತೊಡಕು • ಆಗಾಗ್ಗೆ ಸಣ್ಣಪುಟ್ಟ ಅಪಘಾತ • ಶೀಘ್ರ ಕ್ರಮಕ್ಕೆ ಸಾರ್ವಜನಿಕರ ಆಗ್ರಹ

ಮೈಸೂರು, ಸೆ.4(ಪಿಎಂ)– ದಸರಾ ಇನ್ನೇನು ಸಮೀಪವಿದೆ. ಪ್ರವಾಸಿಗರ ದಂಡು ಮೈಸೂರು ನಗರಕ್ಕೆ ಲಗ್ಗೆಯಿಡಲು ದಿನ ಗಣನೆ ಆರಂಭವಾಗಿದೆ. ಈಗಾಗಲೇ ಜನ ಮತ್ತು ವಾಹನ ದಟ್ಟಣೆಯಿಂದ ತುಂಬಿರುವ ನಗರದ ರಸ್ತೆ ಮತ್ತು ವೃತ್ತಗಳಲ್ಲಿ ಪ್ರವಾಸಿಗರ ಆಗಮನದೊಂದಿಗೆ ಮತ್ತಷ್ಟು ಒತ್ತಡ ಹೆಚ್ಚಾಗಲಿದೆ.

ಈ ನಡುವೆ ಹಲವು ದಿನಗಳಿಂದ ನಗರದ ವಿವಿಧೆಡೆ ಹಲವು ಟ್ರಾಫಿಕ್ ಸಿಗ್ನಲ್ ಲೈಟ್‌ಗಳು ಕೆಟ್ಟಿರುವ ಕಾರಣ ಇಲ್ಲೆಲ್ಲಾ ಸುಗಮ ಸಂಚಾರ ಇಲ್ಲದೇ ವಿವಿಧ ದಿಕ್ಕುಗಳಿಂದ ಏಕಾಲದಲ್ಲಿ ವಾಹನಗಳು ಮುನ್ನುಗುವುದು ಸಾಮಾನ್ಯ ಸಂಗತಿಯಾಗಿದೆ. ಪರಿಣಾಮ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿದ್ದು, ಇದರಿಂದ ವಾಹನ ಸವಾರರ ನಡುವೆ ಮಾತಿನ ಚಕಮಕಿ ಆಗಾಗ್ಗೆ ನಡೆಯುತ್ತಲೂ ಇದೆ. ಅದೃಷ್ಟವಾಶತ್ ಭಾರೀ ಅನಾಹುತ ಸಂಭವಿಸಿಲ್ಲ ಎಂಬುದು ಸಮಾಧಾನದ ಸಂಗತಿ.

ಪ್ರಾಣಕ್ಕೆ ಸಂಚಕಾರ: ಟ್ರಾಫಿಕ್ ಸಿಗ್ನಲ್ ದೀಪಗಳು ಬೆಳಗಿ ಸಂಕೇತ ನೀಡದ ಕಾರಣ ಇಲ್ಲಿ ಸುಗಮ ಸಂಚಾರ ಇಲ್ಲದೇ ವಾಹನ ಸವಾರರು ಯಾಮಾರಿದರೆ ಪ್ರಾಣಕ್ಕೆ ಸಂಚಾರ ಉಂಟಾಗಲಿದೆ ಎನ್ನುವ ಮಾತುಗಳು ನಾಗರಿಕರಿಂದ ಕೇಳಿಬರುತ್ತಿವೆ. ಇಂತಹ ಪರಿಸ್ಥಿತಿ ಇದ್ದರೂ ನಗರ ಪೊಲೀಸರು, ಕೆಟ್ಟು ನಿಂತಿರುವ ಟ್ರಾಫಿಕ್ ಸಿಗ್ನಲ್ ಲೈಟ್‌ಗಳಿಗೆ ಕಾಯಕಲ್ಪ ನೀಡಲು ಮುಂದಾಗುತ್ತಿಲ್ಲ ಎಂಬ ಬೇಸರವೂ ಸಾರ್ವಜನಿಕರಿಂದ ವ್ಯಕ್ತವಾಗಿದೆ.

ಟ್ರಾಫಿಕ್ ಸಿಗ್ನಲ್‌ಗಳ ವ್ಯವಸ್ಥೆ ಇಲ್ಲದೇ ಸುಗಮ ಸಂಚಾರ ಅಸಾಧ್ಯ ಎನ್ನುವಷ್ಟು ದಟ್ಟಣೆ ಇಂದು ಮಹಾನಗರಗಳಲ್ಲಿ ಸಾಮಾನ್ಯ. ಇಂತಹ ಪರಿಸ್ಥಿತಿಯಿಂದ ಮೈಸೂರು ನಗರವೂ ಹೊರತಾಗಿಲ್ಲ. ನಗರದಲ್ಲಿ ಜನದಟ್ಟಣೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಅಂತೆಯೇ ವಾಹನಗಳ ಸಂಖ್ಯೆಯೂ ದುಪ್ಪಟ್ಟಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಕೆಟ್ಟು ನಿಂತಿರುವ ಟ್ರಾಫಿಕ್ ಸಿಗ್ನಲ್‌ಗಳನ್ನು ಶೀಘ್ರವೇ ಸುವ್ಯವಸ್ಥೆಗೆ ತರುವುದು ಅತ್ಯಂತ ಅಗತ್ಯ. ಹೀಗಿದ್ದರೂ ನಗರ ಪೊಲೀಸ್ ಮಾತ್ರ ತ್ವರಿತ ಕ್ರಮ ಕೈಗೊಳ್ಳದೇ ಇರುವುದು ಸರಿಯಲ್ಲವೆಂದು ನಾಗರಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ತಿಲಕನಗರದ ಸಯ್ಯಾಜಿರಾವ್ ರಸ್ತೆ ಮತ್ತು ಬ್ರಹ್ಮಶ್ರೀ ನಾರಾಯಣ ಗುರು ರಸ್ತೆ ಜಂಕ್ಷನ್‌ನಲ್ಲಿರುವ ಸಿಗ್ನಲ್ ಹಲವು ದಿನಗಳಿಂದ ಕಾರ್ಯನಿರ್ವಹಿಸದೇ ಇಲ್ಲಿ ವಾಹನ ಚಾಲಕರು ಮನ ಬಂದಂತೆ ಮುನ್ನುಗ್ಗುವ ಸನ್ನಿವೇಶ ಸೃಷ್ಟಿಯಾಗಿದೆ. ಇದರಿಂದ ಸಣ್ಣಪುಟ್ಟ ಅಪಘಾತಗಳೂ ನಡೆದಿವೆ. ಇದೇ ಜಂಕ್ಷನ್ ಸಮೀಪದಲ್ಲೇ ಅಂಧ ಮತ್ತು ಕಿವುಡರ ಸರ್ಕಾರಿ ಶಾಲೆಯೂ ಇದ್ದು, ಇಲ್ಲಿಗೆ ಅನತಿ ದೂರದಲ್ಲಿ ವಿಶೇಷ ಚೇತನರ ಪುನರ್‌ವಸತಿ ಕೇಂದ್ರವೂ ಇದೆ.

ವಿಶೇಷಚೇತನರು ಹೈರಾಣು: ಹೀಗಾಗಿ ಇಲ್ಲಿ ವಿಶೇಷಚೇತನರು ಸಂಚಾರವೂ ಇದ್ದೇ ಇರುತ್ತದೆ. ಇಲ್ಲಿ ಟ್ರಾಫಿಕ್ ಸಿಗ್ನಲ್ ಕಾರ್ಯಾಚರಣೆಯಲ್ಲಿ ಇಲ್ಲದ ಕಾರಣ ವಿಶೇಷಚೇತರು ರಸ್ತೆ ದಾಟುವುದಕ್ಕೂ ವಾಹನ ದಟ್ಟಣೆ ನಡುವೆ ಕಾದು ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಿಗ್ನಲ್ ಸ್ಥಗಿತವಾದರೂ ಒಬ್ಬ ಪೊಲೀಸ್ ಪೇದೆಯನ್ನಾದರೂ ನಿಯೋಜಿಸುವ ಗೋಜಿಗೆ ನಗರ ಪೊಲೀಸ್ ಆಡಳಿತ ಮುಂದಾಗಿಲ್ಲ. ಇಲ್ಲಿ ಸಿಗ್ನಲ್ ಸರಿ ಇದ್ದಾಗ ಒಬ್ಬ ಪೊಲೀಸ್ ಪೇದೆ ಯಾದರೂ ಕಾರ್ಯನಿರ್ವಹಿಸುವುದು ಕಾಣಿಸುತ್ತಿತ್ತು. ಆದರೆ ಈಗ ಅತ್ತ ಸಿಗ್ನಲ್ ಕೂಡ ಇಲ್ಲ, ಇತ್ತ ಪೊಲೀಸ್ ಕೂಡ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ವಾಹನ ಸವಾರರು ನಾ ಮುಂದು, ತಾ ಮುಂದು ಎಂಬಂತೆ ಮನಬಂದಂತೆ ಏಕಕಾಲದಲ್ಲಿ ನುಗ್ಗುವುದು ಸಾಮಾನ್ಯವಾಗಿದೆ.

ಬೆಳಗದ ಹಳದಿ ದೀಪ!:

ನಗರದ ಬಹುತೇಕ ಸಿಗ್ನಲ್ ಲೈಟ್‌ಗಳಲ್ಲಿ ಸವಾರರು ನಿಲ್ಲುವ ಎಡಭಾಗದ ಸಿಗ್ನಲ್ ಲೈಟ್ ಕಂಬದಲ್ಲಿರುವ ಕೆಂಪು, ಹಳದಿ ಹಾಗೂ ಹಸಿರು ಸೇರಿದಂತೆ ಯಾವುದೇ ಬೀದಿಗಳು ಬೆಳಗದ ಪರಿಸ್ಥಿತಿ ಇದೆ. ಜೊತೆಗೆ ಬಹುತೇಕ ಸಿಗ್ನಲ್ ಲೈಟ್‌ಗಳಲ್ಲಿ ಹಳದಿ ದೀಪವೇ ಬೆಳಗದ ಸ್ಥಿತಿಯೂ ಇದೆ. ಏಕಾಏಕಿ ಹಸಿರು ದೀಪ ಇಲ್ಲವೇ ಕೆಂಪು ದೀಪ ಬೆಳಗುವುದು ಇಂತಹವುಗಳಲ್ಲಿ ಸಾಮಾನ್ಯ ವಾಗಿದೆ. ಕೆಆರ್ ವೃತ್ತ, ನಾರಾಯಣ ಶಾಸ್ತ್ರಿ ರಸ್ತೆ ಹಾಗೂ ಚಾಮರಾಜ ಜೋಡಿ ರಸ್ತೆ ಸಂಧಿಸುವ ತಾತಯ್ಯ ವೃತ್ತದಲ್ಲಿರುವ ಸಿಗ್ನಲ್‌ಗಳು ಸೇರಿದಂತೆ ಹಲವು ಸಿಗ್ನಲ್‌ಗಳಲ್ಲಿ ಇದೇ ಪರಿಸ್ಥಿತಿ ಇದೆ. ಈ ನಿಟ್ಟಿನಲ್ಲಿಯೂ ಸಿಗ್ನಲ್ ಲೈಟ್‌ಗಳಿಗೆ ಕಾಯಕಲ್ಪ ನೀಡಬೇಕಿದೆ.

ವಾಹನಗಳಿಗಿಲ್ಲ ನಿಯಂತ್ರಣ: ಇನ್ನು ಇದನ್ನು ದಾಟಿ ನಗರದ ಹೃದಯಭಾಗದತ್ತ ಸಾಗಲು ಹೊರಟರೇ ಸುಭಾಷ್ ಚಂದ್ರ ಬೋಸ್ ವೃತ್ತ (ಆರ್‌ಎಂಸಿ ವೃತ್ತ) ಇದ್ದು, ಇಲ್ಲಿಯೂ ಸಿಗ್ನಲ್ ಕೆಟ್ಟು ವಾಹನ ಸಂಚಾರಕ್ಕೆ ನಿಯಂತ್ರಣ ಇಲ್ಲವಾಗಿದೆ. ಇದರಿಂದ ಈ ವೃತ್ತದ ನಾಲ್ಕಾರು ದಿಕ್ಕುಗಳಲ್ಲಿರುವ ರಸ್ತೆಗಳತ್ತ ಏಕಕಾಲದಲ್ಲಿ ವಾಹನ ಸವಾರರು ಮುನ್ನುಗುವ ಪ್ರಯತ್ನ ಆಗಾಗ್ಗೆ ಇಲ್ಲಿ ಸಾಮಾನ್ಯವಾಗಿದೆ.

ಹೊಸ ಸಿಗ್ನಲ್ ಲೈಟ್‌ಗಳಿಗೂ ಗ್ರಹಣ: ಕಳೆದ ವರ್ಷ ಡಿಸೆಂಬರ್‌ನಲ್ಲಿ ಸಿಗ್ನಲ್ ಲೈಟ್‌ಗಳನ್ನು ಜೆಎಲ್‌ಬಿ ರಸ್ತೆ ಹಾಗೂ ವಾಣಿವಿಲಾಸ ರಸ್ತೆ ಸಂಧಿಸುವ ಶ್ರೀಕಂಠೇಶ್ವರ ಅಯ್ಯರ್ ವೃತ್ತ (ಆರ್‌ಟಿಓ ಕಚೇರಿ ವೃತ್ತ) ಹಾಗೂ ಕೃಷ್ಣರಾಜ ಬುಲೇವಾರ್ಡ್ ರಸ್ತೆಯ ಕೌಟಿಲ್ಯ ವೃತ್ತದಲ್ಲಿ ಹೊಸದಾಗಿ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಯಿತು. ಆದರೆ ಅವುಗಳು ಈವರೆಗೂ ಬೆಳಗಿಲ್ಲ ಎನ್ನುತ್ತಾರೆ ಸ್ಥಳೀಯರು. ಇಲ್ಲಿಗೆ ಸಮೀಪದ ಏಕಲವ್ಯ ವೃತ್ತದ ಸಿಗ್ನಲ್ ಸಹ ಹಲವು ದಿನಗಳಿಂದ ಬೆಳಗುತ್ತಿಲ್ಲ. ಮೈಸೂರು ವಿವಿಯ ಮಹಾರಾಜ ಕಾಲೇಜು ಸೇರಿದಂತೆ ಅನೇಕ ಶಿಕ್ಷಣ ಸಂಸ್ಥೆಗಳು ಈ ವೃತ್ತದ ಸಮೀಪದಲ್ಲೇ ಇವೆ. ಇದೇ ಕೃಷ್ಣಬುಲೇವಾರ್ಡ್ ರಸ್ತೆಯಲ್ಲಿ ಜಿಲ್ಲಾ ನ್ಯಾಯಾಲಯ, ಜಿಪಂ ಕಚೇರಿ ಇದ್ದು, ನಗರದ ಹೃದಯ ಭಾಗದಿಂದ ಸರಸ್ವತಿಪುರಂ ಹಾಗೂ ಕೆಜಿ ಕೊಪ್ಪಲು, ಕುವೆಂಪುನಗರ ಮೊದಲಾದ ಬಡಾವಣೆಗಳಿಗೂ ತೆರಳಲು ಈ ವೃತ್ತದ ಮೂಲಕವೂ ಹೆಚ್ಚಿನ ಜನ ವಾಹನಗಳಲ್ಲಿ ಸಾಗುತ್ತಾರೆ. ಇನ್ನು ಅಗ್ರಹಾರ ಸಮೀಪದ ಸಿದ್ಧಪ್ಪ ವೃತ್ತದ ಸಿಗ್ನಲ್ ಸಹ ಕೆಟ್ಟಿದ್ದು, ಈ ವೃತ್ತದ ಮೂಲಕವೂ ಹೆಚ್ಚಿನ ವಾಹನ ಸಂಚಾರ ನಿತ್ಯ ಇದ್ದೇ ಇರುತ್ತದೆ.

ಪೈಪೋಟಿ ಚಾಲನೆ: ಯಾದವಗಿರಿಯ ಕೆಆರ್‌ಎಸ್ ರಸ್ತೆ ಹಾಗೂ ವಿವೇಕಾನಂದ ರಸ್ತೆಯ ಆಕಾಶವಾಣಿ ವೃತ್ತದಲ್ಲಿಯೂ (ತರಾಸು ವೃತ್ತ) ಸಿಗ್ನಲ್ ಕೆಟ್ಟು ದಿನಗಳ ಉರುಳುತ್ತಿವೆ. ಆದರೂ ಅದರ ದುರಸ್ತಿ ಮಾತ್ರ ಆಗುತ್ತಲೇ ಇಲ್ಲ. ಸಿಗ್ನಲ್ ಇಲ್ಲದೇ ಇರುವುದೇ ವರ ದಾನ ಎಂಬಂತೆ ಕೆಲ ವಾಹನ ಸವಾರು ಪೈ ಪೋಟಿಯಲ್ಲಿ ನುಗ್ಗುವುದು ಇಲ್ಲಿಯೂ ಸಾಮಾನ್ಯವಾಗಿದೆ.

ವಿವಿ ಪುರಂನ ಟೆಂಪಲ್ ರಸ್ತೆ ಹಾಗೂ ಕೆಆರ್‌ಎಸ್ ರಸ್ತೆ ಜಂಕ್ಷನ್‌ನಲ್ಲಿರುವ ಜೋಡಿ ವೃತ್ತದಲ್ಲಿ ಜೋಡಿ ಸಿಗ್ನಲ್ ವ್ಯವಸ್ಥೆಯೂ ಇದೆ. ಆದರೆ ಕಾರ್ಯಾಚರಣೆ ಇಲ್ಲದೆ ದಿನಗಳು ಕಳೆಯುತ್ತಿವೆ. ಈ ಎರಡೂ ಸಿಗ್ನಲ್‌ಗಳು ಕೆಟ್ಟು ಸುಮಾರು ಒಂದೂವರೆ ತಿಂಗಳೇ ಕಳೆದಿವೆ ಎನ್ನುತ್ತಾರೆ ಸ್ಥಳೀಯರು. ಜೊತೆಗೆ ಇಲ್ಲಿನ ಸಿಗ್ನಲ್ ಕಂಬ ಒಂದಕ್ಕೆ ಗಿಡದ ಬಳಿಗಳು ಸುತ್ತಿಕೊಂಡಿದ್ದು, ಅದನ್ನಾದರೂ ತೆರವುಗೊಳಿಸಲು ಮುಂದಾಗಿಲ್ಲ. ಇದರಿಂದ ಈಗಾಗಲೇ ದುಸ್ಥಿತಿಯಲ್ಲಿರುವ ಸಿಗ್ನಲ್ ಕಂಬಗಳು ಮತ್ತಷ್ಟು ದುರಾವಸ್ಥೆಗೆ ತಲುಪುವುದನ್ನು ತಳ್ಳಿ ಹಾಕಲಾಗದು.

ಕೆಆರ್‌ಎಸ್ ಕಡೆಗೆ ಸಾಗುವ ಬಸ್‌ಗಳು ಸೇರಿದಂತೆ ಸಾರ್ವಜನಿಕರ ವಾಹನಗಳ ಸಂಚಾರ ಸದಾ ಇದ್ದೇ ಇರುತ್ತದೆ. ಗೋಕುಲಂ, ವಿವಿ ಪುರಂ ಪ್ರದೇಶಗಳು ಇದ್ದು ಜನದಟ್ಟಣೆ ಇಲ್ಲಿ ನಿತ್ಯ ಸಾಮಾನ್ಯ. ಇದೊಂದು ಮುಖ್ಯ ವೃತ್ತವಾಗಿದ್ದು, ನಾಗರಿಕರೂ ಮಾತ್ರವಲ್ಲದೆ, ಶಾಲಾ ಮಕ್ಕಳೂ ಇಲ್ಲಿ ಸಂಚರಿಸು ತ್ತಾರೆ. ಸಿಗ್ನಲ್ ಎದುರೇ ವಿವಿ ಪುರಂ ಸಂಚಾರ ಠಾಣೆ ಹಾಗೂ ಕಾನೂನು ಸುವ್ಯವಸ್ಥೆ ಠಾಣೆ ಎರಡೂ ಇವೆ. ಆದರೂ ಸಂಚಾರ ನಿಯಂತ್ರಿಸಲು ಒಬ್ಬ ಸಿಬ್ಬಂದಿ ನಿಯೋಜನೆಯೂ ಇಲ್ಲ.

ಜೆಎಲ್‌ಬಿ ರಸ್ತೆಯ ಜಾವಗಲ್ ಶ್ರೀನಾಥ್ ವೃತ್ತ, ಇದೇ ರಸ್ತೆಯ ಮುಡಾ ಎದುರಿನ ವೃತ್ತ ಹಾಗೂ ಮಾನಸ ಗಂಗೋತ್ರಿಯ ಬಳಿಯ ವಿಶ್ವಮಾನವ ಜೋಡಿ ರಸ್ತೆ ಮತ್ತು ಬೋಗಾದಿ ರಸ್ತೆಯ ಜಂಕ್ಷನ್‌ನಲ್ಲೂ ಸಿಗ್ನಲ್ ಲೈಟ್‌ಗಳ ಕಾರ್ಯ ಸ್ಥಗಿತಗೊಂಡಿದೆ. ಟ್ರಾಫಿಕ್ ಸಿಗ್ನಲ್‌ಗಳ ನಿರ್ವಹಣೆ ಟೆಂಡರ್ ಅವಧಿ ಪೂರ್ಣಗೊಂಡ ಕಾರಣ ಸಿಗ್ನಲ್‌ಗಳ ದುರಸ್ತಿ ಸಾಧ್ಯವಾಗುತ್ತಿಲ್ಲ ಎನ್ನುವ ಮಾಹಿತಿ ಮೂಲಗಳಿಂದ ಲಭ್ಯವಾಗಿದ್ದು, ನಗರ ಪೊಲೀಸ್ ಈಗಲಾದರೂ ಶೀಘ್ರ ಕ್ರಮ ವಹಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂಬುದು ಸಾರ್ವಜನಿಕರ ಒತ್ತಾಯವಾಗಿದೆ. ನಗರದಲ್ಲಿ ಇತ್ತೀಚೆಗೆ ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಕ್ರಮಕ್ಕೆ ಎಐ ಕ್ಯಾಮರಾ ವ್ಯವಸ್ಥೆ ಅಳವಡಿಸಿದ್ದು, ಅವುಗಳೊಂದಿಗೆ ಸಿಗ್ನಲ್‌ಗಳೂ ಸೂಕ್ತವಾಗಿದ್ದರೆ ಸುಗಮ ಸಂಚಾರ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಆಗಲಿದೆ ಎನ್ನುವ ಅಭಿಪ್ರಾಯ ಸಾರ್ವಜನಿಕರಿಂದ ಕೇಳಿಬಂದಿದೆ.



ಜೆಎಲ್‌ಬಿ ರಸ್ತೆಯಲ್ಲಿರುವ ಮುಡಾ ಕಚೇರಿ ಎದುರಿನ ವೃತ್ತ.

ದಿವಾನ್ಸ್ ರೋಡ್, ನಂ.ಗೂಡು ರಸ್ತೆಯಲ್ಲಿ ಮರ ಬಿದ್ದು ಕಾರುಗಳು, ಆಟೋ ಜಖಂ

ಮೈಸೂರು, ಸೆ.4(ಆರ್‌ಕೆ)–ಎರಡು ಪ್ರತ್ಯೇಕ ಸ್ಥಳಗಳಲ್ಲಿ ಮರ ಉರುಳಿ ಬಿದ್ದು 2 ಕಾರುಗಳು ಮತ್ತು ಒಂದು ಆಟೋ ಜಖಂಗೊಂಡಿರುವ ಘಟನೆ ಮೈಸೂರಿನ ದಿವಾನ್ಸ್ ರಸ್ತೆ ಮತ್ತು ನಂಜನಗೂಡು ರಸ್ತೆಯ ಜೆಎಸ್‌ಎಸ್ ಕಾಲೇಜು ಬಳಿ ಇಂದು ಮಧ್ಯಾಹ್ನ ಸಂಭವಿಸಿದೆ.

ಮಧ್ಯಾಹ್ನ ಸುಮಾರು 2 ಗಂಟೆ ವೇಳೆಗೆ ದಿವಾನ್ಸ್ ರಸ್ತೆಯ ಶ್ರೀ ಅಮೃತೇಶ್ವರ ದೇವಸ್ಥಾನದೆದುರು ಕಾಂಪೌಂಡ್ ಪಕ್ಕದಲ್ಲಿ ಪಾರ್ಕ್ ಮಾಡಿದ್ದ ರಿನಾಲ್ಟ್, ಮಾರುತಿ ಸ್ವಿಫ್ಟ್ ಕಾರು ಮತ್ತು ಆಟೋವೊಂದರ ಮೇಲೆ ಮರವೊಂದು ಬುಡಸಮೇತ ಉರುಳಿ ಬಿದ್ದಿತು. ಆ ವೇಳೆ ವಾಹನಗಳಲ್ಲಿ ಯಾರೂ ಇರಲಿಲ್ಲವಾದ್ದರಿಂದ ಯಾವುದೇ ಪ್ರಾಣಾಪಾಯಗಳಾಗಿಲ್ಲ. ಆದರೆ, ಮೂರೂ ವಾಹನಗಳು ಜಖಂಗೊಂಡಿವೆ ಎಂದು ದೇವರಾಜ ಠಾಣೆ ಪೊಲೀಸರು ತಿಳಿಸಿದ್ದಾರೆ.

ಅಡ್ಡಲಾಗಿ ಮರ ಬಿದ್ದ ಕಾರಣ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ವಿಷಯ ತಿಳಿಯುತ್ತಿದ್ದಂತೆಯೇ ಸಂಚಾರ ಪೊಲೀಸರು ನಂಜರಾಜ ಬಹದ್ದೂರ್ ಛತ್ರದ ಕಾರ್ನರ್‌ನಲ್ಲಿ ಬ್ಯಾರಿಕೇಡ್ ಹಾಕಿ ಅರಸು ರಸ್ತೆ, ಮೆಟ್ರೋಪೋಲ್ ಸರ್ಕಲ್ ಕಡೆಯಿಂದ ಬರುವ ವಾಹನಗಳ ಮಾರ್ಗ ಬದಲಿಸಿ, ಪಾಲಿಕೆ ಅಭಯ ಟೀಂ ಸಿಬ್ಬಂದಿಗಳನ್ನು ಕರೆಸಿ ಮರವನ್ನು ತೆರವುಗೊಳಿಸಿದ ನಂತರ ದಿವಾನ್ಸ್ ರಸ್ತೆಯಲ್ಲಿ ಸಂಚಾರ ಸುಗಮಗೊಂಡಿತು.

ಮತ್ತೊಂದೆಡೆ ನಂಜನಗೂಡು ರಸ್ತೆಯ ಜೆಎಸ್‌ಎಸ್ ಕಾಲೇಜು ಮತ್ತು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಡುವೆ ಮರ ಉರುಳಿ ಆ ಮಾರ್ಗ ಸಂಚರಿಸುತ್ತಿದ್ದ ಮಾರುತಿ ಸ್ವಿಫ್ಟ್ ಕಾರಿನ ಮೇಲೆ ಬಿದ್ದಿತು. ಕಾರಿನ ಚಾಲಕ ಅಪಾಯದಿಂದ ಪಾರಾದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ತಕ್ಷಣ ಸ್ಥಳಕ್ಕೆ ಧಾವಿಸಿದ ಕೆಆರ್ ಠಾಣೆ ಹಾಗೂ ಸಂಚಾರ ಠಾಣೆ ಪೊಲೀಸರು ಮರವನ್ನು ತೆರವುಗೊಳಿಸಿದರು. ಈ ಸಂದರ್ಭ ಕೆಲ ಕಾಲ ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು. ಒಣಗಿದ, ಟೊಳ್ಳಾಗಿ ಬೀಳುವ ಸ್ಥಿತಿಯಲ್ಲಿರುವ ಮರ–ರೆಂಬೆಗಳನ್ನು ತೆರವುಗೊಳಿಸಿ ಸಂಭವಿಸಬಹುದಾದ ಅಪಾಯವನ್ನು ತಪ್ಪಿಸಬೇಕೆಂದು ಸಾರ್ವಜನಿಕರು ನಗರಪಾಲಿಕೆಯನ್ನು ಒತ್ತಾಯಿಸಿದ್ದಾರೆ.



ಮೈಸೂರಿನ ದಿವಾನ್ಸ್ ರಸ್ತೆಯಲ್ಲಿ ರಿನಾಲ್ಟ್ ಕಾರಿನ ಮೇಲೆ ಮರ ಬಿದ್ದಿರುವುದು.



ನಂಜನಗೂಡು ರಸ್ತೆಯಲ್ಲಿ ಸ್ವಿಫ್ಟ್ ಕಾರಿನ ಮೇಲೆ ಮರ ಬಿದ್ದು ಜಖಂ ಆಗಿರುವುದು.

ಬಿಜಿಎಸ್ ಆಸ್ಪತ್ರೆಯಿಂದ ಅಪೋಲೋ ರಸಪ್ರಶ್ನೆ ವಿಜೇತರಿಗೆ ಬಹುಮಾನ




ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆ ವತಿಯಿಂದ ಅಂಗಾಂಗ ದಾನದ ಕುರಿತು ನಡೆದ ಅಪೋಲೋ ರಸಪ್ರಶ್ನೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಸೆ. 4– ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆ ವತಿಯಿಂದ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಅಂಗಾಂಗ ದಾನದ ಕುರಿತು ಅಪೋಲೊ ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಅಂಗಾಂಗ ದಾನದ ಮಹತ್ವ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಮೈಸೂರಿನ ವಿವಿಧ ಪದವಿ ಕಾಲೇಜುಗಳ ವಿದ್ಯಾರ್ಥಿಗಳನ್ನು ಈ ಕಾರ್ಯಕ್ರಮದಲ್ಲಿ ಒಟ್ಟುಗೂಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮೈಸೂರು ಅಪೋಲೋ ಬಿಜಿಎಸ್ ಆಸ್ಪತ್ರೆಗಳ ಉಪಾಧ್ಯಕ್ಷರು ಮತ್ತು ಘಟಕದ ಮುಖ್ಯಸ್ಥ ಎನ್.ಜಿ.ಭರತೀಶ ರೆಡ್ಡಿ ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿದ್ದರು. ಡಾ.ರಾಜ್ ಕುಮಾರ್ ಪಿ. ವಾಧ್ವಾ, ಮುಖ್ಯ ಗ್ಯಾಸ್ಟ್ರೋಎಂಟರಾಲಜಿಸ್ಟ್ ಮತ್ತು ಗ್ಯಾಸ್ಟ್ರೋಎಂಟರಾಲಜಿ ಸಂಸ್ಥೆಯ ಮುಖ್ಯಸ್ಥ ಡಾ.ಶ್ರೀನಿವಾಸ್ ನಲ್ಲೂರು, ಮುಖ್ಯ ನೆಫ್ರಾಲಜಿಸ್ಟ್ ಮತ್ತು ಕಿಡ್ನಿ ಕಸಿ ವೈದ್ಯರು, ಡಾ. ಮಣಿಯರ್ ರಾಘವೇಂದ್ರನ್, ಸಲಹೆಗಾರ ಮೂತ್ರಶಾಸ್ತ್ರಜ್ಞ ಮತ್ತು HOD ಡಾ.ಪ್ರವೀಣ್ ಚಂದ್ರಶೇಖರ್, ಸಮಾಲೋಚಕ ನೆಫ್ರಾಲಜಿಸ್ಟ್; ಡಾ.ಕಿರಣ್ ಕುಮಾರ್ ಶೆಟ್ಟಿ, ಸಮಾಲೋಚಕ ಮೂತ್ರಶಾಸ್ತ್ರಜ್ಞ ಮತ್ತು ಆಂಡ್ರೊಲೊಜಿಸ್ಟ್ ಹಾಗೂ, ಮೂತ್ರಪಿಂಡ ಕಸಿ ತಜ್ಞರು; ಮತ್ತು ಡಾ.ಆತೀರಾ ರವೀಂದ್ರನಾಥ್, ಸಲಹೆಗಾರ ಪೀಡಿಯಾಟ್ರಿಕ್ ಗ್ಯಾಸ್ಟ್ರೋಎಂಟರಾಲಜಿಸ್ಟ್ ಭಾಗವಹಿಸಿದ್ದರು.

ವಿಜೇತರು: ಮೈಸೂರಿನ ಯುವರಾಜ ಕಾಲೇಜಿನ ಅಮೋಘ ವೇದಾಂತ್ ರಾಯ್ ಎಂ.ಕೆ. ಮತ್ತು ಅನೀಶ್ ಆರ್. ಭಟ್; ಮೊದಲ ರನ್ನರ್–ಅಪ್: ಮೈಸೂರಿನ ಟೆರೇಸಿಯನ್ ಕಾಲೇಜಿನ ಹಾರ್ವಿನ್ ಮತ್ತು ಮಯೂರಿ ರಾವ್; ಎರಡನೇ ರನ್ನರ್–ಅಪ್: ಮೈಸೂರಿನ ಅಮೃತ ವಿಶ್ವ ವಿದ್ಯಾಪೀಠದಿಂದ ಅಶ್ವಿನ್ ಎಸ್. ಮತ್ತು ಅಮೀನ ಕಾಜಿ

ಸೆ.8, ಶರಣ ಶ್ರೀ ನುಲಿಯ ಚಂದಯ್ಯ ಜಯಂತಿ



ಮೈಸೂರು,ಸೆ.4–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶರಣ ಶ್ರೀ ನುಲಿಯ ಚಂದಯ್ಯ ಜಯಂತಿಯನ್ನು ಸೆ.8 ರಂದು ಬೆಳಗ್ಗೆ 10 ಗಂಟೆಗೆ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಕುಂದೂರು ಮಠದ ಪೀಠಾಧಿಪತಿ ಡಾ.ಶ್ರೀ ಶರತ್‌ಚಂದ್ರ ಸ್ವಾಮೀಜಿ ಹಾಗೂ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಬೃಹನ್ಮಠದ ಪೀಠಾಧಿಪತಿ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷ ಅನಿಲ್‌ಕುಮಾರ್, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್, ಬಂಡಿಸಿದ್ದೇಗೌಡ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಸುನಿಲ್ ಬೋಸ್ ಭಾಗವಹಿಸುವರು. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್‌ಗೌಡ, ಹೆಚ್. ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಯತೀಂದ್ರ ವಿವೇಕಾನಂದ ಪಾಲ್ಗೊಳ್ಳಲಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಸೆ.4– ದೊಡ್ಡಕೆರೆ ಮೈದಾನ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ತುರ್ತು ಕಾಮಗಾರಿ ನಿಮಿತ್ತ ಸೆ.5ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಗುಂಡೂರಾವ್‌ನಗರ, ಮುನೇಶ್ವರನಗರ, ಗೌರಿಶಂಕರನಗರ, ಜಾಕಿ ಕ್ವಾರ್ಟರ್ಸ್, ಚಾಮುಂಡಿಬೆಟ್ಟ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮುಡಾ ಅಧ್ಯಕ್ಷ ಕೆ.ಮರೀಗೌಡ ಆಸ್ಪತ್ರೆಗೆ ದಾಖಲು



ಮೈಸೂರು,ಸೆ.4(ಆರ್‌ಕೆ)–ಅನಾರೋಗ್ಯದಿಂದಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಅಧ್ಯಕ್ಷ ಕೆ.ಮರೀಗೌಡ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮಂಗಳವಾರ ಬೆಂಗಳೂರಿನಿಂದ ಮೈಸೂರಿಗೆ ಬರುವಾಗ ತಲೆನೋವು ಕಾಣಿಸಿಕೊಂಡ ಕಾರಣ ನೇರವಾಗಿ ಆಸ್ಪತ್ರೆಗೆ ತೆರಳಿದರು. ಪರೀಕ್ಷಿಸಿದ ವೈದ್ಯರು, ರಕ್ತದೊತ್ತಡದಲ್ಲಿ ವ್ಯತ್ಯಾಸವಾಗಿರುವುದರಿಂದ ವಿಶ್ರಾಂತಿ ಪಡೆಯಬೇಕೆಂದು ಸಲಹೆ ನೀಡಿದ ಮೇರೆಗೆ ದಾಖಲಾಗಿದ್ದೇನಷ್ಟೇ. ಬೇರೆ ಏನೂ ಸಮಸ್ಯೆ ಇಲ್ಲ ಎಂದು ಮರೀಗೌಡರು 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಈ ಹಿಂದೆಯೂ ಮರೀಗೌಡರು ಅನಾರೋಗ್ಯದ ನಿಮಿತ್ತ ಆಸ್ಪತ್ರೆಗೆ ದಾಖಲಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಮೈಮುಲ್ ಅಧ್ಯಕ್ಷ ಚೆಲುವರಾಜುಗೆ ಅಭಿನಂದನೆ...



ಮೈಸೂರು ಹಾಲು ಒಕ್ಕೂಟದ ಅಧ್ಯಕ್ಷ ಚೆಲುವರಾಜು ಅವರನ್ನು ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ಉದ್ಯಮಿ ನಾಗಪ್ಪ, ರದೀಶ್ ಇದ್ದರು.

ಸೆ.8ರಿಂದ ತಿರುನಾಮ ಮಹಿಮೈ ಪ್ರವಚನ

ಮೈಸೂರು, ಸೆ.4–ಮೈಸೂರಿನ ಶ್ರೀ ಆಂಡಾಳ್ ಮಂದಿರಂ ಟ್ರಸ್ಟ್ ಆಶ್ರಯದಲ್ಲಿ ಸೆ.8ರಿಂದ 10ರವರೆಗೆ ಪ್ರತಿ ದಿನ ಸಂಜೆ 6 ಗಂಟೆಗೆ ಉ.ವೇ.ವೇಲಕ್ಕುಡಿ ಕೃಷ್ಣನ್ ಸ್ವಾಮಿ ಅವರಿಂದ 'ತಿರುನಾಮ ಮಹಿಮೈ' ವಿಸ್ತಾರವಾದ ವಿಷಯದಡಿಯಲ್ಲಿ ಸೆ.8ರಂದು 'ನಲಮ್ ತರುಮ್ ನಾರಾಯಣನ್' ಬಗ್ಗೆ ಸೆ.9ರಂದು 'ರಾಮ ರಸಂ' ಬಗ್ಗೆ, ಸೆ.10ರಂದು 'ಕುರೈಒನ್ರುಂಇಲ್ಲಾದ ಗೋವಿಂದನ್' ಬಗ್ಗೆಯೂ ಪ್ರವಚನವನ್ನು ಸಂಸ್ಥೆ ಆವರಣದಲ್ಲಿ ಏರ್ಪಡಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಸಮ್ಮೇಳನ ಉದ್ಘಾಟನೆ...



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಬುಧವಾರ ನಡೆದ ಭೌತಚಿಕಿತ್ಸೆಯ ಪ್ರಸ್ತುತ ಮತ್ತು ಭವಿಷ್ಯ ವಿಚಾರ ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ನವದೆಹಲಿಯ ಏಮ್ಸ್‌ನ ಡಾ.ಎ.ಸರವಣಮೂರ್ತಿ ಉದ್ಘಾಟಿಸಿದರು. ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಆಸ್ಪತ್ರೆಯ ಮುಖ್ಯಸ್ಥರಾದ ತೇಜಸ್ವಿನಿ, ಪ್ರೊ.ವಿಜಯ್ ಸ್ಯಾಮ್ಯುಯಲ್ ರಾಜ್, ಡಾ.ಕವಿತಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ವಿನಾಯಕ ನಗರದಲ್ಲಿ ನಾಳೆ ಗೌರಿ–ಗಣೇಶ ಹಬ್ಬ

ಮೈಸೂರು,ಸೆ.4–ಮೈಸೂರಿನ ವಿನಾಯಕನಗರದಲ್ಲಿರುವ ಶ್ರೀ ವಿದ್ಯಾ ಗಣಪತಿ ದೇವಸ್ಥಾನ ಹಾಗೂ ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್ ವತಿಯಿಂದ ಗೌರಿ–ಗಣೇಶ ಹಬ್ಬ, 44ನೇ ವಾರ್ಷಿಕೋತ್ಸವ ಪೂಜಾ ಮಹೋತ್ಸವ ಏರ್ಪಡಿಸಲಾಗಿದೆ. ಸೆ.6ರಂದು ಬೆಳಗ್ಗೆ 5 ಗಂಟೆಗೆ ಸ್ವರ್ಣಗೌರಿ ಪ್ರತಿಷ್ಠಾಪನೆ, 7 ಗಂಟೆಗೆ ಮಹಾಮಂಗಳಾರತಿ ನೆರವೇರಿಸಲಾಗುವುದು. ಸೆ.7ರಂದು ಬೆಳಗ್ಗೆ 4 ಗಂಟೆಗೆ ಮಹಾಗಣಪತಿಗೆ ಪಂಚಾಮೃತ ಅಭಿಷೇಕ, 7 ಗಂಟೆಗೆ ಮಹಾಗಣಪತಿ ಸ್ಥಾಪನೆ, ನಂತರ 1008 ಮೋದಕಗಳಿಂದ ವಿದ್ಯಾ ಗಣಪತಿ ಹೋಮ ಮತ್ತು 108 ತೆಂಗಿನಕಾಯಿಗಳಿಂದ ಬೆಳಗ್ಗೆ 9.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ ನಡೆಯಲಿದೆ. ಬೆಳಗ್ಗೆ 10 ಗಂಟೆಗೆ ಭೋಜನ ಏರ್ಪಡಿಸಲಾಗಿದ್ದು, ಸೆ.16ರಂದು ಸಂಜೆ 4 ಗಂಟೆಗೆ ಊರಿನ ಪ್ರಮುಖ ರಸ್ತೆಗಳಲ್ಲಿ ವಾದ್ಯಮೇಳದೊಂದಿಗೆ ಗಣಪತಿ ಉತ್ಸವ ಮೂರ್ತಿ ರಥೋತ್ಸವ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಸನ್ಮಾನ...



ಮೈಸೂರು ಭಾವಸಾರ ಕ್ಷತ್ರಿಯ ಮಂಡಳಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶಿವಾಜಿರಾವ್, ಕಾರ್ಯದರ್ಶಿ ರಾಕೇಶ್, ಮೈಸೂರು ಜಿಲ್ಲಾ ಮಡಿವಾಳ ಸಂಘದ ಕಾರ್ಯಾಧ್ಯಕ್ಷ ನಾಗೇಶ್, ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಕಾರ್ಯದರ್ಶಿ ರಾಂಪ್ರಸಾದ್ ಕಾಮತ್ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಆತ್ಮೀಯವಾಗಿ ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ರಾ.ಪರಮೇಶಗೌಡ, ಸೋಮಶೇಖರ ರಾಜು, ನಾರಾಯಣಗೌಡ, ಟೆನ್ನಿಸ್ ಗೋಪಿ, ದೀಪಕ್ ಗೌಡ, ನಾಗೇಶ್ ಯಾದವ್, ಬ್ರಹ್ಮಚಾರ್, ಹರೀಶ್, ಸುರೇಂದ್ರ, ಪ್ರಮೋದ್, ನಂಜಪ್ಪ, ಕಿರಣ್, ಶ್ರವಣ್ ಮಾಲಿ, ಮಂಜುನಾಥ್, ಕೃಷ್ಣ, ವಿನೋದ್ ಮತ್ತಿತರರು ಉಪಸ್ಥಿತರಿದ್ದರು.

ಸೆ.9ರಿಂದ ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಸೆ. 4– ಶ್ರೀ ರವಿಶಂಕರ್ ಗುರೂಜಿಯ ಆರ್ಟ್ ಆಫ್ ಲಿವಿಂಗ್ ವತಿಯಿಂದ ಸೆ.9ರಿಂದ 13ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆ ಕಲಿಸುವ ಶಿಬಿರವನ್ನು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6 ರಿಂದ 8.30 ಹಾಗೂ ಸಂಜೆ 6ರಿಂದ 8.30ವರೆಗೆ ನಡೆಯಲಿದೆ.

ಹೆಚ್ಚಿನ ಮಾಹಿತಿಗೆ 9480476825, 9483589825 ಸಂಪರ್ಕಿಸಬಹುದು.

ಅವಿಭಕ್ತ ಕುಟುಂಬದಿಂದ ಹೊರಬಂದರೆ ಮನೋರೋಗಿಗಳಾಗುವಿರಿ

- ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಳ್ಳಿ ಶಿವಪ್ರಸಾದ್ ಅಭಿಪ್ರಾಯ
- ಸಾಧಕ ಕಲಾವಿದರಿಗೆ 'ಜಾನಪದ ದನಿಸಿರಿ' ಪ್ರಶಸ್ತಿ ಪ್ರದಾನ

ಮೈಸೂರು, ಸೆ.4 (ಎಸ್‌ಪಿಎನ್)–ಅವಿಭಕ್ತ ಕುಟುಂಬ ಪರಿಕಲ್ಪನೆಯಿಂದ ಮಕ್ಕಳು ಹೊರಬಂದರೆ ಮುಂದೆ ಆ ಮಕ್ಕಳು ಒಂಟಿತನದಿಂದ ಮನೋರೋಗಿಗಳಾಗುವ ಸಾಧ್ಯತೆಯೇ ಹೆಚ್ಚು ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಳ್ಳಿ ಶಿವಪ್ರಸಾದ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಜನಪದ ಕಲೆಗಳ ಕಲಿಕಾ ಕೇಂದ್ರ ಹಾಗೂ ಮೈಸೂರಿನ ಏಕತಾರಿ ಸಾಂಸ್ಕೃತಿಕ ಸಂಘಟನೆ ಸಹಯೋಗದೊಂದಿಗೆ ಶಾಲಾ–ಕಾಲೇಜು ವಿದ್ಯಾರ್ಥಿಗಳ ಜನಪದ ನೃತ್ಯ ಮತ್ತು ಗೀತೆಗಳ ಕಲಿಕಾ ತರಬೇತಿ ಶಿಬಿರ–2024ರ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರಸ್ತುತ ಮಕ್ಕಳಿಗೆ ಅಪ್ಪ–ಅಮ್ಮ, ಅಜ್ಜ–ಅಜ್ಜಿ, ದೊಡ್ಡಪ್ಪ–ದೊಡ್ಡಮ್ಮ ಹಾಗೂ ಚಿಕ್ಕಮ್ಮ–ಚಿಕ್ಕಪ್ಪ ಎಂಬ ಸಂಬಂಧಗಳ ಬಗ್ಗೆ ಅರಿವಿಲ್ಲ. ಅಂಕ ಆಧಾರಿತ ಶಿಕ್ಷಣದಿಂದಾಗಿ ಎಲ್ಲ ಸಂಬಂಧಗಳು ಮೊಬೈಲ್‌ನಲ್ಲಿ ಹುಡುಕುವ ಪರಿಸ್ಥಿತಿ ಬಂದಿದೆ. ಹಾಗಾಗಿ ಮಕ್ಕಳು ಪುನಃ ತಮ್ಮ ಬಾಲ್ಯದ ನೆನಪು ಮಾಡಿಕೊಳ್ಳಬೇಕಾದರೆ, ಜಾನಪದ ನೃತ್ಯ ಹಾಗೂ ಗಾಯನಗಳ ಕಲಿಕೆ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಈ ಹಿಂದೆ ಮಕ್ಕಳು ಹಠ ಮಾಡಿದಾಗ ಚಂದಮಾಮನನ್ನು ತೋರಿಸಿ ತಾಯಿ ಊಟ ಮಾಡಿಸುತ್ತಿದ್ದಳು. ಈಗ ಮಕ್ಕಳು ಅತ್ತರೆ, ಮೊಬೈಲ್ ಕೊಟ್ಟು ಕೂರಿಸುವ ಪದ್ಧತಿ ರೂಢಿಯಾಗುತ್ತಿದೆ. ಮೊಬೈಲ್‌ನಲ್ಲಿ ಮಕ್ಕಳು ಏನನ್ನು ನೋಡುತ್ತಾರೆ. ಏನನ್ನು ಕಲಿಯುತ್ತಾರೆ ಎಂಬುದು ಯಾರಿಗೂ ತಿಳಿಯುವುದಿಲ್ಲ. ಮುಂದೆ ಮಕ್ಕಳು ಯಾರೊಂದಿಗೆ ಬೆರೆಯದೇ ಒಂಟಿತನದಲ್ಲಿ ಬದುಕುವುದನ್ನು ರೂಢಿಸಿಕೊಳ್ಳುತ್ತಾರೆ. ಮಕ್ಕಳ ಬದುಕು ನಿಮ್ಮ ಊಹೆಗೆ ಬಿಟ್ಟಿದ್ದು ಎಂದರು.

ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರಾದ ಗುರುರಾಜ್ ಮೈಸೂರು, ಮಲ್ಲಿಕಾರ್ಜುನ ಕೆಂಕೆರೆ, ಉಮೇಶ್ ಸೇರಿದಂತೆ ಇತರೆ ಸದಸ್ಯರು ನನಗೆ ಸಾಥ್ ನೀಡುತ್ತಿದ್ದು, ಎಲ್ಲರ ಸಹಕಾರದಿಂದ ಜಾನಪದ ಕಲೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಪ್ರಯತ್ನಿಸುತ್ತೇನೆ ಎಂದರು.

ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ಜಾನಪದ ನಮ್ಮ ಸಂಸ್ಕೃತಿಯ ಮೂಲ ಬೇರು. ಇದನ್ನು ಉಳಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿದ್ದು. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ರಂಗಾಯಣ, ನಾಟಕ, ಜಾನಪದ, ಬಯಲಾಟ ಸೇರಿದಂತೆ ಇತರೆ ಅಕಾಡೆಮಿಗಳ ಮೂಲಕ ಜಾನಪದ ಕಲೆಗಳನ್ನು ಉಳಿಸಲು ಶ್ರಮಿಸಲಾಗುತ್ತಿದೆ ಎಂದರು.

ಈ ವೇಳೆ ಜಾನಪದ ಕಲಾವಿದರಾದ ನಂಜೇಗೌಡ, ಸಿ.ಎಂ.ನರಸಿಂಹಮೂರ್ತಿ, ನಾಗೇಶ್ ಕಂದೇಗಾಲ, ಅಮ್ಮರಾಮಚಂದ್ರ, ಮಹಾಲಿಂಗ, ಲಕ್ಷ್ಮೀರಾಮ್, ಪಿ.ಸೋಮಶೇಖರ್, ಐ.ಡಿ.ಲೋಕೇಶ್, ಎಲ್.ವಿಶ್ವನಾಥ್, ಮಧುಸೂದನ್, ಎಂ.ಸಿ. ಅರುಣ್, ಸಿಂಚನ, ರಶ್ಮಿ ಶ್ರೀವತ್ಸ ಪಾವನಿ, ನಾರಾಯಣ, ಎಸ್.ಆರ್.ಪ್ರದೀಪ್, ರಮೇಶ್ ತಾಯೂರು, ಪುಷ್ಪಾ, ಸಿದ್ದೇಶ್ ಬದನವಾಳು, ಸುನೀಲ್ ನಾಯಕ್, ರಾಜೀವ, ಕೆ.ಕೆ.ಶ್ಯಾಮಲ ಕುಮಾರಿ, ಸುರಭಿ, ನವೀನ್ ಸೇರಿದಂತೆ ಇತರರಿಗೆ ಜಾನಪದ ದನಿಸಿರಿ ಪ್ರಶಸ್ತಿಯನ್ನು ನೀಡಿ, ಗೌರವಿಸಲಾಯಿತು. ವೇದಿಕೆ ಕಾರ್ಯಕ್ರಮ ನಂತರ ಶಿಬಿರಾರ್ಥಿಗಳಿಂದ ರಾಗಿ ಬೀಸೋ ಪದ, ಸೋಬಾನೆ ಪದ, ಲಾವಣಿ, ತತ್ವಪದ, ಗೀಗೀಪದ, ಮಂಟೇಸ್ವಾಮಿ ಕಾವ್ಯ, ಮಹದೇಶ್ವರ ಕಾವ್ಯ, ಅಳಬೇಡ ನನ್ನ ಕಂದ, ಜೋ ಜೋ ಪದ, ಬೆಳಗಾಗಿ ನಾನೆದ್ದು, ಸೋಜುಗಾದ ಸೂಜು ಮಲ್ಲಿಗೆ, ಪರಿಸರ ಗೀತೆಗಳನ್ನ ಹಾಡಿ, ಗಮನ ಸೆಳೆದರು.



ಜನಪದ ನೃತ್ಯ ಮತ್ತು ಗೀತೆಗಳ ಕಲಿಕಾ ತರಬೇತಿ ಶಿಬಿರ–2024ರ ಸಮಾರೋಪದಲ್ಲಿ ಶಿಬಿರದ ವಿದ್ಯಾರ್ಥಿಗಳೊಂದಿಗೆ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಳ್ಳಿ ಶಿವಪ್ರಸಾದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ನಗಾರಿ ಬಾರಿಸುವ ಮೂಲಕ ಜಾನಪದ ನೃತ್ಯ ಮತ್ತು ಗಾಯನ ಪ್ರದರ್ಶನ ಉದ್ಘಾಟಿಸಿದರು.

ದೇಶ - ವಿದೇಶ

ಭಾರತಕ್ಕೆ ತಲೆನೋವು ತಂದ ನೇಪಾಳದ ಹೊಸ ಕರೆನ್ಸಿ



ಕಠ್ಮಂಡು: ನೇಪಾಳ ಕೇಂದ್ರೀಯ ಬ್ಯಾಂಕ್ ಹೊರತರಲು ನಿರ್ಧರಿಸಿರುವ ಹೊಸ ಕರೆನ್ಸಿ ಇದೀಗ ಭಾರತದ ತಲೆನೋವಿಗೆ ಕಾರಣವಾಗಿದೆ. ನೇಪಾಳದ ಸೆಂಟ್ರಲ್ ಬ್ಯಾಂಕ್ ವರ್ಷದೊಳಗೆ ಹೊಸ ಕರೆನ್ಸಿ ನೋಟುಗಳನ್ನು ಮುದ್ರಿಸಲು ಸಿದ್ಧತೆ ನಡೆಸುತ್ತಿದ್ದು, ಇದು ಭಾರತದ ಕೆಂಗಣ್ಣಿಗೆ ಗುರಿಯಾಗಿದೆ. ನೇಪಾಳ ಮತ್ತು ಭಾರತದ ವಿವಾದಿತ ಪ್ರದೇಶಗಳನ್ನು ಒಳಗೊಂಡಿರುವ ಪರಿಷ್ಕೃತ ನಕ್ಷೆಯನ್ನು ಒಳಗೊಂಡಿರುವ ಚಿತ್ರದ ಹೊಸ ನೋಟನ್ನು ಮುದ್ರಿಸಲು ನೇಪಾಳ ಮುಂದಾಗಿದೆ. ನೇಪಾಳ ರಾಷ್ಟ್ರ ಬ್ಯಾಂಕ್ ಈಗಾಗಲೇ ಹೊಸ ನಕ್ಷೆಯೊಂದಿಗೆ ನೋಟುಗಳನ್ನು ಮುದ್ರಿಸುವ ಪ್ರಕ್ರಿಯೆಯನ್ನು ರವಾನಿಸಿದ್ದು, ಇದರಲ್ಲಿ ಕಲಾಪಾನಿ, ಲಿಪುಲೇಖ್ ಮತ್ತು ಲಿಂಪಿಯಾಧುರಾ ಸೇರಿವೆ. ಹೊಸ ನೋಟುಗಳನ್ನು ಮುದ್ರಿಸುವ ಪ್ರಕ್ರಿಯೆಯನ್ನು ಬ್ಯಾಂಕ್ ಈಗಾಗಲೇ ಆರಂಭಿಸಿದ್ದು, ಆರು ತಿಂಗಳಿಂದ ಒಂದು ವರ್ಷದಲ್ಲಿ ಅದು ಪೂರ್ಣಗೊಳ್ಳಲಿದೆ ಎಂದು ಬ್ಯಾಂಕ್‌ನ ಜಂಟಿ ವಕ್ತಾರ ದಿಲ್ಲಿರಾಮ್ ಪೊಖರೆಲ್ ಆನ್‌ಲೈನ್ ನ್ಯೂಸ್ ಪೋರ್ಟಲ್‌ಗೆ ತಿಳಿಸಿದ್ದಾರೆ.

ಗೋ ಕಳ್ಳಸಾಗಣೆ ಶಂಕೆ: ಅಮಾಯಕ ವಿದ್ಯಾರ್ಥಿಗೆ ಗುಂಡಿಕ್ಕಿ ಹತ್ಯೆ



ಚಂಡೀಗಡ: ಗೋವು ಕಳ್ಳಸಾಗಣೆ ಮಾಡುತ್ತಿದ್ದಾರೆ ಎಂದು ತಪ್ಪಾಗಿ ತಿಳಿದು ವಿದ್ಯಾರ್ಥಿಯೊಬ್ಬನನ್ನು ಗುಂಪೊಂದು 30 ಕಿ.ಮೀ ತನಕ ಹಿಂಬಾಲಿಸಿ, ಗುಂಡಿಟ್ಟು ಹತ್ಯೆ ಮಾಡಿರುವ ಆಘಾತಕಾರಿ ಘಟನೆ ಹರ್ಯಾಣದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ನಗರದಲ್ಲಿ ರೆನಾಲ್ಟ್ ಡಸ್ಟರ್, ಟೊಯೊಟಾ ಫಾರ್ಚೂನರ್ ಕಾರುಗಳಲ್ಲಿ ಕಿಡಿಗೇಡಿಗಳು ದನಗಳ ಕಳ್ಳಸಾಗಾಣಿಕೆ ಮಾಡುತ್ತಿದ್ದಾರೆ ಎಂಬ ಮಾಹಿತಿ ಗೋವು ರಕ್ಷಕರ ಗುಂಪಿಗೆ ಸಿಕ್ಕಿತ್ತು. ಈ ಹಿನ್ನೆಲೆಯಲ್ಲಿ ತಪಾಸಣೆ ಮಾಡುವ ವೇಳೆ ದೆಹಲಿ–ಆಗ್ರಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರಿನಲ್ಲಿ ಗುಂಪೊಂದು ತೆರಳುತ್ತಿರುವುದು ಕಂಡುಬಂತು. ಅದೇ ಕಾರನ್ನು ಗೋಕಳ್ಳರ ಕಾರೆಂದು ಭಾವಿಸಿದ ತಂಡ, ಅವರನ್ನು ದಿಲ್ಲಿ–ಆಗ್ರಾ ನಡುವಿನ ಹೆದ್ದಾರಿಯಲ್ಲಿ 30 ಕಿ.ಮೀ ದೂರದವರೆಗೆ ಹಿಂಬಾಲಿಸಿದೆ. ಕಾರು ನಿಲ್ಲಿಸುವುದಕ್ಕೆ ಸೂಚಿಸಿದೆ. ಆದರೆ ಭಯದಿಂದ ಆರ್ಯನ್, ಸ್ನೇಹಿತರು ಕಾರನ್ನು ಮತ್ತಷ್ಟು ವೇಗವಾಗಿ ಓಡಿಸಿಕೊಂಡು ಹೋಗಿದ್ದಾರೆ. ಈ ವೇಳೆ ಆರೋಪಿಗಳು ಕಾರಿನತ್ತ ಗುಂಡು ಹಾರಿಸಿದ್ದಾರೆ. ಪೊಲೀಸರು ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದು, ಐವರನ್ನು ಬಂಧಿಸಿದ್ದಾರೆ.

ವೈದ್ಯರ ಎಡವಟ್ಟು; ಆಪರೇಷನ್ ಟೇಬಲ್ ಮೇಲೆ ಜೀವಬಿಟ್ಟ ವೃದ್ಧ



ನ್ಯೂಯಾರ್ಕ್: ಆಪರೇಷನ್ ಥಿಯೇಟರ್‌ನಲ್ಲಿ ವೈದ್ಯರು ರೋಗಿಯ ದೇಹದಲ್ಲಿ ಯಾವುದೋ ಅಂಗ ತೆಗೆಯಲು ಹೋಗಿ ಮತ್ಯಾವುದೋ ಅಂಗವನ್ನು ತೆಗೆದು ಹಾಕಿದ ಕಾರಣ, ರೋಗಿ ಆಸ್ಪತ್ರೆ ಆಪರೇಷನ್ ಟೇಬಲ್ ಮೇಲೇ ಜೀವಬಿಟ್ಟಿದ್ದಾರೆ. ವೈದ್ಯರ ಎಡವಟ್ಟಿನಿಂದ ಜೀವ ಬಿಟ್ಟ ರೋಗಿ ಹೆಸರು ವಿಲಿಯಂ ಬ್ರಯಾನ್. ಇವರಿಗೆ 70 ವರ್ಷ ವಯಸ್ಸಾಗಿತ್ತು. ತಮ್ಮ ಪತ್ನಿ ಬೆವೆರ್ಲಿ ಅವರ ಜೊತೆ ಅಮೆರಿಕದ ಫ್ಲೋರಿಡಾ ರಾಜ್ಯದಲ್ಲಿ ಇರುವ ತಮ್ಮ ಹೊಸ ಮನೆಗೆ ಹೋಗಿದ್ದರು. ಈ ವೇಳೆ ಬ್ರಯಾನ್ ಅವರಿಗೆ ಹೊಟ್ಟೆ ಎಡಭಾಗದಲ್ಲಿ ನೋವು ಕಾಣಿಸಿಕೊಂಡಿತ್ತು. ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬ್ರಯಾನ್ ಅವರ ಆರೋಗ್ಯದ ತಪಾಸಣೆ ನಡೆಸಿದ ವೈದ್ಯರು, ಬ್ರಯಾನ್ ಅವರ ದೇಹದಲ್ಲಿ ಸಣ್ಣ ಅಂಗ ಸ್ಪ್ಲೀನ್ (ಗುಲ್ಮ) ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಪತ್ತೆ ಮಾಡಿದರು. ದೇಹದಿಂದ ಸ್ಪ್ಲೀನ್ ಕಿತ್ತು ಹಾಕಬೇಕು. ಆಪರೇಷನ್ ನಡೆಸುವ ವೇಳೆ ವೈದ್ಯ ಶಕ್ನೋವ್ಸ್ಕಿ, ಬ್ರಯಾನ್ ಲಿವರ್‌ಗೆ ರಕ್ತ ಸರಬರಾಜು ಮಾಡುತ್ತಿದ್ದ ಪ್ರಮುಖ ನರವನ್ನೇ ಕತ್ತರಿಸಿದರು. ಇದರಿಂದ ಭಾರಿ ಪ್ರಮಾಣದಲ್ಲಿ ರಕ್ತ ಹರಿಯಿತು. ಬ್ರಯಾನ್ ಕೆಲವೇ ಹೊತ್ತಿನಲ್ಲಿ ಜೀವ ಕಳೆದುಕೊಂಡರು ಎಂದು ಬ್ರಯಾನ್ ಪತ್ನಿ ಬೆವೆರ್ಲಿ ಪರ ವಕೀಲರು ನ್ಯಾಯಾಲಯಕ್ಕೆ ವಿವರಿಸಿದ್ದಾರೆ.

ಪ್ರವಾಹದ ನೀರಿನಲ್ಲಿ ನವಜಾತ ಶಿಶುವನ್ನು ಕ್ರೇಟ್‌ನಲ್ಲಿ ಸಾಗಿಸಿದ ವ್ಯಕ್ತಿ



ಹೈದರಾಬಾದ್: ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳಲ್ಲಿ ಭಾರಿ ಮಳೆಯ ಕಾರಣದಿಂದಾಗಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ನಡುವೆ ಮಂಗಳವಾರ ವೈರಲ್ ಆಗಿರುವ ದೃಶ್ಯವೊಂದರಲ್ಲಿ ಕುತ್ತಿಗೆವರೆಗೆ ಬಂದ ಪ್ರವಾಹದ ನೀರಿನಲ್ಲಿ ನವಜಾತ ಶಿಶುವನ್ನು ಪ್ಲಾಸ್ಟಿಕ್ ಕ್ರೇಟ್‌ನಲ್ಲಿ ಸಾಗಿಸುತ್ತಿರುವ ದಾರುಣ ದೃಶ್ಯ ಕಂಡಿದೆ. ಇಬ್ಬರು ವ್ಯಕ್ತಿಗಳು ತಮ್ಮ ಕುತ್ತಿಗೆಯವರೆಗೂ ಬಂದ ನೀರಿನಲ್ಲಿ ಪ್ಲಾಸ್ಟಿಕ್ ಕ್ರೇಟ್‌ನಲ್ಲಿ ನವಜಾತ ಶಿಶುವನ್ನು ಸಾಗಿಸುತ್ತಿದ್ದಾರೆ. ಹೈ ಆಂಗಲ್‌ನಲ್ಲಿ ತೆಗೆದುಕೊಳ್ಳಲಾಗಿರುವ ವಿಡಿಯೋದಲ್ಲಿ ಶಿಶುವನ್ನು ಫೋಮ್ ಬೋರ್ಡ್‌ನ ಮೇಲೆ ಇರಿಸಲಾಗಿರುವ ಹಳದಿ ಬಣ್ಣದ ಪ್ಲಾಸ್ಟಿಕ್ ಕ್ರೇಟ್‌ನಲ್ಲಿ ದೂಡಿಕೊಂಡು ಹೋಗಲಾಗುತ್ತಿದೆ. ಆಂಧ್ರಪ್ರದೇಶದ ವಿಜಯವಾಡದ ದೃಶ್ಯ ಇದಾಗಿದ್ದು, ಸಿಂಗ್ ನಗರ ಪ್ರದೇಶದಲ್ಲಿ ಪ್ರವಾಹದಿಂದಾಗಿ ರಸ್ತೆಗಳು ನದಿಗಳಂತೆ ಕಂಡಿದ್ದವು. ಇದರಿಂದಾಗಿ ಮನೆಗಳು ಸಂಪೂರ್ಣವಾಗಿ ಜಲಾವೃತವಾಗಿದ್ದರಿಂದ ಕುಟುಂಬ ಮಗುವನ್ನು ತಮ್ಮ ಮನೆಯಿಂದ ಸ್ಥಳಾಂತರ ಮಾಡಬೇಕಾದ ಪರಿಸ್ಥಿತಿ ಎದುರಾಗಿತ್ತು. ಇನ್ನೊಂದು ವಿಡಿಯೋದಲ್ಲಿ 200ಕ್ಕೂ ಅಧಿಕ ಕಾರುಗಳು, ಪ್ರವಾಹಕ್ಕೆ ಸಂಪೂರ್ಣವಾಗಿ ಮುಳುಗಡೆಯಾಗಿದೆ

ಕಾಬೂಲ್‌ನಲ್ಲಿ ಆತ್ಮಹತ್ಯಾ ಬಾಂಬ್ ದಾಳಿ: 6 ಮಂದಿ ಸಾವು



ಕಾಬುಲ್: ಆಫ್ಘಾನಿಸ್ತಾನದಲ್ಲಿ ಮತ್ತೆ ಉಗ್ರರು ಅಟ್ಟಹಾಸ ಮೆರೆದಿದ್ದು, ಕಾಬೂಲ್‌ನಲ್ಲಿ ನಡೆದ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ ಕನಿಷ್ಠ ಆರು ಮಂದಿ ಸಾವನ್ನಪ್ಪಿದ್ದಾರೆ. ಕಾಬೂಲ್‌ನ 6ನೇ ಭದ್ರತಾ ವಲಯದಲ್ಲಿ ಇಂದು ಮಧ್ಯಾಹ್ನ ಕ್ವಾಲಾ–ಎ–ಬಖ್ತಿಯಾರ್ ಪ್ರದೇಶದಲ್ಲಿ ಸ್ಫೋಟ ಸಂಭವಿಸಿದ್ದು, ವ್ಯಕ್ತಿಯೊಬ್ಬ ಆತ್ಮಹತ್ಯಾ ಬಾಂಬ್ ದಾಳಿ ನಡೆಸಿ ತನ್ನನ್ನು ತಾನು ಸ್ಫೋಟಿಸಿಕೊಂಡಿದ್ದಾನೆ. ಈ ದಾಳಿಯಲ್ಲಿ ಕನಿಷ್ಠ ಆರು ಜನರು ಸಾವನ್ನಪ್ಪಿ, 13 ಮಂದಿ ಗಾಯಗೊಂಡಿದ್ದಾರೆ ಎಂದು ಕಾಬೂಲ್ ಪೊಲೀಸರು ಮತ್ತು ಆಂತರಿಕ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಇದೇ ವಿಚಾರವಾಗಿ ಕಾಬೂಲ್ ಪೊಲೀಸ್ ವಕ್ತಾರ ಖಾಲಿದ್ ಜದ್ರಾನ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, ಕಾಬೂಲ್‌ನಲ್ಲಿ ವ್ಯಕ್ತಿಯೊಬ್ಬ ಆತ್ಮಹತ್ಯಾ ದಾಳಿ ನಡೆಸಿದ್ದು, ದುರದೃಷ್ಟವಶಾತ್, ಸ್ಫೋಟದಲ್ಲಿ ಮಹಿಳೆ ಸೇರಿದಂತೆ ಆರು ಜನರು ಸಾವನ್ನಪ್ಪಿದ್ದಾರೆ ಮತ್ತು 13 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಮತ್ತು ತನಿಖೆ ನಡೆಯುತ್ತಿದೆ ಎಂದು ಹೇಳಿದ್ದಾರೆ.

ಮೈಸೂರು ಮಿತ್ರ ಗುರುವಾರ 5 ಸೆಪ್ಟೆಂಬರ್ 2024

ಬಹುಗ್ರಾಮ ಕುಡಿಯುವ ನೀರು ಯೋಜನೆಗೆ ಅನುಮೋದನೆ

ನೀರು, ನೈರ್ಮಲ್ಯ ಮಿಷನ್ ಜಿಲ್ಲಾ ಸಮಿತಿ ಸಭೆಯಲ್ಲಿ ಇಂಜಿನಿಯರ್ ಸುರೇಶ್ ಕುಮಾರ್ ಮಾಹಿತಿ

ಮಡಿಕೇರಿ, ಸೆ.4–ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಬಹುಗ್ರಾಮ ಕುಡಿಯುವ ನೀರು ಯೋಜನೆ ಅನುಷ್ಠಾನಕ್ಕೆ ಅನುಮೋದನೆ ನೀಡಲಾಗುವುದು ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಸುರೇಶ್ ಕುಮಾರ್ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಬುಧವಾರ ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ ಅಧ್ಯಕ್ಷತೆಯಲ್ಲಿ ನಡೆದ ನೀರು ಮತ್ತು ನೈರ್ಮಲ್ಯ ಮಿಷನ್ ಜಿಲ್ಲಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 1,05,331 ಕುಟುಂಬಗಳಿದ್ದು, ಮಡಿಕೇರಿ ತಾಲೂಕಿನಲ್ಲಿ 8325, ಸೋಮವಾರಪೇಟೆಯಲ್ಲಿ 30,930, ಕುಶಾಲನಗರದಲ್ಲಿ 19,388, ವಿರಾಜಪೇಟೆಯಲ್ಲಿ 20,496, ಪೊನ್ನಂಪೇಟೆಯಲ್ಲಿ 26,192 ಕುಟುಂಬಗಳಿವೆ. ಇವುಗಳಲ್ಲಿ ಸುಮಾರು 88,535 ಕುಟುಂಬಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಅಂದಾಜುಪಟ್ಟಿ ತಯಾರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಇದೇ ವೇಳೆ ಸುರೇಶ್ ಕುಮಾರ್, ನೀರಿನ ಮಾದರಿ ಪರೀಕ್ಷೆಗಳಲ್ಲಿ ಕಂಡುಬಂದಿರುವ ರಾಸಾಯನಿಕ ವರದಿಗಳನ್ನು ವಿಸ್ತತವಾಗಿ ಮಂಡಿಸಿದರು. ಹಾಗೆಯೇ ಪಂಚಾಯಿತಿ ಮಟ್ಟದಲ್ಲಿ ಎಫ್‌ಟಿಕೆ ಕಿಟ್ ಉಪಯೋಗಿಸಿಕೊಂಡು ನೀರಿನ ಮಾದರಿ ಪರೀಕ್ಷಿಸಿ, ಶುದ್ಧವಾಗಿರುವ ನೀರನ್ನು ಕುಡಿಯಲು ಪೂರೈಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಜಿಲ್ಲೆಯಲ್ಲಿ ಹೊಸದಾಗಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಸಂಬಂಧಿಸಿದಂತೆ ಇಲಾಖೆ ನಿರ್ದೇಶಕರಿಗೆ ಪತ್ರ ಪಡೆದು ಮಾಹಿತಿ ಪಡೆಯುವಂತೆ ಸೂಚಿಸಿದರು. ಜಲಜೀವನ್ ಮಿಷನ್ ಬ್ಯಾಚ್ ಒಂದು ಯೋಜನೆಯಡಿ ಮಡಿಕೇರಿ ತಾಲೂಕಿನಲ್ಲಿ ಕೈಗೊಳ್ಳಬೇಕಿರುವ 28 ಹೊಸ ಕುಡಿಯುವ ನೀರಿನ ಶುದ್ಧೀಕರಣ ಘಟಕ ಪ್ರಸ್ತಾವನೆ ಸಂಬಂಧ ಕಡತ ಮಂಡಿಸುವಂತೆ ನಿರ್ದೇಶನ ನೀಡಿದರು. ಜಲ ಜೀವನ್ ಮಿಷನ್ ಯೋಜನಾ ಮಾಹಿತಿ ಫಲಕಗಳ ಅಳವಡಿಕೆಗೆ ದರ ನಿಗದಿ, ಜಿಲ್ಲಾ ಮತ್ತು ತಾಲೂಕು ಮಟ್ಟದ ಪ್ರಯೋಗಾಲಯ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆ ಹಾಗೂ ಪಿಎಂ ಜನ್‌ಮನ್ ಯೋಜನೆಯಡಿ ಪಿವಿಟಿಜಿ ಜನವಸತಿ ಕಾಮಗಾರಿಗಳಿಗೆ ಅನುಮೋದನೆ ನೀಡಿದರು. ಜಿಲ್ಲಾ ಹಾಗೂ ತಾಲೂಕು ಪ್ರಯೋಗಾಲಯಗಳಿಂದ ಏಪ್ರಿಲ್‌ನಿಂದ ಇಲ್ಲಿಯವರೆಗೆ ನೀರಿನ ಮಾದರಿ ಪರೀಕ್ಷೆಗಳ ವಿವರಣೆ ನೀಡಿದರು.

ಸಭೆಯಲ್ಲಿ ಜಿಪಂ ಉಪ ಕಾರ್ಯದರ್ಶಿ ಎಸ್.ಧನರಾಜ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯಕ್ರಮಾಧಿಕಾರಿ ಡಾ.ಮಧುಸೂದನ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಕೃಷ್ಣಪ್ಪ ಸಣ್ಣ ನೀರಾವರಿ ಇಲಾಖೆಯ ಅಭಿಯಂತರರು, ಕೃಷಿ ಇಲಾಖೆ ಉಪ ನಿರ್ದೇಶಕರು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಇತರರು ಇದ್ದರು.



ಮಡಿಕೇರಿ ಜಿಪಂ ಕಚೇರಿ ಸಭಾಂಗಣದಲ್ಲಿ ಸಿಇಓ ಆನಂದ್ ಪ್ರಕಾಶ್ ಮೀನಾ ಅಧ್ಯಕ್ಷತೆಯಲ್ಲಿ ನೀರು ಮತ್ತು ನೈರ್ಮಲ್ಯ ಮಿಷನ್ ಸಮಿತಿ ಸಭೆ ನಡೆಯಿತು.

ಕಾನೂನು ಪಾಲಿಸಿ ಹಬ್ಬ ಆಚರಿಸಿ

ವಿರಾಜಪೇಟೆ, ಸೆ.4–ಗೌರಿ–ಗಣೇಶ ಹಾಗೂ ಈದ್–ಮಿಲಾದ್ ಹಬ್ಬವನ್ನು ಶಾಂತಿಯುತವಾಗಿ ಕಾನೂನು ಪಾಲನೆ ಮೂಲಕ ಆಚರಿಸಬೇಕು ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ ರಾಜ್ ಸೂಚಿಸಿದರು.

ಗ್ರಾಮಾಂತರ ಪೊಲೀಸ್ ಠಾಣೆ ಆವರಣದಲ್ಲಿ ಬುಧವಾರ ನಡೆದ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಸೆ.16ರಂದು ಈದ್–ಮಿಲಾದ್ ಹಾಗೂ ಸೆ.17ರಂದು ಸಂಜೆ ಗಣೇಶ ಮೂರ್ತಿ ವಿಸರ್ಜನೋತ್ಸವ ಶೋಭಯಾತ್ರೆ ನಡೆಯಲಿದೆ. ಗೌರಿ–ಗಣೇಶ ಪ್ರತಿಷ್ಠಾಪನಾ ಸಮಿತಿಗಳು ವೇದಿಕೆ ಕಾರ್ಯಕ್ರಮ ನಡೆಸಲು ಅಭ್ಯಂತರವಿಲ್ಲ. ಆದರೆ, ಡಿಜೆ ಬಳಸದಂತೆ ನ್ಯಾಯಾಲಯದ ಆದೇಶವಿದೆ. ಆದ್ದರಿಂದ ಎಲ್ಲರೂ ಕಾನೂನು ಪಾಲಿಸಬೇಕು. ಮೆರವಣಿಗೆ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರ ವಹಿಸಬೇಕು ಎಂದರು.

ಜೂಡಿವಜ್ ಮಾತನಾಡಿ, ಗಣೇಶ ವಿಸರ್ಜನೆ ದಿನ ಸಂಜೆ 5 ಗಂಟೆ ನಂತರ ಮೆರವಣಿಗೆ ನಡೆಯುವ ರಸ್ತೆಯಲ್ಲಿ ವಾಹನಗಳ ನಿಲುಗಡೆಗೆ ಅವಕಾಶ ನೀಡುವುದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಆದರೆ, ಸಂಜೆ 6 ಗಂಟೆವರೆಗೆ ವಾಹನಗಳ ನಿಲುಗಡೆಗೆ ಅವಕಾಶ ನೀಡುವಂತೆ ಮನವಿ ಮಾಡಿದರು. ನಂತರ ಮಾತನಾಡಿದ ಎಎಸ್‌ಪಿ ಸುಂದರ ರಾಜ್, 6 ಗಂಟೆವರೆಗೆ ವಾಹನಗಳ ನಿಲುಗಡೆಗೆ ಕಾಲವಕಾಶ ನೀಡುವುದಾಗಿ ತಿಳಿಸಿದರು. ಡಿವೈಎಸ್‌ಪಿ ಮೋಹನ್ ಕುಮಾರ್, ಪುರಸಭೆ ಸದಸ್ಯ ಮಹ್ಮದ್ ರಫಿ ಮಾತನಾಡಿದರು. ಸಭೆಯಲ್ಲಿ ನಗರ ಪೊಲೀಸ್ ಠಾಣಾಧಿಕಾರಿ ಎಚ್.ಎಸ್.ಪ್ರಮೋದ್, ರಾಜಪ್ಪ ರಶೀದ್ ಹಾಜಿ, ನಿಸಾರ್ ಅಹ್ಮದ್ ಇತರರು ಹಾಜರಿದ್ದರು.



ರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ನಡೆದ ಶಾಂತಿ ಸಭೆಯಲ್ಲಿ ಎಎಸ್‌ಪಿ ಸುಂದರ ರಾಜ್ ಮಾತನಾಡಿದರು.


ಸಿಎಂಗೆ ರೈತರ ನಿಯೋಗ ಮನವಿ ಸಲ್ಲಿಕೆ...



ಕೊಡಗು ಜಿಲ್ಲೆಯ ರೈತರ ನಿಯೋಗ ಶಾಸಕರಾದ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಹಾಗೂ ಡಾ.ಮಂತರ್‌ಗೌಡ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಕಸ್ತೂರಿ ರಂಗನ್ ವರದಿ, ಸಿ ಮತ್ತು ಡಿ ಭೂಮಿ ಸಮಸ್ಯೆ, ಬೆಳೆ ಹಾನಿ ಪರಿಹಾರ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಸುವಂತೆ ಮನವಿ ಸಲ್ಲಿಸಿತು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಕಾಂಗ್ರೆಸ್ ಮುಖಂಡರಾದ ವಕೀಲ ಹೆಚ್.ಎಸ್.ಚಂದ್ರಮೌಳಿ, ಕೆ.ಎಂ.ಲೋಕೇಶ್ ಇದ್ದರು.

ಮನೆ ಗೇಟ್‌ಗೆ ಸಿಲುಕಿ ಜಿಂಕೆ ಸಾವು

ಗುಡ್ಡೆಹೊಸೂರು, ಸೆ.4–ಆಹಾರ ಅರಸಿ ಬಂದ ಜಿಂಕೆ ಮನೆ ಗೇಟ್‌ಗೆ ಸಿಲುಕಿ ಮೃತಪಟ್ಟಿರುವ ಘಟನೆ ಬೊಳ್ಳೂರು ಗ್ರಾಮದಲ್ಲಿ ಬುಧವಾರ ನಡೆದಿದೆ.



ಸಮೀಪದ ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೊಳ್ಳೂರು ಗ್ರಾಮದ ಚಲುವ ಅವರ ಮನೆ ಗೇಟ್ ನುಗ್ಗಲು ಹೋಗಿ ಜಿಂಕೆ ತಲೆ ಸಿಲುಕಿಕೊಂಡು ಒದ್ದಾಡಿ ಮೃತಪಟ್ಟಿದೆ.

ಸ್ಥಳ ಪರಿಶೀಲಿಸಿದ ಉಪ ವಲಯ ಅರಣ್ಯಾಧಿಕಾರಿ ದೇವಯ್ಯ ಹಾಗೂ ಸಿಬ್ಬಂದಿ, ಅತ್ತೂರು ಮೀಸಲು ಅರಣ್ಯ ಪ್ರದೇಶದಿಂದ ಆಹಾರ ಅರಸಿ ಬಂದ ನಾಲ್ಕು ವರ್ಷದ ಗಂಡು ಜಿಂಕೆ ಮೃತಪಟ್ಟಿದೆ ಎಂದು ತಿಳಿಸಿದ್ದಾರೆ.

ದೇವಟ್ ಪರಂಬುವಿನಲ್ಲಿ ಸಿಎನ್‌ಸಿಯಿಂದ ನಮನ

ಮಡಿಕೇರಿ, ಸೆ.4–ಕೈಲ್ ಪೊಳ್ದ್ ಹಬ್ಬದ ಅಂಗವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ದೇವಟ್ ಪರಂಬುವಿನಲ್ಲಿ ಹಿರಿಯರಿಗೆ ಮೀದಿ ಇಟ್ಟು ತೋಕ್ ಪೂ ಮೂಲಕ ನಮನ ಸಲ್ಲಿಸಲಾಯಿತು.

ಹತ್ಯೆಗೀಡಾದ ಹಿರಿಯರಿಗೆ ನರಮೇಧದ ಸ್ಮಾರಕ ಸ್ಥಳದಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಪ್ರಮುಖರು ಪುಷ್ಪ ನಮನ ಸಲ್ಲಿಸಿ, ಕೊಡವ ಭೂ ರಾಜಕೀಯ ಸ್ವಾಯತ್ತತೆ ಸಾಧಿಸಲು ಶಕ್ತಿ ನೀಡುವಂತೆ ಪ್ರಾರ್ಥಿಸಿದರು.

ಕೊಡವ ಬುಡಕಟ್ಟು ಜನಾಂಗಕ್ಕೆ ಆಂತರಿಕ ರಾಜಕೀಯ ಸ್ವ–ನಿರ್ಣಯದ ಹಕ್ಕುಗಳು ಮತ್ತು ಎಸ್‌ಟಿ ಟ್ಯಾಗ್ ನೀಡಬೇಕು. ಅಂತಾರಾಷ್ಟ್ರೀಯ ಕಾನೂನಿನಡಿ ಕೊಡವ ಬುಡಕಟ್ಟಿಗೆ ಸಾರ್ವತ್ರಿಕ ಮನ್ನಣೆ ಕಲ್ಪಿಸಬೇಕು. ಕೊಡವ ಭೂಮಿ, ಭಾಷೆ, ಸಾಂಸ್ಕೃತಿಕ ಪರಂಪರೆಯ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಾಂವಿಧಾನಿಕ ಖಾತ್ರಿ ಒದಗಿಸಬೇಕು. ಕೊಡವ ಸಾಂಪ್ರದಾಯಿಕ ಬಂದೂಕು ಹಕ್ಕಿಗೆ ಸಾಂವಿಧಾನಿಕ ಭದ್ರತೆ ನೀಡಬೇಕು. ದೇವಟ್‌ಪರಂಬ್‌ನಲ್ಲಿ ಅಂತಾರಾಷ್ಟ್ರೀಯ ಕೊಡವ ನರಮೇಧದ ಸ್ಮಾರಕ ನಿರ್ಮಿಸಬೇಕು. ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಹತ್ಯಾಕಾಂಡದ ಸ್ಮರಣಾರ್ಥ ಪಟ್ಟಿಯಲ್ಲಿ ದೇವಟ್ ಪರಂಬು ಕೊಡವರ ದುರಂತ ನರಮೇಧವನ್ನು ಸೇರಿಸಬೇಕು ಎಂದು ನಾಚಪ್ಪ ಒತ್ತಾಯಿಸಿದರು.

ಇದೇ ವೇಳೆ ಕಲಿಯಂಡ ಮೀನಾ, ಕಲಿಯಂಡ ಪ್ರಕಾಶ್, ಅಳ್‌ಮಂಡ ಜೈ, ಪಟ್ಟಮಾಡ ಕುಶ, ಮಂದಪಂಡ ಮನೋಜ್, ಮಂದಪಂಡ ಸೂರಜ್, ಚೇಂಯಬೇರ ಸತೀಶ್, ಪಟ್ಟಮಾಡ ಅಶೋಕ್, ಪಟ್ಟಮಾಡ ಮೋಹಿತ್ ಮುತ್ತಣ್ಣ, ಕಲಿಯಂಡ ಶಾನ್ ಸುಬ್ಬಯ್ಯ ಹಾಜರಿದ್ದರು.



ಕೈಲ್ ಪೊಳ್ದ್ ಹಬ್ಬದ ಅಂಗವಾಗಿ ಸಿಎನ್‌ಸಿ ವತಿಯಿಂದ ದೇವಟ್ ಪರಂಬುವಿನಲ್ಲಿ ಹಿರಿಯರಿಗೆ ಮೀದಿ ಇಟ್ಟು ತೋಕ್ ಪೂ ಮೂಲಕ ನಮನ ಸಲ್ಲಿಸಲಾಯಿತು.

ಕುಡಿದ ಮತ್ತಿನಲ್ಲಿ ಗಲಾಟೆ: ಕಾರ್ಮಿಕ ಕೊಲೆ

ವಿರಾಜಪೇಟೆ, ಸೆ.4–ಕುಡಿದ ಮತ್ತಿನಲ್ಲಿ ಇಬ್ಬರು ಕಾರ್ಮಿಕರ ನಡುವೆ ಕ್ಷುಲ್ಲಕ ವಿಚಾರವಾಗಿ ಗಲಾಟೆ ನಡೆದು, ಓರ್ವ ಕೊಲೆಯಾದ ಘಟನೆ ತಾಲೂಕಿನ ಕೊಳತ್ತೋಡು ಬೈಗೋಡು ಗ್ರಾಮದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಮೊಗೇರ ವಿಶ್ವ(40) ಕೊಲೆಯಾದ ಕಾರ್ಮಿಕ. ಕತ್ತಿಯಿಂದ ಕಡಿದು ಕೊಲೆ ಮಾಡಿದ ಮೊಗೇರ ಗಣೇಶನನ್ನು ಬಂಧಿಸಲಾಗಿದೆ.

ಗ್ರಾಮದ ತೋಟವೊಂದರ ಲೈನ್ ಮನೆಯಲ್ಲಿ ವಾಸವಿದ್ದ ಈ ಇಬ್ಬರು ಕಾರ್ಮಿಕರ ನಡುವೆ ಕುಡಿದ ಮತ್ತಿನಲ್ಲಿ ಕ್ಷುಲ್ಲಕ ವಿಚಾರವಾಗಿ ಗಲಾಟೆ ನಡೆದಿದೆ. ಈ ವೇಳೆ ಗಣೇಶ್, ವಿಶ್ವನ ಮೇಲೆ ಕತ್ತಿಯಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದಾನೆ. ಈ ಸಂಬಂಧ ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದ್ವಿಚಕ್ರ ವಾಹನ ಕಳ್ಳನ ಬಂಧನ

ಸುಂಟಿಕೊಪ್ಪ, ಸೆ.4– ದ್ವಿಚಕ್ರ ವಾಹನ ಕಳ್ಳನನ್ನು ಸುಂಟಿಕೊಪ್ಪ ಠಾಣೆ ಪೊಲೀಸರು ಬಂಧಿಸಿ, ಬೈಕ್ ವಶಪಡಿಸಿಕೊಂಡಿದ್ದಾರೆ.

ಸೋಮವಾರಪೇಟೆ ದೊಡ್ಡಮಳ್ತೆ ನಿವಾಸಿ ಚಂದನ್(29) ಬಂಧಿತ ಬೈಕ್ ಕಳ್ಳ. ಈತ 8 ದಿನಗಳ ಹಿಂದೆ ಕಂಬಿಬಾಣೆ ನಿವಾಸಿ ಚಿರಾಗ್ ಅವರ ಬೈಕ್ ಅನ್ನು ಕಳವು ಮಾಡಿದ್ದ. ಈ ಸಂಬಂಧ ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರ ಈತನನ್ನು ಪತ್ತೆ ಹಚ್ಚಿದ ಪೊಲೀಸರು ಹೆಚ್.ಡಿ.ಕೋಟೆಯ ಸರಗೂರಲ್ಲಿ ಬೈಕ್ ಸಹಿತ ಬಂಧಿಸಿ, ನ್ಯಾಯಾಂಗ ವಶಕ್ಕೆ ನೀಡಿದ್ದಾರೆ. ಕುಶಾಲನಗರ ವೃತ್ತ ನಿರೀಕ್ಷಕ ರಾಜೇಶ್ ಕೋಟ್ಯಾನ್, ಸುಂಟಿಕೊಪ್ಪ ಠಾಣಾಧಿಕಾರಿ ಚಂದ್ರಶೇಖರ್, ಎಸ್‌ಐ ಭಾರತಿ, ಸಿಬ್ಬಂದಿ ಪ್ರವೀಣ್, ಬಾಬು, ರಂಜಿತ್, ನಿಶಾಂತ್ ಹಾಗೂ ಜಗದೀಶ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.



ಚಂದನ್

ಎಂ.ಹೆಚ್.ಮೂಸಾ ನಿಧನ



ಮಡಿಕೇರಿ, ಸೆ.4–ಕೊಡಗು ಜಿಲ್ಲಾ ಕಾಂಗ್ರೆಸ್ ಮುಖಂಡ ಹಾಗೂ ಸಿದ್ದಾಪುರ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಎಂ.ಹೆಚ್.ಮೂಸಾ (49) ಹೃದಯಾಘಾತದಿಂದ ಬುಧವಾರ ನಿಧನರಾದರು. ಮೃತರು ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನೆಲ್ಲಿಹುದಿಕೇರಿಯ ಖಬರ್‌ಸ್ಥಾನ್‌ನಲ್ಲಿ ಅಂತ್ಯಕ್ರಿಯೆ ನೆರವೇರಿತು.

ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್‌ಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮದ ಉತ್ತಪ್ಪ ಮತ್ತಿತರರು ಸಂತಾಪ ಸೂಚಿಸಿದರು.

ಲೀಲಾ

ಸುಂಟಿಕೊಪ್ಪ, ಸೆ.4– ನಾಕೂರು ಶಿರಂಗಾಲ ಗ್ರಾಮ ಪಂಚಾಯಿತಿಯ ಎಮ್ಮೆಗುಂಡಿ ಗ್ರಾಮದ ನಿವಾಸಿ ಐತ್ತಪ್ಪ ಪೂಜಾರಿ ಅವರ ಪತ್ನಿ ಲೀಲಾ(87) ಮಂಗಳವಾರ ನಿಧನರಾದರು.

ಮೃತರು ಮೂವರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ. ಬುಧವಾರ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.



ಸಿಎಂ ಸಿದ್ದರಾಮಯ್ಯ ಒಳಮೀಸಲಾತಿ ಪರ ಇಲ್ಲ

ಹಿರಿಯ ವಕೀಲ ಅರುಣ್‌ಕುಮಾರ್ ಆರೋಪ



ಸುದ್ದಿಗೋಷ್ಠಿಯಲ್ಲಿ ವಕೀಲ ಅರುಣ್ ಕುಮಾರ್ ಮಾತನಾಡಿದರು.

ಚಾಮರಾಜನಗರ, ಸೆ.4–ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಮೀಸಲಾತಿ ಪರ ಇಲ್ಲ ಎಂದು ಸಾಮಾಜಿಕ ನ್ಯಾಯಪರ ವಕೀಲರ ಸಂಘದ ಅಧ್ಯಕ್ಷ ಅರುಣ್ ಕುಮಾರ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ಜಾರಿ ಸಂಬಂಧ ಹೈಕಮಾಂಡ್ ಜೊತೆ ಚರ್ಚಿಸಿ ಕ್ರಮವಹಿಸುವುದಾಗಿ ಸಿದ್ದರಾಮಯ್ಯ ಹೇಳಿಕೆ ನೀಡಿರುವುದು ಖಂಡನೀಯ. ಸಿಎಂ ಒಳಮೀಸಲಾತಿ ಪರ ಇಲ್ಲ ಎಂಬ ಅನುಮಾನ ವ್ಯಕ್ತವಾಗುತ್ತಿದೆ ಎಂದರು.

ಪರಿಶಿಷ್ಟ ಜಾತಿ, ಪಂಗಡಗಳ ಒಳಮೀಸಲಾತಿಗೆ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರಾದ ಡಿ.ವೈ.ಚಂದ್ರಚೂಡ್ ನೇತೃತ್ವದ ಏಳು ನ್ಯಾಯಾಧೀಶರ ಪೀಠ ಒಪ್ಪಿಗೆ ನೀಡಿದ್ದು, ಉಪವರ್ಗಗಳನ್ನು ಮಾಡಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ಇರುವುದರಿಂದ ಇದರ ಅನ್ವಯ ಮುಖ್ಯಮಂತ್ರಿಗಳು ಸಚಿವ ಸಂಪುಟ ಸಭೆ ಕರೆದು ಒಪ್ಪಿಗೆ ಪಡೆದು ತುರ್ತಾಗಿ ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಒಳಮೀಸಲಾತಿ ಜಾರಿಯಾಗುವ ತನಕ ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇಮಕ ಮಾಡಬಾರದು. ಎಲ್ಲಾ ಕ್ಷೇತ್ರಗಳಲ್ಲೂ ಒಳಮೀಸಲಾತಿ ಪ್ರಕ್ರಿಯೆ ನಡೆಸಬೇಕು. ರಾಜ್ಯದಲ್ಲಿ ಪರಿಶಿಷ್ಟ ಜನಾಂಗದ ಪಟ್ಟಿಯಲ್ಲಿ 101 ಜಾತಿಗಳಿವೆ. ಇವರಿಗೆ ನೀಡಲಾಗುವ ಶೇ.15 ರಷ್ಟು ಮೀಸಲಾತಿಯನ್ನು ಜನಾಂಗದ ಬಲಾಢ್ಯರು ಪಡೆದುಕೊಳ್ಳುತ್ತಿದ್ದಾರೆ. ಈಗಾಗಲೇ ಎ.ಜೆ.ಸದಾಶಿವ ಆಯೋಗ 24 ಲಕ್ಷ ಕುಟುಂಬಗಳ ಸರ್ವೇ ಮಾಡಿದ್ದು, ಸಮಾನವಾಗಿ ಮೇಲೆ ಬರಲು ಒಳಮೀಸಲಾತಿ ಕೊಡಬೇಕು ಎಂದು ವರದಿ ನೀಡಿದೆ ಎಂದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಸದಾಶಿವ ಆಯೋಗ ವರದಿ ಸ್ವೀಕಾರ ಮಾಡಿದ್ದು, ಎಸ್ಸಿ, ಎಸ್ಟಿಗೆ ಇದ್ದ ಶೇ.18ರಷ್ಟು ಮೀಸಲಾತಿಯನ್ನು ಶೇ.24ಕ್ಕೆ ಏರಿಕೆ ಮಾಡಿತ್ತು. ಈಗಿನ ಕಾಂಗ್ರೆಸ್ ಸರ್ಕಾರ ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಲು ಕ್ರಮವಹಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಬೂದಿತಿಟ್ಟು ರಾಜೇಂದ್ರ, ದೊಡ್ಡಿಂದುವಾಡಿ ಟಿ.ಮುತ್ತುರಾಜು, ದಾಸಯ್ಯ, ಸಿದ್ದಯ್ಯ, ಎಂ.ಮುತ್ತುರಾಜು ಹಾಜರಿದ್ದರು.

ಪಕ್ಷಾಂತರಿಗಳಿಗೆ ಪುರಸಭೆ ಅಧಿಕಾರ

ಬಿಜೆಪಿಯಿಂದ ಕಾಂಗ್ರೆಸ್‌ಗೆ ಪಕ್ಷಾಂತರವಾದ ಕಿರಣ್‌ಗೌಡ ಅಧ್ಯಕ್ಷ, ಹೀನಾ ಕೌಸರ್ ಉಪಾಧ್ಯಕ್ಷೆ


ಗುಂಡ್ಲುಪೇಟೆ, ಸೆ.4–ಇಲ್ಲಿನ ಪುರಸಭೆ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನ ಅಚ್ಚರಿಯಂತೆ ಬಿಜೆಪಿಯಿಂದ ಕಾಂಗ್ರೆಸ್‌ಗೆ ಪಕ್ಷಾಂತರವಾದ ಇಬ್ಬರು ಸದಸ್ಯರಿಗೆ ಒಲಿದಿದೆ.

ಅಧ್ಯಕ್ಷರಾಗಿ ಕಿರಣ್‌ಗೌಡ ಮತ್ತು ಉಪಾಧ್ಯಕ್ಷರಾಗಿ ಹೀನಾ ಕೌಸರ್ ಆಯ್ಕೆಯಾಗಿದ್ದಾರೆ. ಬುಧವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಬಿಜೆಪಿ ಸದಸ್ಯ ಕಿರಣ್‌ಗೌಡ ಅವಿರೋಧವಾಗಿ ಆಯ್ಕೆಯಾದರೆ, ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ಕಾಂಗ್ರೆಸ್ ಬೆಂಬಲಿತ ಬಿಜೆಪಿ ಸದಸ್ಯೆ ಹೀನಾ ಕೌಸರ್‌ಗೆ 14 ಮತ ಹಾಗೂ ಬಿಜೆಪಿಯ ಕುಮಾರ್‌ಗೆ 8 ಮತ ಲಭಿಸಿದವು.

ಪುರಸಭೆಯಲ್ಲಿ ಬಿಜೆಪಿ 13, ಕಾಂಗ್ರೆಸ್ 8, ಎಸ್‌ಡಿಪಿಐ ಹಾಗೂ ಪಕ್ಷೇತರ ತಲಾ ಒಬ್ಬರು ಸದಸ್ಯರಿದ್ದು, ಕಾಂಗ್ರೆಸ್ ಬಿಜೆಪಿಯ ಐವರು ಸದಸ್ಯರನ್ನು ತನ್ನತ್ತ ಎಳೆದುಕೊಂಡಿದೆ. ಜೊತೆಗೆ ಎಸ್‌ಡಿಪಿಐ, ಪಕ್ಷೇತರ ಇಬ್ಬರು ಸದಸ್ಯರು, ಶಾಸಕ ಗಣೇಶ್ ಪ್ರಸಾದ್ ಮತ್ತು ಸಂಸದ ಸುನೀಲ್ ಬೋಸ್ ಸೇರಿ ಕಾಂಗ್ರೆಸ್ 14 ಮತಗಳಾಗಿಸಿಕೊಂಡಿತು. ಅಚ್ಚರಿಯಂತೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿಯಿಂದ ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದ ಇಬ್ಬರೂ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿದ್ದ ತಹಸೀಲ್ದಾರ್ ಟಿ.ರಮೇಶ್ ಬಾಬು ಕಾರ್ಯನಿರ್ವಹಿಸಿದರು.

ಬಿಜೆಪಿ ಐವರು ಸದಸ್ಯರು ಕಾಂಗ್ರೆಸ್ ಸೇರಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ಮಂಗಳವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ, ಪಕ್ಷಾಂತರಿಗಳು ಬಿಜೆಪಿ ಪರ ಮತ ಚಲಾಯಿಸುವಂತೆ ಎಚ್ಚರಿಕೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ತಹಸೀಲ್ದಾರ್ ಪುರಸಭೆ ಸುತ್ತ ಸೆಕ್ಷನ್ 144 ಜಾರಿಗೊಳಿಸಿದ್ದರು.

ಸದಸ್ಯತ್ವ ರದ್ದಿಗೆ ನ್ಯಾಯಾಲಯದ ಮೊರೆ: ಪಕ್ಷದ ವಿಪ್ ಉಲ್ಲಂಘಿಸಿ ಕಾಂಗ್ರೆಸ್‌ಗೆ ಮತ ನೀಡಿದ ಬಿಜೆಪಿಯ ಐವರು ಸದಸ್ಯರ ವಿರುದ್ಧ ಪಕ್ಷ ಶಿಸ್ತು ಕ್ರಮಕ್ಕೆ ಮುಂದಾಗಿದೆ. ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಪಕ್ಷದ ಎಲ್ಲಾ ಸದಸ್ಯರಿಗೆ ವಿಪ್ ನೀಡಲಾಗಿತ್ತು. ಆದರೆ, ವಿಪ್ ಉಲ್ಲಂಘನೆ ಹಾಗೂ ಪಕ್ಷಾಂತರ ಮಾಡಿದ ಐವರು ಸದಸ್ಯರನ್ನು ಪಕ್ಷದಿಂದ ಉಚ್ಚಾಟಿಸಲಾಗುವುದು. ಪುರಸಭೆ ಚುನಾವಣಾ ನಡವಳಿಕೆಗಳನ್ನು ಸಂಗ್ರಹಿಸಲಾಗಿದ್ದು, ಇವರ ಸದಸ್ಯತ್ವ ರದ್ದಿಗೆ ನ್ಯಾಯಾಲಯದ ಮೊರೆ ಹೋಗಲಾಗುವುದು ಎಂದು ಪುರಸಭೆ ಬಿಜೆಪಿ ಸದಸ್ಯ ಪಿ.ಗಿರೀಶ್ ತಿಳಿಸಿದ್ದಾರೆ.



ಗುಂಡ್ಲುಪೇಟೆ ಪುರಸಭೆ ಅಧ್ಯಕ್ಷ ಕಿರಣ್ ಗೌಡ ಮತ್ತು ಉಪಾಧ್ಯಕ್ಷೆ ಹೀನಾ ಕೌಸರ್ ಅವರನ್ನು ಶಾಸಕ ಗಣೇಶ್ ಪ್ರಸಾದ್, ಸಂಸದ ಸುನೀಲ್ ಬೋಸ್ ಅಭಿನಂದಿಸಿದರು.

ನಾಳೆ 'ಅನ್ನ' ಚಿತ್ರ ರಾಜ್ಯಾದ್ಯಂತ ಬಿಡುಗಡೆ

ಚಾಮರಾಜನಗರ, ಸೆ.4–ಚಾಮರಾಜನಗರ ಜಿಲ್ಲೆಯ ಕಥೆ ಹೊಂದಿರುವ ಜಿಲ್ಲೆಯ ಕಲಾವಿದರೇ ನಟಿಸಿರುವ 'ಅನ್ನ' ಚಿತ್ರ ಸೆ.6ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಚಿತ್ರದ ನಿರ್ದೇಶಕ ಇಸ್ಲಾಹುದ್ದೀನ್ ಮಾತನಾಡಿ, ಅನ್ನ ಚಿತ್ರ 1980ರ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲೆಯ ಹಳ್ಳಿಯೊಂದರಲ್ಲಿ ನಡೆಯುವ ಕತೆಯನ್ನು ಒಳಗೊಂಡಿದೆ. ಚಿತ್ರಕ್ಕೆ 1980ರ ಸನ್ನಿವೇಶದ ಹಳ್ಳಿಯ ಅಗತ್ಯವಿತ್ತು. ಈಗ ಆ ಹಳ್ಳಿಗಳು ಇಲ್ಲ. ಅಂದಿನ ಸನ್ನಿವೇಶಕ್ಕೆ ಕಣ್ಣೂರು ಗ್ರಾಮ ಸೂಕ್ತವಾಗಿತ್ತು. ಆ ಗ್ರಾಮಸ್ಥರು ಚಿತ್ರೀಕರಣಕ್ಕೆ ಎಲ್ಲಾ ಸಹಕಾರ ನೀಡಿದರು ಎಂದರು.

ಚಿತ್ರದಲ್ಲಿ ನಟಿಸಿರುವ ಬಹುತೇಕ ಕಲಾವಿದರು ಚಾಮರಾಜನಗರ ಜಿಲ್ಲೆಯವರು. ಮಹದೇವನ ಪಾತ್ರ ನಿರ್ವಹಿಸಿರುವ ಬಾಲಕ ನಂದನ್ ಗಾಳೀಪುರದವನು. ಅಬ್ರಹಾಂ ಡಿಸಿಲ್ವ, ರಮೇಶ್ ಸಿದ್ದಯ್ಯನಪುರ, ಪುಷ್ಪಾ, ಕೃಷಿಕಾ, ಮೂಕಹಳ್ಳಿ ಬಸವಣ್ಣ, ಬಲರಾಜವಾಡಿ, ಮಂಜು ಸೇರಿದಂತೆ ಕಲಾವಿದರು ಚಾಮರಾಜನಗರ ಜಿಲ್ಲೆಯವರು ಎಂದು ತಿಳಿಸಿದರು.

ಅಂದಿನ ಸನ್ನಿವೇಶದಲ್ಲಿ ಬಡವರ ಮನೆಗಳಲ್ಲಿ ಅನ್ನವನ್ನು ಹಬ್ಬಕ್ಕೊಮ್ಮೆ ಊಟ ಮಾಡುತ್ತಿದ್ದರು. ಮಹದೇವ ಎಂಬ ಬಾಲಕ ಅನ್ನ ತಿನ್ನಬೇಕು ಎಂಬ ಆಸೆ ಹೊತ್ತಿರುತ್ತಾನೆ. ಈತ ಮಹದೇಶ್ವರಬೆಟ್ಟದ ಜಾತ್ರೆಯಲ್ಲಿ ಕಳೆದುಹೋಗುತ್ತಾನೆ. ನಂತರ ಏನಾಗುತ್ತದೆ ಎಂಬುದನ್ನು ಚಿತ್ರ ಹೇಳುತ್ತದೆ. ಹಾಗಂತ ಇದು ಗೋಳಿನ ಕತೆಯಲ್ಲ, ಆರ್ಟ್ ಸಿನಿಮಾ ಅಲ್ಲ. ಇದೊಂದು ಲವಲವಿಕೆಯ ಸನ್ನಿವೇಶಗಳಿಂದ ಕೂಡಿದ ಮನರಂಜನಾತ್ಮಕ ಚಿತ್ರ ಸೆ.9ರಂದು ರಾಜ್ಯಾದ್ಯಂತ ಸುಮಾರು 50 ಚಿತ್ರಮಂದಿರಗಳಲ್ಲಿ ಚಿತ್ರ ತೆರೆ ಕಾಣಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕ ಬಸವರಾಜು, ಸಂಗೀತ ನಿರ್ದೇಶಕ ನಾಗೇಶ್ ಕಂದೇಗಾಲ, ಕಲಾ ನಿರ್ದೇಶಕ ಮಹೇಶ್ವರ್ ನಟ ಮೂಕಹಳ್ಳಿ ಬಸವಣ್ಣ, ನಟಿ ಪದ್ಮಶ್ರೀ, ಸಂಭಾಷಣಾಕಾರ ಸಿದ್ದು ಪ್ರಸನ್ನ, ಸಿದ್ದಿಕ್ ಇದ್ದರು.



ಚಾಮರಾಜನಗರದಲ್ಲಿ ಅನ್ನ ಚಿತ್ರದ ಹಾಡಿನ ವಿಡಿಯೋವನ್ನು ರಂಗಕರ್ಮಿ ಕೆ.ವೆಂಕಟರಾಜು ಬಿಡುಗಡೆ ಮಾಡಿದರು.

ಅರಣ್ಯಾಧಿಕಾರಿ ಅನಂತರಾಮುಗೆ ಸಿಎಂ ಪದಕ...



ಯಳಂದೂರು ಉಪವಲಯ ಅರಣ್ಯಾಧಿಕಾರಿ ಬಿ.ಅನಂತರಾಮು ಅವರಿಗೆ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪದಕ ಪ್ರದಾನ ಮಾಡಿದರು. ಅರಣ್ಯ ಸಚಿವ ಈಶ್ವರ್ ಖಂಡ್ರೆ ಇದ್ದರು.

ಪಪಂ ಅಧ್ಯಕ್ಷರಾಗಿ ಲಕ್ಷ್ಮೀ, ಉಪಾಧ್ಯಕ್ಷರಾಗಿ ಶಾಂತಮ್ಮ ಆಯ್ಕೆ

ಯಳಂದೂರು, ಸೆ.4–ಇಲ್ಲಿನ ಪಟ್ಟಣ ಪಂಚಾಯಿತಿ ಅಧ್ಯಕ್ಷರಾಗಿ ಕಾಂಗ್ರೆಸ್‌ನ ಲಕ್ಷ್ಮೀ ಮಲ್ಲು ಹಾಗೂ ಉಪಾಧ್ಯಕ್ಷರಾಗಿ ಶಾಂತಮ್ಮ ನಿಂಗರಾಜು ಅವಿರೋಧವಾಗಿ ಆಯ್ಕೆಯಾದರು.

ಒಟ್ಟು 11 ಸದಸ್ಯ ಬಲ ಹೊಂದಿರುವ ಪಟ್ಟಣ ಪಂಚಾಯಿತಿಯಲ್ಲಿ ಕಾಂಗ್ರೆಸ್ 10, ಬಿಜೆಪಿಯ ಒಬ್ಬರು ಸದಸ್ಯರಿದ್ದಾರೆ. 4ನೇ ವಾರ್ಡ್‌ನ ಕಾಂಗ್ರೆಸ್ ಸದಸ್ಯ ಮಲ್ಲಯ್ಯ ನಿಧನರಾಗಿದ್ದು, ಕಾಂಗ್ರೆಸ್ 9 ಸದಸ್ಯರ ಬಲ ಹೊಂದಿದೆ.

ಹಿಂದೆ ಅಧ್ಯಕ್ಷರಾಗಿದ್ದ ಪ್ರಭಾವತಿ ಹಾಗೂ ಉಪಾಧ್ಯಕ್ಷರಾಗಿದ್ದ ಲಕ್ಷ್ಮೀ ಮಲ್ಲು ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಗಳಿಗೆ ಬುಧವಾರ ಚುನಾವಣೆ ನಡೆಯಿತು. ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ 10ನೇ ವಾರ್ಡ್‌ನ ಲಕ್ಷ್ಮೀ ಮಲ್ಲು ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ 11ನೇ ವಾರ್ಡ್‌ನ ಶಾಂತಮ್ಮ ಮಾತ್ರ ನಾಮಪತ್ರ ಸಲ್ಲಿಸಿದ್ದರು. ನಂತರ ಚುನಾವಣಾಧಿಕಾರಿಯಾದ ತಹಸೀಲ್ದಾರ್ ಜಯಪ್ರಕಾಶ್ ಅವಿರೋಧ ಆಯ್ಕೆ ಘೋಷಿಸಿದರು.

ಇದೇ ವೇಳೆ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಅಭಿನಂದಿಸಿದರು. ಪಪಂ ಸದಸ್ಯರಾದ ಮಹೇಶ್, ರಂಗನಾಥ್, ಮಂಜು, ಮಹದೇವನಾಯಕ, ಸವಿತಾ, ಪ್ರಭಾವತಿ, ಸುಶೀಲ, ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಮಾಜಿ ಸದಸ್ಯ ಜೆ.ಯೋಗೇಶ್, ಪಪಂ ಮುಖ್ಯಾಧಿಕಾರಿ ಮಹೇಶ್‌ಕುಮಾರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್ ಇತರರಿದ್ದರು.



ಯಳಂದೂರು ಪಪಂ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾದ ಲಕ್ಷ್ಮೀ ಮಲ್ಲು ಮತ್ತು ಶಾಂತಮ್ಮ ನಿಂಗರಾಜು ಅವರನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಅಭಿನಂದಿಸಿದರು.

ಜಪ್ತಿ ಮಾಡಿದ 2.90 ಲಕ್ಷ ರೂ. ಮೌಲ್ಯದ ಮದ್ಯ ನಾಶ



ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಿದ ಮದ್ಯ ನಾಶಪಡಿಸಲಾಯಿತು.

ಚಾಮರಾಜನಗರ, ಸೆ.4–ಚಾಮರಾಜನಗರ ವಲಯ ವ್ಯಾಪ್ತಿಯಲ್ಲಿ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಿದ 2.90 ಲಕ್ಷ ರೂ. ಮೌಲ್ಯದ ಮದ್ಯವನ್ನು ನಾಶಪಡಿಸಲಾಯಿತು.

ಅಬಕಾರಿ ಉಪ ಅಧೀಕ್ಷಕ ಎಂ.ಡಿ.ಮೋಹನ್‌ಕುಮಾರ್ ನೇತೃತ್ವದಲ್ಲಿ ಅಬಕಾರಿ ಮತ್ತು ಪೊಲೀಸ್ ಇಲಾಖೆ ಕಾರ್ಯಾಚರಣೆ ನಡೆಸಿ, ವಿವಿಧ ಕಂಪನಿಯ 387 ಲೀಟರ್ ಮದ್ಯ, 655 ಲೀಟರ್ ಬಿಯರ್ ಮತ್ತು 6.875 ಲೀಟರ್ ಬಕಾರ್ಡಿ ಜಪ್ತಿ ಮಾಡಿ, ಪ್ರಕರಣ ದಾಖಲಿಸಲಾಗಿತ್ತು.

ಈ ಸಂದರ್ಭದಲ್ಲಿ ಚಾಮರಾಜನಗರ ವಲಯ ಅಬಕಾರಿ ನಿರೀಕ್ಷಕರಾದ ಸಿ.ಎಂ. ಮಹದೇವ, ಉಮಾಶಂಕರ್, ಕೆಲ್ಲಂಬಳ್ಳಿ ವೃತ್ತ ಅಡಳಿತಾಧಿಕಾರಿ ರಮೇಶ್, ಪಾನೀಯ ನಿಗಮದ ವ್ಯವಸ್ಥಾಪಕ ಪ್ರಸಾದ್, ಸಿಬ್ಬಂದಿ ರಾಜೇಶ್, ನಾಗೇಶ, ಮಹೇಂದ್ರ, ರಾಜು ಇತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಮಟ್ಟದಲ್ಲಿ ನಾಲ್ಕು ವಿಭಾಗದಲ್ಲೂ ಚಿನ್ನದ ಪದಕ ಪಡೆದ ಪ್ರತಿಭೆ

ಮೈಸೂರು, ಸೆ.4– ಮೂಲತಃ ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲೂಕು ಊಗಿನಹಳ್ಳಿಯ ಎಸ್.ಎನ್.ಶ್ರೀಧರ್ ಮತ್ತು ಡಾ.ಹೆಚ್.ಕೆ.ಲಕ್ಷ್ಮೀ ದಂಪತಿ ಪುತ್ರ ಎಸ್.ಶರಣ್ಯ ಇತ್ತೀಚೆಗೆ ಒಡಿಸ್ಸಾ ರಾಜ್ಯದ ಭುವನೇಶ್ವರದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಈಜು ಸ್ಪರ್ಧೆಯಲ್ಲಿ ನಾಲ್ಕು ವಿಭಾಗದಲ್ಲೂ ಚಿನ್ನದ ಪದಕ ಗಳಿಸಿ, ದಾಖಲೆ ನಿರ್ಮಿಸಿದ್ದಾರೆ.

ಸ್ಪರ್ಧೆಯ 1500 ಮೀಟರ್ ಫ್ರೀ ಸ್ಟೈಲ್‌ನಲ್ಲಿ 16.48.40 ನಿಮಿಷ, 800 ಮೀಟರ್ ಫ್ರೀ ಸ್ಟೈಲ್‌ನಲ್ಲಿ 8.53.89 ನಿಮಿಷ, 400 ಮೀಟರ್ ಫ್ರೀ ಸ್ಟೈಲ್‌ನಲ್ಲಿ 4.14.63 ನಿಮಿಷ ಹಾಗೂ 400x100 ಮೀಟರ್ ಫ್ರೀ ಸ್ಟೈಲ್ ರಿಲೇಯಲ್ಲಿ 3.45.86 ನಿಮಿಷದಲ್ಲಿ ಗುರಿ ಮುಟ್ಟುವ ಮೂಲಕ ನಾಲ್ಕು ವಿಭಾಗದಲ್ಲೂ ಚಿನ್ನದ ಪದಕ ಬಾಚಿಕೊಂಡಿದ್ದಾರೆ.

ಸದ್ಯ ಬೆಂಗಳೂರಿನ ಕೆಂಪಾಪುರದ ಜೈನ ಹೆರಿಟೇಜ್ ಶಾಲೆಯಲ್ಲಿ 9 ನೇ ತರಗತಿ ವ್ಯಾಸಂಗ ಮಾಡುತ್ತಿರುವ ಶರಣ್ಯ, ಈ ಹಿಂದೆಯೂ ಖೇಲೋ ಇಂಡಿಯಾ ಈಜು ಸ್ಪರ್ಧೆ ಹಾಗೂ ಗುಜರಾತ್‌ನ ರಾಜ್‌ಕೊಟಾದಲ್ಲಿ ನಡೆದ ಈಜು ಸ್ಪರ್ಧೆಯಲ್ಲಿ ಚಿನ್ನದ ಪದಕ ಗಳಿಸಿದ್ದಾರೆ. ಇವರ ತಂದೆ ಶ್ರೀಧರ್ ಕಂಪ್ಯೂಟರ್ ಎಂಜಿನಿಯರ್ ಆಗಿದ್ದು, ತಾಯಿ ಡಾ.ಲಕ್ಷ್ಮೀ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞೆಯಾಗಿದ್ದಾರೆ.



ಪದಕ ಹಾಗೂ ಟ್ರೋಫಿಗಳೊಂದಿಗೆ ಈಜುಪಟು ಶರಣ್ಯ

ಪ್ರೋತ್ಸಾಹಕ್ಕೆ ಮನವಿ: ಶರಣ್ಯ ಅವರ ರಾಷ್ಟ್ರೀಯ ಮಟ್ಟದ ಸಾಧನೆ ಕರ್ನಾಟಕಕ್ಕೆ ಹೆಮ್ಮೆ ತರುವಂತಹದ್ದು. ಈ ಭರವಸೆಯ ಕ್ರೀಡಾಪಟುವಿಗೆ ಸರ್ಕಾರದಿಂದ ಸೂಕ್ತ ಪ್ರೋತ್ಸಾಹ ದೊರೆತರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಈಜುಪಟುವಾಗಿ ಹೊರಹೊಮ್ಮುವುದರಲ್ಲಿ ಸಂಶಯವಿಲ್ಲ. ಈ ಬಗ್ಗೆ ನಮ್ಮ ಜನಪ್ರತಿನಿಧಿಗಳು ಗಮನ ಹರಿಸಬೇಕು ಎಂದು ಸಮಾಜ ಸೇವಕ ಬೂಕನಕೆರೆ ವಿಜೇಂದ್ರ ಮನವಿ ಮಾಡಿದ್ದಾರೆ.

ಗಣೇಶೋತ್ಸವದಲ್ಲಿ ಆಹಾರ ಪದಾರ್ಥ, ಪ್ರಸಾದ ಸೇವೆಗೆ ಕಟ್ಟೆಚ್ಚರ

ಬೆಂಗಳೂರು, ಸೆ.4– ಗಣೇಶೋತ್ಸವದ ವೇಳೆ ಆಹಾರ ಪದಾರ್ಥ ಹಾಗೂ ಪ್ರಸಾದ ವಿತರಣೆ ಮೇಲೆ ಕಟ್ಟೆಚ್ಚರ ವಹಿಸಲಾಗಿದ್ದು, ಭಾರತದ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ)ದಿಂದ ಅನುಮತಿ ಪಡೆಯದೇ ಆಹಾರ ನೀಡಿದರೆ ಕೂಡಲೇ ಕ್ರಮ ಕೈಗೊಳ್ಳಲಾಗುವುದು ಎಂದು ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಇಲಾಖೆ ಎಚ್ಚರಿಸಿದೆ. ಗಣಪತಿ ಉತ್ಸವಕ್ಕೆ ಮೂರೇ ದಿನ ಬಾಕಿ ಇರುವಾಗ, ಗಣಪತಿ ಉತ್ಸವದ ಆಯೋಜಕರಿಗೆ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಇಲಾಖೆಯಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕೆಂದು ಸೂಚಿಸಿದೆ.

ಈ ಬಗ್ಗೆ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಇಲಾಖೆಯು ಬಿಬಿಎಂಪಿಗೆ ಪತ್ರ ಬರೆದು, ಎಫ್‌ಎಸ್‌ಎಸ್‌ಎಐ ಇಲಾಖೆಯಿಂದ ಅನುಮತಿ ಪತ್ರ ಪಡೆದವರು ಮಾತ್ರ ಆಹಾರ ವಿತರಿಸಲು ಸೂಚನೆ ನೀಡಿದೆ.

ಒಂದನೇ ಪುಟದಿಂದ

ಸೆ.15 ಕೊನೇ ದಿನ

ನಂಬರ್‌ಗಳನ್ನು ಹಾಕಿಸಿಕೊಳ್ಳಬೇಕು ಒಂದು ವೇಳೆ ಹಾಕಿಸಿಕೊಳ್ಳಲಿಲ್ಲ ಅಂದರೆ ದಂಡ ಕಟ್ಟಿಟ್ಟ ಬುತ್ತಿ. 1 ಏಪ್ರಿಲ್ 2019ಕ್ಕಿಂತ ಮುನ್ನ ನೋಂದಣಿಯಾದ ವಾಹನಗಳಿಗೆ 90 ದಿನಗಳಲ್ಲಿ ಎಚ್‌ಎಸ್‌ಆರ್‌ಪಿ ಫಲಕ ಅಳವಡಿಸಬೇಕು ಎಂದು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಕಳೆದ ವರ್ಷ ನವೆಂಬರ್ 17ರವರೆಗೂ ಕೊನೆಯ ದಿನಾಂಕ ನಿಗದಿಪಡಿಸಲಾಗಿತ್ತು. ಈ ನಡುವೆ ಕೋರ್ಟ್‌ನಲ್ಲಿ ಈ ಕುರಿತು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿತ್ತು. ಅರ್ಜಿ ವಿಚಾರಣೆ ನಡೆಸಿದ ಕರ್ನಾಟಕ ಹೈಕೋರ್ಟ್ ನಂಬರ್ ಪ್ಲೇಟ್ ವಿಸ್ತರಣೆ ಗಡುವು ವಿಸ್ತರಿಸುವಂತೆ ರಾಜ್ಯಕ್ಕೆ ಸೂಚನೆ ನೀಡಿತ್ತು. ಹೈಕೋರ್ಟ್ ಸೂಚನೆ ಮೇರೆಗೆ ಸಾರಿಗೆ ಇಲಾಖೆ 90 ದಿನಗಳಿಗೆ ಅಂದರೆ ಫೆ.17ವರೆಗೂ ಅವಧಿ ವಿಸ್ತರಣೆ ಮಾಡಿತ್ತು. ಇದಲ್ಲದೇ ಮತ್ತೆ ಕೋರ್ಟ್ ಸೂಚನೆ ಮೇರೆಗೆ ಸೆಪ್ಟೆಂಬರ್ 15ರ ವರೆಗೆ ವಿಸ್ತರಣೆ ಮಾಡಲಾಗಿದೆ.

ಏನಿದು ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ಪ್ಲೇಟ್: ಭದ್ರತೆ ಹಾಗೂ ಸುರಕ್ಷತೆಯ ದೃಷ್ಟಿಯಿಂದ ಮೋಟಾರು ವಾಹನ ಕಾಯ್ದೆ–1989 ಸೆಕ್ಷನ್ 50 ಹಾಗೂ 51 ಅನ್ವಯ ಎಲ್ಲಾ ವಾಹನಗಳಿಗೆ ಗರಿಷ್ಠ ಭದ್ರತೆಯ ನಂಬರ್ ಪ್ಲೇಟ್‌ಗಳನ್ನು ಅಳವಡಿಸಬೇಕಿದೆ. ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಎಂದರೆ ಹೈ ಸೆಕ್ಯೂರಿಟಿ ರಿಜಿಸ್ಟ್ರೇಶನ್ ಪ್ಲೇಟ್ ಎಂದರ್ಥ. ಕರ್ನಾಟಕದ ವಾಹಗಳಿಗೆ ಇದನ್ನು ಕಡ್ಡಾಯಗೊಳಿಸಲಾಗಿದೆ. ಒಂದು ವೇಳೆ ಹೆಚ್‌ಎಸ್‌ಆರ್‌ಪಿ ಅಳವಡಿಸದಿದ್ದರೆ ಮಾಲೀಕತ್ವದ ಬದಲಾವಣೆ, ವಿಳಾಸ ಬದಲಾವಣೆ, ನಕಲಿ ಆರ್‌ಸಿ, ವಿಮೆ ಹಾಗೂ ಇನ್ನಿತರ ಕೆಲಸಗಳನ್ನು ಮಾಡಲಾಗುವುದಿಲ್ಲ. ಸಾರಿಗೆ ಇಲಾಖೆ ಹೊರಡಿಸಿರುವ ಈ ಸೂಚನೆಯಿಂದ ಅಧಿಕೃತವಾಗಿಲ್ಲದ ವಾಹನಗಳು ರಸ್ತೆಯಲ್ಲಿ ಓಡಾಡುವುದನ್ನು ಸುಲಭವಾಗಿ ಪತ್ತೆ ಹಚ್ಚಲು ಸಹಾಯಕವಾಗಲಿದೆ.

ಗ್ರಾಮಸ್ಥರಿಂದ ಕುಂದುಕೊರತೆ ಆಲಿಸಿದ ಸಚಿವ ವೆಂಕಟೇಶ್

ಚಿರತೆ ಕಾಟ, ಡಬ್ಬಲ್ ರಸ್ತೆಬೇಕು, ಉಪನ್ಯಾಸಕರಿಲ್ಲ, ಮೂಲಸೌಕರ್ಯವಿಲ್ಲ...



ಕಣಗಾಲು ಗ್ರಾಮದಲ್ಲಿ ಸಚಿವ ವೆಂಕಟೇಶ್ ಗ್ರಾಮಸ್ಥರ ಕುಂದು ಕೊರತೆ ಆಲಿಸಿದರು.

ಬೆಟ್ಟದಪುರ, ಸೆ.4– ಪಿರಿಯಾಪಟ್ಟಣ ತಾಲೂಕಿನ ಕಣಗಾಲು ಗ್ರಾಮದಲ್ಲಿ ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ಗ್ರಾಮಸ್ಥರ ಕುಂದು ಕೊರತೆ ಆಲಿಸಿ ಅಹವಾಲು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರು ಗ್ರಾಮದಲ್ಲಿ ಚಿರತೆ ಕಾಟ, ಬೆಟ್ಟದಪುರ ಕಣಗಾಲು ಕುಶಾಲನಗರ ರಸ್ತೆ ಕಿರಿದಾಗಿದ್ದು, ಇದನ್ನು ಡಬಲ್ ರಸ್ತೆಯಾಗಿ ಮಾಡಬೇಕು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರು ಇಲ್ಲದೆ ವಿದ್ಯಾರ್ಥಿಗಳು ದೂರದ ಊರಿಗೆ ಅಲೆಯಬೇಕಾಗಿದೆ. ಇದರೊಂದಿಗೆ ಗ್ರಾಮದಲ್ಲಿ ವಿದ್ಯುತ್ ಇಲಾಖೆಯವರ ನಿರ್ಲಕ್ಷ್ಯದಿಂದ ಗ್ರಾಮದಲ್ಲಿ ಅಪಾಯಗಳು ಸಂಭವಿಸುತ್ತಿವೆ ಎಂದರು. ಸಚಿವರು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿ ರೈತರಿಗೆ, ಸಾರ್ವಜನಿಕರಿಗೆ ಸರಿಯಾದ ಸಮಯದಲ್ಲಿ ಸ್ಪಂದಿಸಬೇಕು. ಸರಿಯಾಗಿ ಸ್ಪಂದಿಸದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಕಣಗಾಲು ಪದವಿ ಪೂರ್ವ ಕಾಲೇಜಿಗೆ ತಕ್ಷಣವೇ ಉಪನ್ಯಾಸಕರನ್ನು ನೇಮಿಸುವಂತೆ ಹಿರಿಯ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ ತಾಲೂಕಿಗೆ ಬೇಕಾಗುವ ಎಲ್ಲಾ ಮೂಲಸೌಕರ್ಯಗಳನ್ನು ಇನ್ನು ನಾಲ್ಕು ವರ್ಷದ ಅವಧಿಯಲ್ಲಿ ಪೂರೈಸಲಾಗುವುದೆಂದು ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ರಹಮದ್ ಜಾನ್, ಬಾಬು, ಚೆನ್ನಕಲ್ಲು ಕಾವಲು ಶೇಖರ್, ಕಣಗಾಲು ಗ್ರಾಪಂ ಮಾಜಿ ಉಪಾಧ್ಯಕ್ಷ ಕುಮಾರ್ ಶೆಟ್ಟಿ, ರಮಣಯ್ಯ ಶೇಖರಪ್ಪ, ಶ್ರೀನಿವಾಸ್ ಗೌಡ, ತಹಸಿಲ್ದಾರ್ ನಿಸರ್ಗ ಪ್ರಿಯ, ಕಾರ್ಯನಿರ್ವಹಕ ಅಧಿಕಾರಿ ಸುನಿಲ್ ಕುಮಾರ್, ಮಹೇಂದ್ರ, ಸೋಮಶೇಖರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಮತಾ, ಪಶು ಸಂಗೋಪನ ಇಲಾಖೆಯ ಸೋಮಯ್ಯ, ನೀರಾವರಿ ಇಲಾಖೆಯ ಶಿವಕುಮಾರ್, ಕೃಷಿ ಇಲಾಖೆಯ ಪ್ರಸಾದ್, ಸಾರಿಗೆ ಇಲಾಖೆ ದರ್ಶನ್, ಪೊಲೀಸ್ ವೃತ್ತ ನಿರೀಕ್ಷಕ ದೀಪಕ್, ಪಿಡಿಓ ಗಣೇಶ್ ಹಾಗೂ ಸಾರ್ವಜನಿಕರು ಹಾಜರಿದ್ದರು.

ಜಾಗತಿಕ ಮಟ್ಟಕ್ಕೂ ನಂದಿನಿ ಬ್ರಾಂಡ್ ವಿಸ್ತರಣೆ

ಮೈಮುಲ್ ಅಧ್ಯಕ್ಷ ಚಲುವರಾಜು ಘೋಷಣೆ



ತಿ. ನರಸೀಪುರ ಪಟ್ಟಣದ ಹಾಲು ಮಾರಾಟಗಾರರ ಸಹಕಾರ ಸಂಘದ ವತಿಯಿಂದ ನೂತನ ಅಧ್ಯಕ್ಷ ಆರ್.ಚಲುವರಾಜ್, ನಿರ್ದೇಶಕ ಓಂ ಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ತಿ ನರಸೀಪುರ, ಸೆ.4– ಮೈಮುಲ್‌ನ ನಂದಿನಿ ಬ್ರಾಂಡ್ ಅನ್ನು ಜಾಗತಿಕ ಮಟ್ಟಕ್ಕೂ ವಿಸ್ತರಣೆ ಮಾಡಲಾಗುವುದು ಎಂದು ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ಹೇಳಿದರು.

ಮೈಮುಲ್ ಅಧ್ಯಕ್ಷರ ಕಚೇರಿಯಲ್ಲಿ ಪಟ್ಟಣದ ಹಾಲು ಮಾರಾಟಗಾರರ ಸಹಕಾರ ಸಂಘದ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನಂದಿನಿ ಬ್ರಾಂಡ್ ಪರಿಶುದ್ಧ ಹಾಗೂ ತಾಜಾ ಹಾಲು ಮತ್ತು ಹಾಲಿನ ಉತ್ಪನ್ನಗಳಿಗಾಗಿ ಮನೆ ಮಾತಾಗಿದೆ ಎಂದರು, ಪ್ರಸ್ತುತ ಕೆಎಂಎಫ್ ದೇಶದಲ್ಲಿಯೇ ಸಹಕಾರಿ ಉದ್ಯಮದಲ್ಲಿ ಎರಡನೇ ಸ್ಥಾನದಲ್ಲಿದ್ದು, ದಕ್ಷಿಣ ಭಾರತದಲ್ಲಿ ಹಾಲು ಶೇಖರಣೆ ಹಾಗೂ ಮಾರಾಟದಲ್ಲಿ ಮೊದಲ ಸ್ಥಾನದಲ್ಲಿದೆ ಎಂದರು.

ಒಕ್ಕೂಟಕ್ಕೆ ಮಾರಾಟದ ಪ್ರಮಾಣಕ್ಕಿಂತಲೂ ಹೆಚ್ಚಿನ ಹಾಲು ಸರಬರಾಜಾಗುತ್ತಿದ್ದು, ತಂತ್ರಜ್ಞಾನ ಅಳವಡಿಸಿಕೊಂಡು ಅಧಿಕ ಪ್ರಮಾಣದ ಹಾಲನ್ನು ಪುಡಿಯನ್ನಾಗಿ ಪರಿವರ್ತಿಸಿ ಹೊರರಾಜ್ಯ ಹಾಗೂ ವಿದೇಶಗಳಿಗೆ ಮಾರಾಟಕ್ಕೆ ಕಳಿಸಲಾಗುತ್ತಿದೆ. ಜಿಲ್ಲೆಯಲ್ಲಿ ತಾಂತ್ರಿಕ ಕಾರಣಗಳಿಂದ ಸ್ಥಗಿತಗೊಂಡಿರುವ ಹೈನುಗಾರಿಕೆಗೆ ಯೋಜನೆಗಳನ್ನು ಮರು ಆರಂಭಿಸಲು ಆಡಳಿತ ಮಂಡಳಿಯ ನಿರ್ದೇಶಕರ ಜೊತೆಗೂಡಿ ಚಿಂತನೆ ನಡೆಸಿದ್ದೇವೆ ಎಂದು ಹೇಳಿದರು.

ಮೈಮುಲ್ ಮಾಜಿ ಅಧ್ಯಕ್ಷ ಹಾಗೂ ಹಾಲಿ ನಿರ್ದೇಶಕ ಓಂ ಪ್ರಕಾಶ್ ಮಾತನಾಡಿ, ರೈತರ ಹಿತವನ್ನು ಕಾಪಾಡಲು ಹಾಗೂ ಹೈನುಗಾರಿಕೆಗೆ ಉತ್ತೇಜನ ನೀಡಲು ರಾಜ್ಯದಲ್ಲಿಯೇ ನಮ್ಮ ಒಕ್ಕೂಟದಿಂದ ಹಾಲಿಗೆ ಅಧಿಕ ದರವನ್ನು ನೀಡಲಾಗುತ್ತಿದೆ, ನಂದಿನಿ ಮಳಿಗೆಯ ಮಾರಾಟಗಾರರು ನಂದಿನಿ ಉತ್ಪನ್ನಗಳನ್ನು ಬಿಟ್ಟು ಬೇರೆ ಉತ್ಪನ್ನಗಳಿಗೆ ಅವಕಾಶ ಕೊಡಬೇಡಿ, ಗ್ರಾಹಕರಿಗೆ ನಂದಿನಿ ಬ್ರಾಂಡ್ ಮತ್ತು ಪರಿಶುದ್ಧದ ಬಗ್ಗೆ ಅರಿವು ಮೂಡಿಸಿ ಗ್ರಾಹಕರನ್ನು ಸೆಳೆದು ಹೆಚ್ಚು ಹೆಚ್ಚು ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡುವಂತೆ ಸಲಹೆ ನೀಡಿದರು. ಪಟ್ಟಣದ ಹಾಲು ಮಾರಾಟಗಾರರ ಸಹಕಾರ ಸಂಘದ ವತಿಯಿಂದ ಮೈಮುಲ್ ಅಧ್ಯಕ್ಷ ಆರ್. ಚಲುವರಾಜು ಹಾಗೂ ಮಾಜಿ ಅಧ್ಯಕ್ಷ ಹಾಲಿ ನಿರ್ದೇಶಕ ಓಂಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ ಪಟ್ಟಣದ ಹಾಲು ಮಾರಾಟಗಾರರ ಸಹಕಾರ ಸಂಘದ ಅಧ್ಯಕ್ಷ ಡೈರಿ ಗುರುಮೂರ್ತಿ, ಮೈಮುಲ್ ನಿರ್ದೇಶಕರುಗಳಾದ ಕೆ.ಜಿ. ಮಹೇಶ್, ದಾಕ್ಷಾಯಿಣಿ ಬಸವರಾಜು, ತಾಪಂ ಮಾಜಿ ಅಧ್ಯಕ್ಷ ನರಗ್ಯಾತನಹಳ್ಳಿ ಕುಮಾರಸ್ವಾಮಿ, ಶಾಮಿಯಾನ ನಾಗೇಶ್, ರಮೇಶ್ ಬಾಬು, ಪರಶಿವ ಮೂರ್ತಿ, ಮಂಜುನಾಥ್, ಸುರೇಶ್, ಮೈಮುಲ್‌ನ ಎಚ್.ಎಂ. ಮನೋಜ್ ಮತ್ತಿತರರು ಇದ್ದರು.

ಶೀಘ್ರ ಕೇಂದ್ರೀಯ ಪಟ್ಟಿಗೆ ತಂಬಾಕು ಸೇರ್ಪಡೆ: ಐಸಿಎಆರ್ ಡಿಡಿಜಿ



ಆಲ್ ಇಂಡಿಯಾ ನೆಟ್‌ವರ್ಕ್ ಪ್ರಾಜೆಕ್ಟ್ ಆನ್ ಟೊಬ್ಯಾಕೋ ಕುರಿತ ಎರಡು ದಿನದ ಕಾರ್ಯಾಗಾರಕ್ಕೆ ಡಾ.ಟಿ.ಆರ್. ಶರ್ಮ ಚಾಲನೆ ನೀಡಿದರು.

ಹುಣಸೂರು, ಸೆ.4– ತಂಬಾಕು ಬೆಳೆಯಲ್ಲಿ 70 ವರ್ಷದಲ್ಲಿ ನೂರಕ್ಕೂ ಹೆಚ್ಚು ತಳಿಗಳನ್ನು ರೈತರಿಗೆ ಪರಿಚಯಿಸಿದ್ದು ಇದು ತಂಬಾಕು ಸಂಶೋಧನ ಕೇಂದ್ರದ ಸಾಧನೆಯಾಗಿದೆ ಎಂದು ಐಸಿಎಆರ್ ಡಿಡಿಜಿ ಡಾ.ಟಿ.ಆರ್. ಶರ್ಮ ತಿಳಿಸಿದರು.

ನಗರದ ಕೇಂದ್ರೀಯ ತಂಬಾಕು ಸಂಶೋಧನ ಕೇಂದ್ರದಲ್ಲಿ 13ನೇ ವರ್ಷದ ಆಲ್ ಇಂಡಿಯಾ ನೆಟ್‌ವರ್ಕ್ ಪ್ರಾಜೆಕ್ಟ್ ಆನ್ ಟೊಬ್ಯಾಕೋ ಕುರಿತ ಎರಡು ದಿನದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ತಂಬಾಕು ಹಲವು ವಿಚಾರಗಳಿಂದಾಗಿ ಕೇಂದ್ರೀಯ ಪಟ್ಟಿಯಲ್ಲಿ ಸೇರಿಸಲಾಗಿರಲಿಲ್ಲ. ಈ ಸಾಲಿನಲ್ಲಿ ತಂಬಾಕು ಬೆಳೆಯನ್ನು ಪಟ್ಟಿಗೆ ಸೇರಿಸುವ ಪ್ರಯತ್ನ ನಡೆದಿದ್ದು, ಸಿಹಿ ಸುದ್ದಿ ಅತಿ ಶೀಘ್ರದಲ್ಲಿ ಸಿಗುವ ನಿರೀಕ್ಷೆ ಹೊಂದಿದ್ದೇವೆ ಎಂದರು.

ಅಲ್ಲದೆ ಮೈಸೂರು ಭಾಗದ ಆರ್ಥಿಕ ಬೆಳೆಯಾಗಿರುವ ತಂಬಾಕು ಬೇಸಾಯದಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಬೇಕಾಗಿರುವ ಹೊಸ ತಂತ್ರಜ್ಞಾನಕ್ಕೆ ಸಂಶೋಧಕರು ಒತ್ತು ನೀಡಿ ರೈತರಿಗೆ ತಲುಪಿಸುವುದರಿಂದ ರೈತ ಗುಣಮಟ್ಟದ ತಂಬಾಕು ಉತ್ಪಾದಿಸಲು ಸಹಕಾರಿ ಆಗಲಿದೆ ಎಂದರು.

ಯಾವುದೇ ಅಭಿವೃದ್ಧಿ ಕ್ಷೇತ್ರದಲ್ಲಿ ಮೂಲ ಬೆಳೆಯ ವಂಶವಾಹಿಗಳನ್ನು ಸಂರಕ್ಷಿಸಿ ಆ ಮೂಲಕ ಹಲವು ತಳಿಗಳನ್ನು ಅಭಿವೃದ್ಧಿ ಪಡಿಸುವ ಕೆಲಸ ಪ್ರತಿಯೊಂದು ಬೆಳೆಗಳಲ್ಲಿ ನಡೆಯಲಿದೆ. ಅದೇ ರೀತಿ ತಂಬಾಕಿನ ವಂಶವಾಹಿನಿಯನ್ನು ಬಳಸಿಕೊಂಡು ಗುಣಮಟ್ಟ ಹಾಗೂ ಹೆಚ್ಚಿನ ಇಳುವರಿ ಬರುವ ತಳಿ ಅಭಿವೃದ್ಧಿಪಡಿಸಿ ರೈತರಿಗೆ ಕಡಿಮೆ ಖರ್ಚಿನಲ್ಲಿ ಹೆಚ್ಚು ಉತ್ಪಾದಿಸಲು ಸಹಕಾರಿ ಆಗಲಿದೆ. ಇದಲ್ಲದೆ ತಂಬಾಕು ಅವಲಂಬಿಸಿದ ಕೈಗಾರಿಕೆಗಳಿದ್ದು ಈ ಕೈಗಾರಿಕೆಗಳ ಬೇಡಿಕೆಗೆ ಅನುಗುಣವಾದ ತಳಿಯನ್ನು ಅಭಿವೃದ್ಧಿಪಡಿಸಿ ಉತ್ಪಾದಿಸಿದಲ್ಲಿ ಆರ್ಥಿಕ ಚಟುವಟಿಕೆ ಮತ್ತಷ್ಟು ವೃದ್ಧಿಯಾಗಿ ರೈತ ಆರ್ಥಿಕವಾಗಿ ಸ್ವಾವಲಂಬಿ ಆಗಬಹುದು ಎಂದು ಅವರು ವಿವರಿಸಿದರು.

ತಂತ್ರಜ್ಞಾನ: ತಂಬಾಕು ಬೆಳೆಯಲ್ಲಿ ತಂತ್ರಜ್ಞಾನ ಹೆಚ್ಚಿನದಾಗಿ ಬಳಸಿಕೊಳ್ಳುವ ರೀತಿಯಲ್ಲಿ ವಿಜ್ಞಾನಿಗಳು ಸಂಶೋಧನೆ ನಡೆಸಿ ರೈತರಿಗೆ ನೀಡಬೇಕಾಗಿದೆ ದಶಕಗಳಿಂದ ತಂಬಾಕು ಬೆಳೆಯುತ್ತಿದ್ದರೂ ಈಗಲೂ ಹಳೆ ಮಾದರಿಯಲ್ಲಿ ಉತ್ಪತ್ತಿ ಮಾಡುವ ತಂತ್ರಜ್ಞಾನ ಹೊಂದಿದ್ದೇವೆ. ಈ ದಿಕ್ಕಿನಲ್ಲಿ ಹೆಚ್ಚಿನ ಸಂಶೋಧನೆ ನಡೆಸಬೇಕಾಗಿದೆ. ಇದಲ್ಲದೆ ತಂಬಾಕು ಕಡಿಮೆ ವಿಸ್ತೀರ್ಣದಲ್ಲಿ ಹೆಚ್ಚು ಇಳುವರಿ ಪಡೆಯುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದಲ್ಲಿ ರೈತರು ತಂಬಾಕಿನೊಂದಿಗೆ ಇತರೆ ವಾಣಿಜ್ಯ ಬೆಳೆಯನ್ನು ಬೆಳೆಯಲು ಸಹಕಾರಿ ಆಗಲಿದೆ ಎಂದರು.

ಶಿವಮೊಗ್ಗ ಕೃಷಿ ವಿವಿ ಉಪಕುಲಪತಿ ಡಾ.ಜಗದೀಶ್ ಮಾತನಾಡಿ, ರಾಜ್ಯದ ಮಲೆನಾಡು ಮೈಸೂರು ಭಾಗದಲ್ಲಿ ಎಫ್.ಸಿ.ವಿ ತಂಬಾಕು ಬೆಳೆಯುವ ರೈತರ ಆರ್ಥಿಕ ಸ್ಥಿತಿಗತಿ ಉತ್ತಮವಿದೆ. ರಾಷ್ಟ್ರೀಯ ಕಾರ್ಯಾಗಾರದಲ್ಲಿ ರೈತರಿಗೆ ತಾಂತ್ರಿಕವಾಗಿ ಬೇಸಾಯ ಮಾಡುವ ಬಗ್ಗೆ ಗಂಭೀರ ಚರ್ಚೆ ನಡೆದು ಅದರ ಲಾಭ ಬೆಳೆಗಾರನಿಗೆ ತಲುಪಿಸುವಂತಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ಹರೀಶ್‌ಗೌಡ ಮಾತನಾಡಿ, ದೇಶದ 20 ಸಂಶೋಧನ ಕೇಂದ್ರದ ಕೃಷಿ ವಿಜ್ಞಾನಿಗಳು ಭಾಗವಹಿಸಿರುವ ಈ ಕಾರ್ಯಾಗಾರದಲ್ಲಿ ಭಾಗವಹಿಸಿರುವ ವಿಜ್ಞಾನಿಗಳು ಚರ್ಚಿಸುವ ಕೃಷಿ ಅಭಿವೃದ್ಧಿ ವಿಷಯ ಮತ್ತು ಸಂಶೋಧನೆಯ ಫಲ ರೈತರಿಗೆ ನೇರವಾಗಿ ತಲುಪಿಸುವ ಕೆಲಸ ಆಗಬೇಕು ಎಂದು ಹೇಳಿದರು.

ವೇದಿಕೆಯಲ್ಲಿ ಐಸಿಎಆರ್ ಎಡಿಜಿ ಡಾ.ಪ್ರಶಾಂತ ಕೆ.ದಾಸ್, ತಂಬಾಕು ಮಂಡಳಿ ನಿರ್ದೇಶಕ ಡಾ.ಶೇಷು ಮಾಧವ, ನೋಡಲ್ ಅಧಿಕಾರಿ ಡಾ.ಕೆ.ಸರಳ, ಮಂಡಳಿ ಸದಸ್ಯರಾದ ಬಸವರಾಜ್, ವಿಕ್ರಂರಾಜೇಗೌಡ ಉಪಸ್ಥಿತರಿದ್ದರು.

ಸರಗೂರು ತಾಲೂಕು ಛಾಯಾಗ್ರಾಹಕ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ



ಸರಗೂರು ತಾಲೂಕು ಛಾಯಾಗ್ರಾಹಕ ಸಂಘದ ನೂತನ ಪದಾಧಿಕಾರಿಗಳು.

ಹೆಚ್.ಡಿ.ಕೋಟೆ, ಸೆ.4– ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಛಾಯಾಗ್ರಾಹಕ ಸಂಘಕ್ಕೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ರವಿಕುಮಾರ್ ಆರಾಧ್ಯ, ಉಪಾಧ್ಯಕ್ಷರಾಗಿ ಹೆಗ್ಗಡಪುರ ಶಿವಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ಬೆಳತ್ತೂರು ಕೃಷ್ಣ, ಖಜಾಂಚಿ ಹೈರಿಗೆ ಪರಮೇಶ್ ಗೌಡ, ಕಾರ್ಯದರ್ಶಿಯಾಗಿ ಚಾಕಳ್ಳಿ ಸುರೇಶ್, ಕಾರ್ಯಾಧ್ಯಕ್ಷರಾಗಿ ಬೀಚನಹಳ್ಳಿ ಕಾಳಚಾರಿ, ಗೌರವಾಧ್ಯಕ್ಷರಾಗಿ ಹಂಪಾಪುರ ಕಾಶಿ ಮಹೇಶ್, ಸಂಚಾಲಕರಾಗಿ ಗುರು, ನಿರ್ದೇಶಕರಾಗಿ ಶಾಲಿನಿ ಸೋಮೇಶ್, ಚಿಕ್ಕನಾಯಕ, ಕೃಷ್ಣ ಸಾಯಿರಾಮ್, ಮಹೇಂದ್ರ ಚಾಕಹಳ್ಳಿ, ನವೀನ, ಪ್ರಸನ್ನ, ಶ್ರೀನಿವಾಸ ಶಾಂತಿಪುರ ಇವರನ್ನು ಆಯ್ಕೆ ಮಾಡಲಾಯಿತು.

ಕೊಳತ್ತೂರು ಡೇರಿಗೆ 2.21 ಲಕ್ಷ ರೂ. ನಿವ್ವಳ ಲಾಭ



ತಿ. ನರಸೀಪುರ ತಾಲೂಕಿನ ಕೊಳತ್ತೂರು ಡೈರಿಯ ಕಚೇರಿಯಲ್ಲಿ ಹೆಚ್ಚು ಹಾಲು ನೀಡಿದ ರೈತರಿಗೆ ಬಹುಮಾನವನ್ನ ಡೈರಿ ಅಧ್ಯಕ್ಷ ಕೆಎನ್ ಕುಮಾರ್ ವಿತರಿಸಿದರು


ತಿ.ನರಸೀಪುರ, ಸೆ.4– ಹಾಲಿನ ಗುಣಮಟ್ಟ ಹೆಚ್ಚಿಸುವ ಜವಾಬ್ದಾರಿ ರೈತರದ್ದಾಗಿದೆ. ಉತ್ಪಾದಕರು ಡೈರಿಗೆ ಹಾಕುವ ಹಾಲಿನ ಗುಣಮಟ್ಟ ಉತ್ತಮವಾಗಿದ್ದಲ್ಲಿ ಉತ್ಪಾದಕರಿಗೆ ಉತ್ತಮ ಬೆಲೆ ಸಿಗಲಿದೆ ಎಂದು ಕೊಳತ್ತೂರು ಡೈರಿ ಅಧ್ಯಕ್ಷ ಕೆ.ಎನ್.ಕುಮಾರ್ ಹೇಳಿದರು.

ತಾಲೂಕಿನ ಕೊಳತ್ತೂರು ಡೈರಿಯ ಕಚೇರಿಯ ಆವರಣದಲ್ಲಿ 2023–24ನೇ ಸಾಲಿನ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಬಾರಿ ನಮ್ಮ ರೈತರ ಹಾಲಿನ ಗುಣಮಟ್ಟ ಮತ್ತು ಸಾಕಾರದಿಂದ 2,21000 ನಿವ್ವಳ ಲಾಭ ಬಂದಿದೆ ಎಂದರು. ನಮ್ಮ ಡೈರಿಯಲ್ಲಿ ರೈತರಿಗೆ ಬೋನಸ್ಸನ್ನ 93770 ನೀಡಿದ್ದೇವೆ. ರೈತರು ಸಕಾಲದಲ್ಲಿ ಉತ್ತಮವಾಗಿ ಗುಣಮಟ್ಟದ ಹಾಲು ನೀಡಿದರೆ ಇನ್ನು ಹೆಚ್ಚಿನ ಲಾಭಾಂಶ ಪಡೆಯಬಹುದು ಎಂದು ಹೇಳಿದರು

ಹೆಚ್ಚಿನ ಹಾಲು ನೀಡಿದ್ದ ರೈತರಿಗೆ ಮಾಡಿದ್ದ ಜಯಮ್ಮ ಮಹಾದೇವಯ್ಯ,ಕೆ. ಶಂಕರ್, ಗೀತಾ ಶಾಂತರಾಜು, ಮಹದೇವ, ರವರಿಗೆ ಬಹುಮಾನ ವಿತರಿಸಿದರು. ವಿಸ್ತರಣಾಧಿಕಾರಿ ಅನಿತಾರವರು, ಮೈಮುಲ್‌ನಿಂದ ದೊರಕುವ ಉಪಯುಕ್ತ ಮಾಹಿತಿಯನ್ನು ರೈತರಿಗೆ ಮನವರಿಕೆ ಮಾಡಿಕೊಟ್ಟರು.

ಉಪಾಧ್ಯಕ್ಷ ಕಾಳಯ್ಯ, ನಿರ್ದೇಶಕರಾದ ಕೆ.ಶಂಕರ್, ಬಿ.ಲೋಕೇಶ್, ತಿಮ್ಮರಾಯ ಗೌಡ, ಮಹದೇವ, ಕೃಷ್ಣ, ರತ್ನಮ್ಮ ಸೋಮಣ್ಣ, ರತ್ನಮ್ಮ ಮಹಾದೇವಯ್ಯ, ನಿಂಗರಾಜು, ಪದ್ಮ, ಕೆ.ಎಸ್.ಮಹದೇವ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿದ್ದರಾಜು, ಹಾಲು ಪರೀಕ್ಷಕ ಕೆಎಸ್ ಧನರಾಜ್, ಗುಮಾಸ್ತ ಕೆಎನ್ ಗೋವಿಂದ, ಎಂ ಚಂದನ್, ಗ್ರಾಪಂ ಅಧ್ಯಕ್ಷ ರವಿ, ವಕೀಲ ವೀರಭದ್ರ, ಮಾಜಿ ನಿರ್ದೇಶಕ ಸೋಮಣ್ಣ, ಮಾಜಿ ಸದಸ್ಯ ಸ್ವಾಮಿ, ಮುಖಂಡರಾದ ನಾಗೇಗೌಡ, ಕೆಂಪೇಗೌಡ ಗ್ರಾಮಸ್ಥರು ರೈತರು ಹಾಜರಿದ್ದರು.

ಪುರಸಭಾ ಉಪಾಧ್ಯಕ್ಷರಿಂದ ಸಂಸದರಿಗೆ ಅಭಿನಂದನೆ



ತಿ.ನರಸೀಪುರ ಪುರಸಭೆಯ ನೂತನ ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ ಅವರು ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನಿಲ್ ಬೋಸ್ ಅವರಿಗೆ ನೆನಪಿನ ಕಾಣಿಕೆ ನೀಡಿ, ಅಭಿನಂದಿಸಿದರು. ಸಾಮಾಜಿಕ ನ್ಯಾಯ ಸಮಿತಿಯ ಮಾಜಿ ಅಧ್ಯಕ್ಷ ಸೈಯದ್ ಅಹ್ಮದ್, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಮಾಜಿ ಅಧ್ಯಕ್ಷ ಎಂ. ಮಲ್ಲಿಕಾರ್ಜುನ ಸ್ವಾಮಿ, ಪಪಂ ಮಾಜಿ ಅಧ್ಯಕ್ಷ ಎನ್. ಮಹದೇವಸ್ವಾಮಿ, ಪಾರುಪತ್ತೇಗಾರ ಎಂ.ಬಿ. ಸಾಗರ್, ಬೆಟ್ಟಳ್ಳಿ ನಾಗರಾಜು, ಮುಖಂಡರಾದ ಸ್ವಾಮಿ, ದಿವಾಕರ್ ಮತ್ತಿತರಿದ್ದಾರೆ.

ಹಣ ದುರುಪಯೋಗ; ಟಿಎಪಿಸಿಎಂಎಸ್ ಪ್ರಭಾರ ಕಾರ್ಯದರ್ಶಿಗೆ ನೋಟಿಸ್



ಟಿಎಪಿಸಿಎಂಎಸ್ ಆಡಳಿತ ಕಛೇರಿ.

ಕೆ.ಆರ್.ನಗರ, ಸೆ.4– ಹಣ ದುರುಪಯೋಗ ಮಾಡಿಕೊಂಡಿರುವ ಆರೋಪದ ಹಿನ್ನೆಲೆಯಲ್ಲಿ ಇಲ್ಲಿನ ಟಿಎಪಿಸಿಎಂಎಸ್ ಪ್ರಭಾರ ಕಾರ್ಯದರ್ಶಿ ಕೆ.ಸಿ.ಧರ್ಮರಾಜು ಅವರಿಗೆ ಹುಣಸೂರು ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕಿ ಅನುಸೂಯ ನೋಟಿಸ್ ನೀಡಿದ್ದಾರೆ.

2023–24ನೇ ಸಾಲಿನಲ್ಲಿ ಹಣ ಪಡೆದು ಸಂಬಂಧಿಸಿದವರಿಗೆ ರಶೀದಿ ನೀಡಿ ಐದು ರಶೀದಿಗಳಿಂದ 1,87,035 ರೂಗಳನ್ನು ಸಂಘದ ನಗದು ಪುಸ್ತಕಕ್ಕೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿದ್ದು ಹಣ ಪಡೆದ ದಿನಾಂಕದಿಂದ ಶೇ.18 ಬಡ್ಡಿ ಸಹಿತ ವಸೂಲಾತಿಗೆ ಸೂಚಿಸಲಾಗಿದೆ.

ನವೆಂಬರ್ 2023ರ ಮಾಹೆಯ ನಗದು ಪುಸ್ತಕದಲ್ಲಿ ಶಿಲ್ಕು ವ್ಯತ್ಯಾಸ ಮಾಡಿ 10 ಸಾವಿರ ರೂ.ಗಳನ್ನು ದುರುಪಯೋಗಪಡಿಸಿಕೊಂಡಿರುವುದು ಮತ್ತು 2023ನೇ ಸಾಲಿನ ವಾರ್ಷಿಕ ಮಹಾಸಭೆಯ ವೆಚ್ಚ 1.50 ಲಕ್ಷ ಹಾಗೂ ಸೆಪ್ಟೆಂಬರ್ 2023ರ ಮಾಹೆಯ ನಗದು ಪುಸ್ತಕದಲ್ಲಿ ಭವಿಷ್ಯ ನಿಧಿ ಪಾವತಿಯ 80 ಸಾವಿರ ರೂಗಳಿಗೆ ವೋಚರ್ ಹಾಜರುಪಡಿಸಿಲ್ಲವೆಂದು ಆಡಳಿತ ಮಂಡಳಿ ಆಕ್ಷೇಪಿಸಿದ್ದು ಇವುಗಳನ್ನು ಹಾಜರುಪಡಿಸದಿದ್ದಲ್ಲಿ ಖರ್ಚನ್ನು ಮಾನ್ಯ ಮಾಡುವುದಿಲ್ಲವೆಂದು ನೋಟಿಸಿನಲ್ಲಿ ತಿಳಿಸಲಾಗಿದೆ.

ಇದರ ಜತೆಗೆ 31.03.2024ಕ್ಕೆ ಅನ್ವಯವಾಗುವಂತೆ ಭೌತಿಕ ಪಡಿತರ ದಾಸ್ತಾನು ಮತ್ತು ವಾಸ್ತವ ದಾಸ್ತಾನು ವಹಿ ಎಪಿಎಲ್ ಅಕ್ಕಿ ಸಗಟು ಶಾಖೆ ಮತ್ತು ಸಂಘದ 5 ಪಡಿತರ ವಿತರಣೆ ಚಿಲ್ಲರೆ ಶಾಖೆಗಳಿಂದ 64.30 ಕ್ವಿಂಟಾಲ್ ಎಪಿಎಲ್ ಅಕ್ಕಿ ದಾಸ್ತಾನು ಕೊರತೆಯಿದ್ದು ಸದರಿ ದಾಸ್ತಾನು ವಿವಿಧ ಶಾಖೆ ಮಾರಾಟಗಾರರಿಗೆ ವಹಿಸಬೇಕೆಂದು ಸೂಚಿಸಲಾಗಿದೆ.

ಕಾರ್ಯದರ್ಶಿ ಕೆ.ಸಿ.ಧರ್ಮರಾಜು, ಪಡಿತರ ವಿತರಣೆ ಚಿಲ್ಲರೆ ಶಾಖಾ ಮಾರಾಟಗಾರರು ಮನವಿ ಮಾಡಿದರೂ ಯಾವುದೇ ದಾಸ್ತಾನು ನೀಡಿರುವುದಿಲ್ಲ. ಹಾಗಾಗಿ ಅವರನ್ನೇ ಜವಾಬ್ದಾರರನ್ನಾಗಿಸಿ ಪ್ರಸ್ತುತ ಮಾರುಕಟ್ಟೆ ದರದ ರೀತಿ ವಸೂಲಾತಿಗೆ ಕ್ರಮ ವಹಿಸಬೇಕಾಗುತ್ತದೆ ಎಂದು ನೋಟಿಸಿನಲ್ಲಿ ಎಚ್ಚರಿಕೆ ನೀಡಲಾಗಿದೆ.

ಈ ಎಲ್ಲಾ ಕರ್ತವ್ಯಲೋಪ ಮತ್ತು ಅಕ್ರಮಗಳೊಂದಿಗೆ ಟಿಎಪಿಸಿಎಂಎಸ್ ಗೋದಾಮು ಹಿಂಭಾಗದಲ್ಲಿ ಜೆಸಿಬಿ ಮತ್ತು ಟ್ರಾಕ್ಟರ್‌ಗಳಿಂದ ಮಣ್ಣು ತುಂಬಿಸಿ ಗುಂಡಿಯನ್ನು ಸಮತಟ್ಟು ಮಾಡುವ ಖರ್ಚಿಗೆ ಪೂರ್ವಾನುಮತಿ ಪಡೆಯದೆ 29,500ರೂ ವೆಚ್ಚ ನಮೂದಿಸಿದ್ದು ಇದರೊಂದಿಗೆ ಕಳೆದ 6 ತಿಂಗಳಿನಿಂದ ಸಂಘದ ಮಳಿಗೆಗಳಲ್ಲಿ ಬಾಡಿಗೆ ವಸೂಲಿ ಮಾಡಲು ವಿಫಲರಾಗಿರುವುದರಿಂದ ಕ್ರಮ ವಹಿಸಬೇಕೆಂದು ನಿರ್ದೇಶನ ನೀಡಲಾಗಿದೆ.

ಪ್ರಮುಖವಾಗಿ ಟಿಎಪಿಸಿಎಂಎಸ್‌ಗೆ ಸೇರಿದ ತಾಲೂಕಿನ ಡಿ.ಕೆ.ಕೊಪ್ಪಲು ಗ್ರಾಮದಲ್ಲಿದ್ದ ದಾಸ್ತಾನು ಗೋದಾಮನ್ನು 2016ರಲ್ಲಿ ಸರ್ಕಾರದ ಆದೇಶದಂತೆ 1.21 ಲಕ್ಷಕ್ಕೆ ಹರಾಜು ಮಾಡಿದ್ದ ಸಂದರ್ಭದಲ್ಲಿ ಗುಮಾಸ್ತನಾಗಿದ್ದ ಕೆ.ಸಿ.ಧರ್ಮರಾಜು ತಾನೇ ಗೋದಾಮನ್ನು ಹರಾಜಿನಲ್ಲಿ ಪಡೆದುಕೊಂಡಿದ್ದು ಸಂಘಕ್ಕೆ ಹಣ ಜಮಾ ಮಾಡದೆ ನಕಲಿ ರಶೀದಿಯನ್ನು ಪಾಸು ಮಾಡಿ ಮುಂಗಡ ಎಂದು ತೋರಿಸಿ ಸಂಘಕ್ಕೆ ವಂಚನೆ ಮಾಡಿದ್ದಾರೆಂದು ನೋಟಿಸಿನಲ್ಲಿ ತಿಳಿಸಲಾಗಿದೆ

ಸಕಾಲಕ್ಕೆ ಸಾಲ ಮರುಪಾವತಿಸಿ, ಸಂಘ ಉಳಿಸಿ



ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಶಿವಬುದ್ದಿ ಉದ್ಘಾಟಿಸಿದರು.

ಮಲ್ಕುಂಡಿ, ಸೆ.4– ರೈತರಿಂದ ರೈತರಿಗಾಗಿ ಆರಂಭಗೊಂಡಿರುವ ಸಹಕಾರ ಸಂಘವು ರೈತರಿಗೆ ಉತ್ತಮವಾದ ಸಾಲ ಸೌಲಭ್ಯ ನೀಡುತ್ತಿದೆ ಎಂದು ಹಲ್ಲರೆ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಸಿ. ಶಿವಬುದ್ದಿ ಹೇಳಿದರು.

ಸಮೀಪದ ಹಲ್ಲರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2023–24 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾಲ ಪಡೆದ ರೈತರು ಸಕಾಲಕ್ಕೆ ಸಾಲ ಮರುಪಾವತಿ ಮಾಡಿದರೆ ಸಂಘವು ಲಾಭ ಕಾಣಲು ಸಾಧ್ಯ, ಇಲ್ಲವಾದರೆ ಸಂಘ ನಷ್ಟ ಕಾಣುತ್ತದೆ. ಈಗಾಗಲೇ ಸಂಘದಲ್ಲಿ 3,09,590 ನಿವ್ವಳ ಲಾಭ ದೊರೆತ್ತಿದೆ. ಹೆಚ್ಚಿನ ಲಾಭಾಂಶ ಕಾಣಲು ಎಲ್ಲರ ಸಹಕಾರ ಮುಖ್ಯವಾಗಿದೆ ಎಂದು ತಿಳಿಸಿದರು.

ಉಪಾಧ್ಯಕ್ಷ ಮಾದನಾಯಕ, ನಿರ್ದೇಶಕರುಗಳಾದ ಶಿವಣ್ಣ, ಹೆಚ್.ಎನ್. ಬಸವರಾಜ್, ಸುಬ್ರಹ್ಮಣ್ಯ, ಪುಟ್ಟದೇವಯ್ಯ, ಸಿದ್ದೇಗೌಡ, ಭಾಗ್ಯಮ್ಮ, ಸಿಇಓ ಹೆಚ್.ಡಿ. ಶಿವಕುಮಾರ್, ಗುಮಾಸ್ತ ಮಹದೇವ ಸ್ವಾಮಿ, ರಮೇಶ್ ಸೇರಿದಂತೆ ಪ್ರಮುಖರು ಹಾಜರಿದ್ದರು.

ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ



ಹರೀಶ್



ಮಂಜುನಾಥ್



ಮಂಜುಳಾ

ಹುಣಸೂರು, ಸೆ.4– ಸಾರ್ವಜನಿಕ ಶಿಕ್ಷಣ ಇಲಾಖೆ ಕೊಡಮಾಡುವ ಉತ್ತಮ ಶಿಕ್ಷಕ ಪ್ರಶಸ್ತಿಗೆ ತಾಲೂಕಿನ ಇಬ್ಬರು ಶಿಕ್ಷಕರು, ಓರ್ವ ಶಿಕ್ಷಕಿ ಆಯ್ಕೆಯಾಗಿದ್ದಾರೆ.

ಸರ್ಕಾರಿ ಪ್ರೌಢಶಾಲಾ ವಿಭಾಗದಿಂದ ತಾಲೂಕಿನ ಬನ್ನಿಕುಪ್ಪೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಸಹ ಶಿಕ್ಷಕ ಹರೀಶ್.ಹೆಚ್.ಪಿ., ಹಿರಿಯ ಪ್ರಾಥಮಿಕ ಶಾಲೆಗಳ ವಿಭಾಗದಿಂದ ತಾಲೂಕಿನ ಕಾಮಗೌಡನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಂಜುನಾಥ್.ಬಿ.ಟಿ ಆಯ್ಕೆಯಾದರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ವಿಭಾಗದಿಂದ ತಾಲೂಕಿನ ರಾಯನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೆ.ಎಸ್.ಮಂಜುಳಾ ಆಯ್ಕೆಯಾಗಿದ್ದಾರೆ ಎಂದು ಆಯ್ಕೆ ಸಮಿತಿ ಪ್ರಕಟಣೆ ತಿಳಿಸಿದೆ.

ಕರ್ನಾಟಕ ಪಬ್ಲಿಕ್ ಶಾಲೆಯ ನೂತನ ಕಟ್ಟಡ ಉದ್ಘಾಟನೆ

ಮೂಲಸೌಕರ್ಯ ಕಲ್ಪಿಸಿ ಮಾದರಿ ಶಾಲೆ ಮಾಡುವೆ: ಶಾಸಕ ದರ್ಶನ್



ನಂಜನಗೂಡು ತಾಲೂಕಿನ ಹೆಮ್ಮರಗಾಲ ಗ್ರಾಮದಲ್ಲಿ 2 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಶಾಲಾ ಕಟ್ಟಡವನ್ನು ಶಾಸಕ ದರ್ಶನ್‌ಧ್ರುವನಾರಾಯಣ್ ಉದ್ಘಾಟಿಸಿದರು.

ನಂಜನಗೂಡು, ಸೆ.4– ತಾಲೂಕಿನ ಹೆಮ್ಮರಗಾಲ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಕಟ್ಟಡದ ಸಮಸ್ಯೆಯನ್ನು ನೀಗಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ಸಲುವಾಗಿ 2 ಕೋಟಿ ವೆಚ್ಚದಲ್ಲಿ ನೂತನ ಸುಸಜ್ಜಿತ ಶಾಲಾ ಕಟ್ಟಡವನ್ನು ನಿರ್ಮಿಸಲಾಗಿದ್ದು, ಸುತ್ತಮುತ್ತಲ ಗ್ರಾಮಸ್ಥರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ತಾಲೂಕಿನ ಹೆಮ್ಮರಗಾಲ ಗ್ರಾಮದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಕರ್ನಾಟಕ ಪಬ್ಲಿಕ್ ಶಾಲೆಯ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದರು.

ಕೇಂದ್ರೀಯ ವಿದ್ಯಾಲಯದ ಮಾದರಿಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಸಲುವಾಗಿ ರಾಜ್ಯ ಸರ್ಕಾರ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಪ್ರಾರಂಭಿಸಿದೆ, ಈ ಭಾಗದಲ್ಲಿ ಒಂದೇ ಪಬ್ಲಿಕ್ ಶಾಲೆ ಇರುವುದರಿಂದ ಪ್ರವೇಶ ಹೆಚ್ಚಾಗಿ ಸುಮಾರು 1200 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಿನ ಪೋಷಕರು ಪ್ರವೇಶಾವಕಾಶವನ್ನು ಕಲ್ಪಿಸುವಂತೆ ಒತ್ತಡ ಹೇರುತ್ತಿದ್ದಾರೆ. ಮುಂದಿನ ವರ್ಷಗಳಲ್ಲಿ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಶಾಲೆಯಲ್ಲಿ ಹೆಚ್ಚಿನ ಪ್ರವೇಶ ಮಾಡಿಕೊಳ್ಳಲು ಅನುಮತಿ ದೊರಕಿಸಿಕೊಡಲಾಗುವುದು ಎಂದರು.


ಶಾಲೆಯಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣ, ಶುದ್ಧ ಕುಡಿಯುವ ನೀರಿನ ಘಟಕ, ಹೆಚ್ಚುವರಿ ಶೌಚಾಲಯ ನಿರ್ಮಾಣ ಮತ್ತು ಹೆಚ್ಚಿನ ಕೊಠಡಿ ನಿರ್ಮಾಣ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸುವಂತೆ ಬೇಡಿಕೆ ಕೇಳಿ ಬಂದಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಶಾಲೆಗೆ ಮೂಲಸೌಕರ್ಯ ಒದಗಿಸುವ ಮೂಲಕ ಮಾದರಿ ಶಾಲೆಯನ್ನಾಗಿ ನಿರ್ಮಾಣ ಮಾಡಲಾಗು ವುದು, ಜೊತೆಗೆ ಅತೀ ಶೀಘ್ರದಲ್ಲೇ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಪ್ರಾರಂಭಿಸಲು ಕ್ರಮವಹಿಸಲಾಗುವುದು ಹಾಗೂ ಅತಿ ಶೀಘ್ರದಲ್ಲೇ ಕಾರ್ಖಾನೆಗಳ ಸಿಎಸ್‌ಆರ್ ಅನುದಾನದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ತೆರೆಯಲು ಕ್ರಮವಹಿಸಲಾಗುವುದು ಎಂದರು.

ಈ ಶಾಲೆಯಲ್ಲಿ ವಿಜ್ಞಾನ ವಿಭಾಗದ ಲ್ಯಾಬ್‌ಗಳಿಗೆ ಕೊಠಡಿಯ ಸಮಸ್ಯೆ ಎದುರಾಗಿತ್ತು. ಈಗ 2 ಕೋಟಿ ಅನುದಾನದಲ್ಲಿ ನೆಲ ಮಹಡಿಯಲ್ಲಿ 3 ತರಗತಿ ಕೊಠಡಿಗಳು, 1 ಕಲೆ ಮತ್ತು ಸಾಂಸ್ಕೃತಿಕ ಕೊಠಡಿ, ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ, ಮೊದಲನೆ ಮಹಡಿಯಲ್ಲಿ ಗ್ರಂಥಾಲಯ ಹಾಲ್, ಕಂಪ್ಯೂಟರ್ ಕೊಠಡಿ, ವಿಜ್ಞಾನ ಪ್ರಯೋಗಾಲಯ, ನಿರ್ಮಿಸಲಾಗಿದೆ. ಜೊತೆಗೆ ಪ್ರಾಥಮಿಕ ಶಾಲಾ ವಿಭಾಗಕ್ಕೆ 4 ತರಗತಿ ಕೊಠಡಿಗಳು, ಶೌಚಾಲಯ ನಿರ್ಮಾಣ ಮಾಡಲಾಗಿದೆ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ಉತ್ತಮವಾಗಿ ಓದಿ ಭವಿಷ್ಯ ರೂಪಿಸಿಕೊಂಡು ತಂದೆ ತಾಯಿಗಳ ಕನಸು ನನಸು ಮಾಡಿ ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ತಾಲೂಕಿನ ಹಂಪಾಪುರ ಗ್ರಾಮದಲ್ಲಿ 15 ಲಕ್ಷ ವೆಚ್ಚದಲ್ಲಿ ನೂತನ ಶಾಲಾ ಕೊಠಡಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಮುಖಂಡರಾದ ದೊರೆಸ್ವಾಮಿನಾಯಕ, ಶಿವಪ್ಪದೇವರು, ಚಿನ್ನದಗುಡಿಹುಂಡಿ ಶಿವಸ್ವಾಮಿ, ವೀರೇಂದ್ರ, ಸ್ವಾಮಿ, ಶೀಲಾನಾರಾಯಣ್, ಹೆಮ್ಮರಗಾಲ ಗ್ರಾಪಂ ಅಧ್ಯಕ್ಷೆ ಭಾಗ್ಯ ಉಮೇಶ್, ಉಪಾಧ್ಯಕ್ಷೆ ಜಯಮ್ಮ, ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕ ಎಂ.ಮರಿಸ್ವಾಮಿ, ಬಿಇಓ ಮಹೇಶ್, ಪ್ರಾಥಮಿಕ ಶಾಲಾ ಸಂಘದ ಅಧ್ಯಕ್ಷ ಧರ್ಮ ರತ್ನಾಕರ, ಗುತ್ತಿಗೆದಾರರಾದ ಜೈಶಂಕರ್, ಲೋಕೋಪಯೋಗಿ ಇಲಾಖೆ ಎಇಇ ಸತ್ಯನಾರಾಯಣ್, ಎಇ ಬಸವರಾಜು, ಮಾರ್ಕಂಡೇಯ ಸೇರಿದಂತೆ ಶಾಲಾ ಮುಖ್ಯೋಪಾಧ್ಯಾಯರು ಮತ್ತು ವಿದ್ಯಾರ್ಥಿಗಳು, ಗ್ರಾಮಸ್ಥರು ಇದ್ದರು.

ರವಿಕುಮಾರ್ ನಿಧನ



ಹುಣಸೂರು, ಸೆ.4– ಫೋಸ್ಟ್ ರವಿ ಎಂದೇ ಚಿರಪರಿಚಿತರಾಗಿದ್ದ ರವಿಕುಮಾರ್ (55) ಬುಧವಾರ ಬೆಳಗ್ಗೆ ನಿಧನರಾದರು.

ಹನಗೋಡು ಹೋಬಳಿಯ ಹಿಂಡುಗುಡ್ಲು ಗ್ರಾಮದ ದಿ.ಪಟೇಲ್ ರಾಮೇಗೌರ ಪುತ್ರರಾದ ಇವರು ಹುಣಸೂರು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಸಹೋದರರಾಗಿದ್ದಾರೆ. ಮೃತರು ಪತ್ನಿ, ಪುತ್ರ, ತಾಯಿ ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿಸಲಾಗುವುದು ಕುಟುಂಬದವರು ತಿಳಿಸಿದ್ದಾರೆ.

ತಿಮ್ಮನಾಯಕ



ಹೆಚ್.ಡಿ.ಕೋಟೆ, ಸೆ.4– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ತಿಮ್ಮನಾಯಕ (74) ಬುಧವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಗ್ರಾಮದ ರುದ್ರಭೂಮಿಯಲ್ಲಿ ಗುರುವಾರ ನೆರವೇರಿಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

ಮೈಸೂರು ಮಿತ್ರ

ಅರಮನೆ ಆವರಣದಲ್ಲಿ ಆಸೀನರಾದವರಿಗೆ ಜಂಬೂಸವಾರಿಯ ವಿಶೇಷ ದರ್ಶನ ವ್ಯವಸ್ಥೆ





ಮೈಸೂರು ಅರಮನೆ ಆವರಣದಲ್ಲಿ ಜಂಬೂಸವಾರಿ ಮಾರ್ಗದಲ್ಲಿ ಮಾರ್ಪಾಡು ಮಾಡಲು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳೊಂದಿಗೆ ಚರ್ಚಿಸಿ, ಸ್ಥಳ ಪರಿಶೀಲಿಸಿದರು. (ಬಲಚಿತ್ರ) ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ಆನೆಗಳ ಮಾವುತ, ಕಾವಾಡಿ ಹಾಗೂ ಸಹಾಯಕರೊಂದಿಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕೆಲಕಾಲ ವಾಲಿಬಾಲ್ ಆಡಿ ಗಮನ ಸೆಳೆದರು.

ಮೈಸೂರು, ಸೆ.4(ಎಂಟಿವೈ)– ಜಂಬೂಸವಾರಿ ವೀಕ್ಷಣೆಗಾಗಿ ವಿವಿಧ ಪಾಸ್, ಟಿಕೆಟ್ ಪಡೆದು ಅರಮನೆಯ ಆವರಣದಲ್ಲಿ ಆಸೀನರಾಗುವ ಅಪಾರ ಸಂಖ್ಯೆಯ ಜನರಿಗೆ ಈ ಬಾರಿ ಗಜಪಡೆಯ ಸಾಲಾನೆಯೊಂದಿಗೆ ಅಂಬಾರಿ ಹೊತ್ತು ಸಾಗುವ ಅಭಿಮನ್ಯುವಿನ ವಯ್ಯಾರವನ್ನು ಕಣ್ತುಂಬಿಕೊಳ್ಳಲು ಅರಮನೆ ಆವರಣದಲ್ಲಿ ಜಂಬೂಸವಾರಿ ಮಾರ್ಗವನ್ನು ಸಣ್ಣ ಪ್ರಮಾಣದಲ್ಲಿ ಮಾರ್ಪಡಿಸಿ ವಿಶೇಷ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಲಾಗಿದೆ.

ಪ್ರತಿ ವರ್ಷವೂ ಅರಮನೆ ಆವರಣದಲ್ಲಿ ಸೇರುವ ಸಾವಿರಾರು ಜನರಲ್ಲಿ ಮುಂದೆ ಕುಳಿತಿರುವವರು ಜಂಬೂಸವಾರಿ ಹಾಗೂ ಗಜಪಡೆ ಕಾಣಿಸದೆ ನಿರಾಶರಾಗುತ್ತಿದ್ದರು. ಅಲ್ಲದೆ, ಅಂಬಾರಿ ಬರುತ್ತಿದ್ದಂತೆ ಮುನ್ನುಗ್ಗಿ ಬರುತ್ತಿದ್ದರಿಂದ ಪೆಂಡಾಲ್‌ನಲ್ಲಿ ಕುಳಿತಿದ್ದರು ನೂಕುನುಗ್ಗಲಿಗೆ ಒಳಗಾಗುತ್ತಿದ್ದರು. ಈ ಹಿನ್ನೆಲೆಯಲ್ಲಿ ಅರಮನೆಯ ವಿವಿಧ ಬ್ಲಾಕ್‌ಗಳಲ್ಲಿ ಕುಳಿತಿರುವವರಿಗೆ ಆಗುತ್ತಿದ್ದ ನಿರಾಸೆಯನ್ನು ತಪ್ಪಿಸಲು ಈ ಬಾರಿ ಸಣ್ಣ ಮಾರ್ಪಾಡು ಮಾಡಿ, ಅನೇಕರನ್ನು ತೃಪ್ತಿಪಡಿಸಲು ಜಿಲ್ಲಾಡಳಿತ ಉದ್ದೇಶಿಸಿದೆ.

ಪ್ರತಿ ವರ್ಷ ಅಂಬಾರಿ ಕಟ್ಟಿದ ನಂತರ ಕುಮ್ಕಿ ಆನೆಗಳೊಂದಿಗೆ ವಿವಿಧ ಪೊಲೀಸ್ ತುಕಡಿಗಳು, ಗಣ್ಯರು ಪುಷ್ಪಾರ್ಚನೆ ಮಾಡುವ ಸ್ಥಳಕ್ಕೆ ಬಂದು ನಿಲ್ಲುತ್ತಿದ್ದವು. ಇದರಿಂದ ವರಹಾಸ್ವಾಮಿ, ಗಾಯತ್ರಿ ದೇವಿ ಹಾಗೂ ತ್ರಿನೇಶ್ವರ ದೇವಾಲಯ ಸಮೀಪ ಪಾಸ್ ಪಡೆದು ಕುಳಿತಿದ್ದವರಿಗೆ ಅಂಬಾರಿ ಕಾಣಿಸುತ್ತಿರಲಿಲ್ಲ. ಅಲ್ಲದೆ, ಸಾಲಾನೆಯನ್ನೂ ನೋಡುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ಇದರಿಂದಾಗಿ ಈ ಬಾರಿ ಅಂಬಾರಿ ಹೊತ್ತ ಆನೆ ಮಾತ್ರವಲ್ಲದೆ, ಅಲಂಕೃತ ಸಾಲಾನೆಗಳು ಅರಮನೆಯಲ್ಲಿ ಒಂದು ಸುತ್ತು ಹೆಜ್ಜೆ ಹಾಕಿ ಎಲ್ಲರಿಗೂ ದರ್ಶನ ನೀಡಲಿವೆ.

ಅಂಬಾರಿ ಕಟ್ಟಿದ ಬಳಿ ಮೆರವಣಿಗೆ ಸಾಗುವವರೆಗೂ ಆನೆಯನ್ನು ಅಲ್ಲಿಯೇ ನಿಲ್ಲಿಸಿರುವುದಕ್ಕೆ ಬದಲಾಗಿ, ಅಂಬಾರಿ ಕಟ್ಟಿದ ನಂತರ ತ್ರಿನೇಶ್ವರ ಸ್ವಾಮಿ ದೇವಾಲಯ, ಜಯಮಾರ್ತಾಂಡ ದ್ವಾರದ ಮುಂಭಾಗ, ಗಾಯತ್ರಿದೇವಿ ದೇವಾಲಯದ ಮುಂಭಾಗದ ಮೂಲಕ ವರಹಾಸ್ವಾಮಿ ದೇವಾಲಯದ ಪಕ್ಕದ ರಸ್ತೆಯಲ್ಲಿ ಸಾಗಿ ಗಣ್ಯರು ಪುಷ್ಪಾರ್ಚನೆ ಮಾಡುವ ಸ್ಥಳಕ್ಕೆ ಆಗಮಿಸಲಿವೆ. ಇದರಿಂದ ಅರಮನೆ ಆವರಣದಲ್ಲಿ ವಿವಿಧ ಬ್ಲಾಕ್‌ಗಳಲ್ಲಿ ಕುಳಿತುಕೊಂಡು ದಸರಾ ವೀಕ್ಷಣೆ ಮಾಡುವ ಸಹಸ್ರಾರು ಜನರಿಗೆ ಚಿನ್ನದ ಅಂಬಾರಿಯಲ್ಲಿ ವಿರಾಜಮಾನರಾಗಿ ಕಂಗೊಳಿಸುವ ನಾಡದೇವಿ ದರ್ಶನ ಪಡೆಯಲು ಸಾಧ್ಯವಾಗಲಿದೆ.

ಪರಿಶೀಲನೆ: ದಸರಾ ಹಿನ್ನೆಲೆಯಲ್ಲಿ ಬುಧವಾರ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಸೇರಿದಂತೆ ವಿವಿಧ ಅಧಿಕಾರಿಗಳು ಅರಮನೆ ಆವರಣದಲ್ಲಿ ಜನರಿಗೆ ನಿರಾಸೆಯಾಗದಂತೆ ಕೈಗೊಳ್ಳಬಹುದಾದ ಕ್ರಮ ಕುರಿತಂತೆ ಚರ್ಚಿಸಿ ಸ್ಥಳ ಪರಿಶೀಲಿಸಿದರು. ಕೆಲ ಸಮಯದ ನಂತರ ಅರಮನೆಗೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಅಧಿಕಾರಿಗಳೊಂದಿಗೆ ಚರ್ಚಿಸಿ, ಅರಮನೆ ಆವರಣದಲ್ಲಿ ಅಂಬಾರಿ ಹೊತ್ತ ಆನೆ ಹಾಗೂ ಸಾಲಾನೆಗಳು ಸಾಗಬಹುದಾದ ಮಾರ್ಗದ ಬಗ್ಗೆ ಮಾಹಿತಿ ಪಡೆದು ಸ್ಥಳ ಪರಿಶೀಲಿಸಿದರು. ಬಳಿಕ ಅಧಿಕಾರಿಗಳಿಗೆ ಸೂಚನೆ ನೀಡಿ, ದಸರಾ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ನಿರಾಸೆಯಾಗದಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಮಾವುತರ ಮಕ್ಕಳೊಂದಿಗೆ ವಾಲಿಬಾಲ್: ದಸರಾ ಗಜಪಡೆಯ ಮಾವುತ, ಕಾವಾಡಿ ಹಾಗೂ ಮಕ್ಕಳೊಂದಿಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅರಮನೆ ಆವರಣದಲ್ಲಿ ಕೆಲಕಾಲ ವಾಲಿಬಾಲ್ ಆಡುವ ಮೂಲಕ ಗಮನ ಸೆಳೆದರು. ಅಲ್ಲದೆ, ಕೆಲಕಾಲ ಮಾವುತ, ಕಾವಾಡಿಗಳೊಂದಿಗೆ ಕುಶಲೋಪರಿ ವಿಚಾರಿಸಿದರು.

ವಾಹನಗಳ ಮೇಲೆ ಸ್ಟಿಕ್ಕರ್, ಪ್ರಚೋದನಕಾರಿ ಬರಹ ಹಾಕಿದರೆ ಹುಷಾರ್



ವಾಹನ ಸವಾರರಿಗೆ ಆರ್‌ಟಿಓ ಎಚ್ಚರಿಕೆ

ಬೆಂಗಳೂರು, ಸೆ.4– ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ಜೈಲು ಸೇರಿದ್ದು, ಅಭಿಮಾನಿಗಳು ನಟನ ಬಗ್ಗೆ ಹುಚ್ಚು ಅಭಿಮಾನ ಮೆರೆಯುತ್ತಿದ್ದಾರೆ. ಸಾಕಷ್ಟು ಮಂದಿ ತಮ್ಮ ತಮ್ಮ ವಾಹನಗಳ ಮೇಲೆ ದರ್ಶನ್ ಕೈದಿ ನಂಬರ್ ಸೇರಿದಂತೆ ತರಹೇವಾರಿ ಸ್ಟಿಕ್ಕರ್‌ಗಳನ್ನು ಅಂಟಿಸಿ, ಸಂದೇಶಗಳನ್ನು ಬರೆದು ಅಭಿಮಾನ ಮೆರೆಯುತ್ತಿದ್ದಾರೆ. ಅಂತಹ ಅಭಿಮಾನಿಗಳಿಗೆ ಆರ್‌ಟಿಓ ಎಚ್ಚರಿಕೆ ಕೊಟ್ಟಿದೆ.

ಹೆಚ್ಚುವರಿ ಸಾರಿಗೆ ಆಯುಕ್ತ ಸಿ. ಮಲ್ಲಿಕಾರ್ಜುನ್ ಅವರು ಆದೇಶ ಹೊರಡಿಸಿದ್ದು, ಇತ್ತೀಚಿನ ದಿನಗಳಲ್ಲಿ ವಾಹನಗಳ ಮೇಲೆ ಬೇರೆ ಬೇರೆ ರೀತಿಯ ಬರಹಗಳನ್ನು ಅಳವಡಿಸಿಕೊಳ್ಳುವುದು ಹೆಚ್ಚಾಗಿ ಕಂಡುಬರುತ್ತಿದೆ. ಈ ಹಿಂದೆ ಈ ಮಟ್ಟಿಗೆ ಬರಹಗಳನ್ನು ವಾಹನಗಳ ಮೇಲೆ ಹಾಕಿರಲಿಲ್ಲ. ಈ ಬಗ್ಗೆ ಆರ್‌ಟಿಓ ಇಲಾಖೆ ಹಾಗೂ ಪೊಲೀಸ್ ಇಲಾಖೆ ಗಮನಕ್ಕೆ ಬಂದಿದ್ದು, ಅನವಶ್ಯಕ ಬರಹಗಳು ಕಂಡುಬಂದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ನಂಬರ್ ಪ್ಲೇಟ್ ಯಾವ ರೀತಿ ಇರಬೇಕು ಎಂಬ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನ ನೀಡಿದ್ದು, ಅದರ ಅನ್ವಯ ನಾವು ಪ್ರಕರಣಗಳನ್ನು ದಾಖಲು ಮಾಡುತ್ತಾ ಬಂದಿದ್ದೇವೆ. ಮನೆ ಹೆಸರು, ಮನೆತನದ ಹೆಸರು, ಇಷ್ಟ ದೇವರ ಹೆಸರು ಎಲ್ಲವೂ ಕಾನೂನು ಬಾಹಿರವಾಗುತ್ತೆ. ಈ ಬಗ್ಗೆ ಜನರಿಗೆ ಅರಿವು ಮೂಡಿಸುವ ಹಾಗೂ ಪ್ರಚಾರ ಮಾಡುವ ಕೆಲಸ ಆರ್‌ಟಿಓ ಇಲಾಖೆ ಮಾಡಿದೆ. ಜೊತೆಗೆ 3 ವರ್ಷದಲ್ಲಿ ಹಲವು ಪ್ರಕರಣ ದಾಖಲು ಮಾಡಿದ್ದೇವೆ. ವಾಹನಗಳ ಮೇಲೆ ಬೇರೆ ಬೇರೆ ಬರಹಗಳನ್ನು ಬರೆಯುತ್ತಿದ್ದಾರೆ. ಯಾರೂ ಸಹ ಅನವಶ್ಯಕ ಬರಹಗಳನ್ನು ವಾಹನಗಳ ಮೇಲೆ ಹಾಕಬಾರದು. ನೆಚ್ಚಿನ ನಟರ ಫೋಟೋಗಳನ್ನು ವಾಹನಗಳ ಮೇಲೆ ಹಾಕುವುದು ಕಾನೂನುಬಾಹಿರ. ವಾಹನಗಳ ಮೇಲೆ ಪ್ರಚೋದನಕಾರಿ ಬರಹ ಮಾತ್ರವಲ್ಲ ಯಾವುದೇ ಸ್ಟಿಕ್ಕರ್‌ಗಳಿಗೂ ಅವಕಾಶವಿಲ್ಲ. ಇಲ್ಲಿವರೆಗೆ ನಂಬರ್ ಪ್ಲೇಟ್ ಮೇಲೆ ಗಮನಹರಿಸುತ್ತಿದ್ದೆವು. ಇನ್ನು ಮುಂದೆ ಅನಧಿಕೃತ ಬರಹ ಮೇಲೂ ಗಮನ ಹರಿಸಿ, ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಮೊದಲ ಹಾಗೂ ಎರಡನೇ ಬಾರಿ ನಿಯಮ ಉಲ್ಲಂಘಿಸುವವರಿಗೆ ಎಚ್ಚರಿಕೆ ನೀಡುತ್ತೇವೆ. ಮೂರನೇ ಬಾರಿ ಅದೇ ತಪ್ಪು ಮಾಡಿದರೆ, ಪರವಾನಗಿ ರದ್ದು ಮಾಡುತ್ತೇವೆಂದು ಮಲ್ಲಿಕಾರ್ಜುನ್ ಅವರು ಎಚ್ಚರಿಕೆ ನೀಡಿದ್ದಾರೆ.

ಮಿಷನ್ ಆಸ್ಪತ್ರೆ ನೌಕರರ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಪ್ರತಿಭಟನಾ ಮೆರವಣಿಗೆ



ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮೈಸೂರಿನ ಮಿಷನ್ ಆಸ್ಪತ್ರೆಯ ಸಿಬ್ಬಂದಿಗಳು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರು, ಸೆ.4(ಎಂಟಿವೈ)– ಮೈಸೂರಿನ ಸಿಎಸ್‌ಐ ಹೋಲ್ಡ್ಸ್‌ವರ್ತ್ ಮೆಮೋರಿಯಲ್ (ಮಿಷನ್) ಆಸ್ಪತ್ರೆ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ಆಸ್ಪತ್ರೆಯ ನೌಕರರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಮೈಸೂರಿನ ಸಿದ್ದಾರ್ಥ ನಗರದ ಹಳೆ ಹಾಲಿನ ಡೈರಿ ಮುಂಭಾಗದಿಂದ ನೂತನ ಜಿಲ್ಲಾಧಿಕಾರಿ ಕಚೇರಿವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿದ ಆಸ್ಪತ್ರೆಯ ಸಿಬ್ಬಂದಿಗಳು, ಕೆಲಕಾಲ ಧರಣಿ ನಡೆಸಿ ಮಿಷನ್ ಆಸ್ಪತ್ರೆಯ ಆಡಳಿತ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

118 ವರ್ಷಗಳ ಇತಿಹಾಸ ಹೊಂದಿರುವ ಮಿಷನ್ ಆಸ್ಪತ್ರೆಯಲ್ಲಿ 300ಕ್ಕೂ ಹೆಚ್ಚು ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ. 46 ವರ್ಷಗಳಿಂದ ಎಐಟಿಯುಸಿ ನೇತೃತ್ವದಲ್ಲಿ ಸಂಘಟಿತರಾಗಿ ಕಾರ್ಮಿಕರ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಂಡು ಬಂದಿರುತ್ತೇವೆ. ಆದರೆ ಕಳೆದ 7 ವರ್ಷಗಳ ಹಿಂದೆ ನೇಮಕವಾಗಿರುವ ಆಡಳಿತಾಧಿಕಾರಿ ವಿನ್ಸಂಟ್ ಪಾಲ್ ಆಸ್ಪತ್ರೆಯನ್ನು ದುಸ್ಥಿತಿಗೆ ತಳ್ಳಿದ್ದಾರೆ. ಅವರ ದುರಾಡಳಿತದಿಂದ ಆಸ್ಪತ್ರೆ ಸೊರಗುತ್ತಾ ಬಂದಿದೆ. ಇದರಿಂದ ಕಾರ್ಮಿಕರಿಗೆ ನೀಡಬೇಕಾದ ಸೌಲಭ್ಯಗಳನ್ನು ನೀಡದೆ ವಂಚಿಸುತ್ತಿರುವುದಲ್ಲದೆ, ಕಾರ್ಮಿಕ ಸಂಘ ನೀಡಿರುವ ವೇತನ ಪರಿಷ್ಕರಣೆ ಸೇರಿದಂತೆ ಯಾವುದೇ ಸೌಲಭ್ಯ ನೀಡಿಲ್ಲ. ನಮ್ಮ ಬೇಡಿಕೆ ಪತ್ರಕ್ಕೆ ಸ್ಪಂದಿಸದೆ ನಿರ್ಲಕ್ಷಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕಾರ್ಮಿಕರಿಗೆ ಏಪ್ರಿಲ್ ತಿಂಗಳಿಂದ ವೇತನ ನೀಡಿಲ್ಲ. ಸಮಸ್ಯೆ ಪರಿಹಾರಕ್ಕಾಗಿ ಕಾನೂನಿನ್ವಯ ಮುಷ್ಕರದ ನೋಟೀಸ್ ನೀಡಿ ಜು.15ರಿಂದ ಮುಷ್ಕರ ನಡೆಸಲಾಗುತ್ತಿದೆ. ಆದರೆ ಆಡಳಿತ ಮಂಡಳಿ ಮುಷ್ಕರ ನಿರತ ಕಾರ್ಮಿಕರೊಂದಿಗೆ ಮಾತುಕತೆ ನಡೆಸಿ, ಸಮಸ್ಯೆ ಬಗೆಹರಿಸುವ ಬದಲು ಸುಳ್ಳು ಆರೋಪ ಮಾಡಿ ಹಾದಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಅಲ್ಲದೆ ಸಹಾಯಕ ಕಾರ್ಮಿಕ ಆಯುಕ್ತರು ಕರೆದಿರುವ ಸಭೆಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿಯುತ ಅಧಿಕಾರಿಗಳು ಭಾಗವಹಿಸುತ್ತಿಲ್ಲ.

ಬಾಕಿ ಉಳಿಸಿಕೊಂಡಿರುವ 4 ತಿಂಗಳ ವೇತನವನ್ನು ಕೂಡಲೇ ಪಾವತಿಸಬೇಕು. ವೇತನ ಪರಿಷ್ಕರಣೆಯನ್ನು ನಿರ್ದಿಷ್ಟ ಅವಧಿಯೊಳಗೆ ಮಾತುಕತೆಯ ಮೂಲಕ ಬಗೆಹರಿಸಬೇಕು. ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನವನ್ನು ಕೂಡಲೇ ಜಾರಿಗೊಳಿಸಬೇಕು. 2017ರಿಂದ ಕೇಂದ್ರ ಸರ್ಕಾರದ ತಿದ್ದುಪಡಿ ಕಾಯ್ದೆ ಅನ್ವಯ ನಿವೃತ್ತಿ ವಯಸ್ಸು 58 ರಿಂದ 61ಕ್ಕೆ ಏರಿಸಿ ಹೊರಡಿಸಿರುವ ಆದೇಶ ಜಾರಿ ಮಾಡಬೇಕು. ಈಗಾಗಲೇ ನಿವೃತ್ತರಾದ ಕಾರ್ಮಿಕರಿಗೆ ಗ್ರಾಚ್ಯುಟಿ ಪಾವತಿಸಬೇಕು. ಹಿಂದಿನ ಒಪ್ಪಂದದ ಉಲ್ಲಂಘನೆಗಳನ್ನು ಸರಿಪಡಿಸಿ ಕಾರ್ಮಿಕರಿಗೆ ನೀಡಬೇಕಾದ ಎಲ್ಲಾ ಸವಲತ್ತು ನೀಡಬೇಕು. ಜಿಲ್ಲಾಧಿಕಾರಿ ಮಧ್ಯ ಪ್ರವೇಶಿಸಿ ನಮ್ಮ ಸಮಸ್ಯೆ ಬಗೆಹರಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಾರ್ಮಿಕರ ಸಂಘದ ಉಪಾಧ್ಯಕ್ಷರಾದ ದಯಾಪ್ರಕಾಶ್, ಶಂಕರ್.ಸಿ, ಪ್ರಧಾನ ಕಾರ್ಯದರ್ಶಿ ವಿಲ್ಸನ್ ಪ್ರಭಾಕರ್, ಕಾರ್ಯದರ್ಶಿ ಪಾಲ್ ಡೇವಿಡ್, ಸಹ ಕಾರ್ಯದರ್ಶಿ ಆರ್.ಸಿದ್ದರಾಜು, ಖಜಾಂಚಿ ಜೋಸೆಫ್ ಮಾನ್ಯುವಲ್.ಆರ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಪರಿಸರ ಸ್ನೇಹಿ ಗಣಪತಿ ವಿಗ್ರಹ ಮಾಡಿ ಮನೆಗೆ ಒಯ್ದರು...



ಪರಿಸರ ಸ್ನೇಹಿ ಗಣಪನ ವಿಗ್ರಹ ತಯಾರಿಕೆಯಲ್ಲಿ ತಲ್ಲೀನರಾಗಿರುವ ವಿದ್ಯಾರ್ಥಿಗಳು, ಪೋಷಕರು

ಮೈಸೂರು, ಸೆ.4(ಎಂಕೆ)– ವಿಘ್ನ ನಿವಾರಕನ ಮೂರ್ತಿ ರೂಪಿಸುವಲ್ಲಿ ಮಗ್ನರಾದ ಪುಟಾಣಿಗಳು, ವಿದ್ಯಾರ್ಥಿಗಳು ಹಾಗೂ ಹಿರಿಯ ನಾಗರಿಕರು ಚಂದದ ಪರಿಸರ ಸ್ನೇಹಿ ಗಣಪನ ವಿಗ್ರಹ ನಿರ್ಮಿಸಿ ಸಂಭ್ರಮಿಸಿದರು...

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಮೈಸೂರು ಧಾರ್ಮಿಕ ಪ್ರತಿಷ್ಠಾನದ ವತಿಯಿಂದ ಬುಧವಾರ ಆಯೋಜಿಸಿದ್ದ ಪರಿಸರ ಸ್ನೇಹಿ ಮಣ್ಣಿನ ಗಣಪತಿ ವಿಗ್ರಹ ತಯಾರಿಕಾ ಕಾರ್ಯಾಗಾರದಲ್ಲಿ ಒಂದು ಗಂಟೆ ಅವಧಿಯಲ್ಲಿ ಅಂದದ ಗಣಪತಿ ಮೂರ್ತಿ ನಿರ್ಮಿಸಿ, ಭಕ್ತಿ ಮೆರೆಯಲಾಯಿತು. ಪ್ರತಿಷ್ಠಾನದಿಂದ ನೀಡಿದ್ದ ಮಣ್ಣಿನ ಉಂಡೆಯನ್ನು ಅಡಿಕೆ ಪ್ಲೇಟ್‌ನಲ್ಲಿಟ್ಟುಕೊಂಡು ತಟ್ಟಿ ಆಕಾರ ನೀಡಿದ ವಿವಿಧ ಶಾಲೆಯ ನೂರಾರು ವಿದ್ಯಾರ್ಥಿಗಳು, ಆಕರ್ಷಕ ಗಣೇಶನ ಮೂರ್ತಿ ರೂಪಿಸಿ ತಮ್ಮ ತಮ್ಮ ಮನೆಗೆ ಕೊಂಡೊಯ್ದರು. ಅಲ್ಲದೆ ಗಣಪನ ವಿಗ್ರಹದೊಳಗೆ ಕಾಡು ಜಾತಿಯ ಮರಗಳ ಬೀಜಗಳನ್ನು ಸೇರಿಸುವ ಮೂಲಕ ಪರಿಸರ ಕಾಳಜಿ ತೋರಿದರೆ, ಕಲಾವಿದರಾದ ಭರತ್‌ಕುಮಾರ್, ಧೀರಜ್ ಹಾಗೂ ಅನೀಲ್ ಬೋಗಶೆಟ್ಟಿ ಗಣೇಶನ ವಿಗ್ರಹ ತಯಾರಿಕೆಗೆ ಮಾರ್ಗದರ್ಶನ ನೀಡಿದರು. ಮೈಸೂರು ಧಾರ್ಮಿಕ ಪ್ರತಿಷ್ಠಾನದ ದರ್ಶನ್ ಮಾತನಾಡಿ, ನೂರಾರು ವಿದ್ಯಾರ್ಥಿಗಳು ಹಾಗೂ ಮಕ್ಕಳ ಪೋಷಕರು ಪರಿಸರ ಸ್ನೇಹಿ ಗಣಪತಿ ಮೂರ್ತಿ ತಯಾರಿಕೆ ಕಾರ್ಯಾಗಾರದಲ್ಲಿ ಭಾಗವಹಿಸಿದ್ದಾರೆ. ಕಾರ್ಯಾಗಾರದಲ್ಲಿ ನಿರ್ಮಿಸಿದ ವಿಗ್ರಹಗಳನ್ನು ಸೆ.11 ರಂದು ನಡೆಯುವ ಸಾಮೂಹಿಕ ಗಣೇಶ ಉತ್ಸವದ ಮೆರವಣಿಗೆಯಲ್ಲಿ ಇಡಲಾಗುವುದು. ನಂತರ ಸುತ್ತಮುತ್ತಲಿನ ಕೆರೆಗಳನ್ನು ವಿಸರ್ಜನೆ ಮಾಡಲಾಗುವುದು ಎಂದರು.

ಗಣಪತಿ ವಿಗ್ರಹದೊಳಗೆ ವಿವಿಧ ಬಗೆಯ ಬೀಜಗಳನ್ನು ಹಾಕಿದ್ದು, ವಿಸರ್ಜನೆಯಾದ ಬಳಿಕ ಮಣ್ಣಿನೊಳಗಿನ ಬೀಜ ಮೊಳಕೆಯೊಡೆದು ಗಿಡ–ಮರಗಳಾಗಿ ಬೆಳೆಯಬೇಕು ಹಾಗೂ ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣೇಶ ಮೂರ್ತಿಯ ವಿರುದ್ಧ ಜನ ಜಾಗೃತಿ ಮೂಡಿಸಬೇಕು ಎಂಬುದು ಕಾರ್ಯಾಗಾರದ ಮುಖ್ಯ ಉದ್ದೇಶವಾಗಿದೆ. ಅಲ್ಲದೆ ಸೆ.7 ರಿಂದ 11ರವರೆಗೆ ಮಾಧವ ಕೃಪಾದಲ್ಲಿ ಸಾಮರಸ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಎಂದು ಮಾಹಿತಿ ನೀಡಿದರು. ಪ್ರತಿಷ್ಠಾನದ ಡಾ.ಲಕ್ಷ್ಮಿನರಸಿಂಹನ್, ರಾಕೇಶ್, ರುದ್ರಮೂರ್ತಿ, ಚರಣ್, ದರ್ಶನ್ ರಾಜ್, ಚೇತನ್ ಮತ್ತಿತರರು ಉಪಸ್ಥಿತರಿದ್ದರು.

ಇಂದಿನಿಂದ ಮೈಸೂರು ಮಾನ್ಸೂನ್ ರೇಸುಗಳು–2024

ಅ.27ರಂದು ದಿ ಮೈಸೂರು ಡರ್ಬಿ ರೇಸ್



ಮೈಸೂರು, ಸೆ. 4– ದಿ ಮೈಸೂರು ರೇಸ್ ಕ್ಲಬ್ ಲಿಮಿಟೆಡ್ ವತಿಯಿಂದ ಮೈಸೂರು ಮಾನ್ಸೂನ್ ರೇಸುಗಳು ನಾಳೆ (ಸೆ. 5)ಯಿಂದ ಆರಂಭವಾಗಲಿದೆ. 16 ದಿನಗಳ ಕಾಲ ನಡೆಯುವ ಮಾನ್ಸೂನ್ ರೇಸುಗಳು ಅ.27ರಂದು ಅಂತ್ಯಗೊಳ್ಳಲಿದೆ.

ಸ್ಟೇಕ್‌ಮನಿ: ಕಪ್‌ಗಳು, ಟ್ರೋಫಿಗಳು ಸೇರಿದಂತೆ ಜಾಹೀರಾತು ಸ್ಟೇಕ್‌ಮನಿ ರೂ. 6,85,50,000 ಕಾಯ್ದಿರಿಸಲಾಗಿದೆ.

ಸ್ವೀಪ್‌ಸ್ಟೇಕ್, ಕ್ಲಾಸಿಕ್ ರೇಸುಗಳು: ಮೈಸೂರು ಮಾನ್ಸೂನ್ ರೇಸ್ ಆವೃತ್ತಿಯಲ್ಲಿ ಕೆಳಕಂಡ ಪ್ರಮುಖ ಕ್ಲಾಸಿಕ್/ ಸ್ವೀಪ್‌ಸ್ಟೇಕ್ಸ್ ರೇಸುಗಳು ನಡೆಯಲಿವೆ.

3 ವರ್ಷದ ಹಳೇ ಭಾರತೀಯ ಕುದುರೆಗಳಿಗಾಗಿ: ಸೆ.5ರಂದು ದಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಿಲಿಯನ್–2024; ಸೆ.13 ರಂದು ದಿ ಎಫ್.ಕೆ.ಇರಾನಿ ಮೆಮೋರಿಯಲ್ ಮಿಲಿಯನ್–2024; ಸೆ.20 ರಂದು ದಿ ಮೈಸೂರು 1000 ಗಿನ್ನೀಸ್–2024 (ಗ್ರೇಡ್–3); ಅ.4ರಂದು ದಿ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಮೈಸೂರು 2000 ಗಿನ್ನೀಸ್–2024 (ಗ್ರೇಡ್–3); ಅ.27ರಂದು ದಿ ಮೈಸೂರು ಡರ್ಬಿ –2024 (ಗ್ರೇಡ್–1).

ಮೂರು ವರ್ಷ ಮತ್ತು ಮೇಲ್ಪಟ್ಟ ಭಾರತೀಯ ಕುದುರೆಗಳಿಗಾಗಿ: ಅ. 10 ರಂದು ದಿ ಮೈಸೂರು ದಸರಾ ಸ್ಪ್ರಿಂಟ್ ಚಾಂಪಿಯನ್‌ಶಿಪ್ –2024 (ಗ್ರೇಡ್–2); ಅ.26 ರಂದು ದಿ ಮೈಸೂರು ರೇಸ್ ಕ್ಲಬ್ ಅನಿವರ್ಸರಿ ಕಪ್ –2024.

ನಾಲ್ಕು ವರ್ಷದ ಭಾರತೀಯ ಕುದುರೆಗಳಿಗಾಗಿ: ಸೆ. 6 ರಂದು ದಿ ಹೆಚ್‌ಹೆಚ್ ಶ್ರೀ ಕೃಷ್ಣರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ –2024 (ಗ್ರೇಡ್–3); ಸೆ. 27 ರಂದು ದಿ ಮಹಾರಾಜ ಕಪ್ –2024 (ಗ್ರೇಡ್–2); ಅ. 18 ರಂದು ದಿ ಗೌರ್ನರ್ಸ್ ಕಪ್ –2024.

ಕುದುರೆಗಳು: ಪ್ರಸ್ತುತ ಮೈಸೂರು ರೇಸ್ ಕ್ಲಬ್‌ನಲ್ಲಿ 425 ಕುದುರೆಗಳಿದ್ದು, ಹೊರಗಡೆಯಿಂದ ಸುಮಾರು 400 ಕುದುರೆಗಳು ರೇಸ್‌ನಲ್ಲಿ ಭಾಗವಹಿಸುವ ನಿರೀಕ್ಷೆ ಇದೆ.

ಒಟ್ಟುಗೂಡಿಸುವವರು : ಮೇಲ್ದರ್ಜೆಗೇರಿಸಿದ ಸಾಫ್ಟ್‌ವೇರ್‌ನೊಂದಿಗೆ ಹೆಚ್ಚುವರಿ ಸಂಖ್ಯೆಯ ಬೆಟ್ಟಿಂಗ್ ಟರ್ಮಿನಲ್‌ಗಳು ಕಾರ್ಯಾಚರಣೆಯಲ್ಲಿ ಇರುತ್ತವೆ.

ಪ್ರವೇಶ ದರ: ಮೈಸೂರು ಮಾನ್ಸೂನ್ ರೇಸುಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ ಪ್ರವೇಶ ದರ ರೂ.200 ನಿಗದಿಪಡಿಸಲಾಗಿದೆ. ಆಫ್‌ಕೋರ್ಸ್ ರೇಸುಗಳನ್ನು ವೀಕ್ಷಿಸಲು ರೂ.100 ದರ ನಿಗದಿಪಡಿಸಲಾಗಿದೆ.

ಲೈವ್ ರೇಸುಗಳನ್ನು ಮೈಸೂರು ರೇಸ್ ಕ್ಲಬ್ ವೆಬ್‌ಸೈಟ್–www.mysoreraceclub.com ನಲ್ಲಿ ವೀಕ್ಷಿಸಬಹುದು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ದ ರೂಲರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೀಮಾ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೀಮಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಸರಿಪೋದಾ ಶನಿವಾರಂ (ತೆ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಕರಿಯಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಿಸ್ಟರ್ ಬಚನ್ (ತೆ)	4 ಪ್ರದರ್ಶನಗಳು
ಪ್ರಭಾ	
ಅಹೋ ವಿಕ್ರಮಾರ್ಕ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಾಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಬೆ.10.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.12.55ಕ್ಕೆ, ಸಂ.4ಕ್ಕೆ, ಸರಿಪೋದಾ ಶನಿವಾರಂ (ತೆ): ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಪೆಪೆ (ಕ): ಬೆ.11ಕ್ಕೆ, ಸಂ.4.30ಕ್ಕೆ, ಸ್ತ್ರೀ 2 (ಹಿಂ): ಮ.1.30ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಅಫ್ರೇಡ್ (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕೊಟೇಷನ್ ಗ್ಯಾಂಗ್ ಪಾರ್ಟ್ 1 (ತ): ಮ.1.30ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.4ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ.
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ತ): ಬೆ.10.05ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಅಹೋ ವಿಕ್ರಮಾರ್ಕ (ತೆ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕೃಷ್ಣಂ ಪ್ರಣಯ ಸಖಿ (ಕ): ಬೆ.10.30ಕ್ಕೆ, ಪೆಪೆ (ಕ): ಮ.1.35ಕ್ಕೆ, ಲಾಫಿಂಗ್ ಬುದ್ಧ (ಕ): ಸಂ.4.05ಕ್ಕೆ, ವಾಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಸಂ.6.45ಕ್ಕೆ, ಸ್ತ್ರೀ 2 (ಹಿಂ): ರಾ.9.15ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.30ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.35ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಮ.12.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಸ್ತ್ರೀ 2 (ಹಿಂ): ಸಂ.6.45ಕ್ಕೆ, ದೇವಧೂತನ್ (ಮ): ರಾ.9.30ಕ್ಕೆ.
ಸ್ಕ್ರೀನ್ 4	ಪೆಪೆ (ಕ): ಬೆ.10.40ಕ್ಕೆ, ಮ.3.45ಕ್ಕೆ, ಅಹೋ ವಿಕ್ರಮಾರ್ಕ (ತೆ): ಮ.1.05ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.6.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

1ನೇ ದಿನ, ಗುರುವಾರ, 5–9–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಲವಾಸ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 2.00ಕ್ಕೆ
1. ಮ್ಯೆಸ್ಟಿ ಕೋಸ್ 2. ಡಬ್ಬಲ್ ವಿಷನ್ 3. ರಾಜ್

II. ವರದ ಪ್ಲೇಟ್ ಡಿ.II–1100 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್) ಮ.2.30ಕ್ಕೆ
1. ಟವರ್ ಕ್ವೀಸ್ಟ್ 2. ಪೈರ್ ಬೋಲ್ಡ್ 3. ಅಂಕುಶ್

III. ಸ್ಟಾರ್ ಆಫ್ ಮೈಸೂರ್ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65. (ಮೈಸೂರು ಬೇಸ್ಡ್ ಹಾರ್ಸ್) ಮ.3.00ಕ್ಕೆ
1. ನಿವೇದಾ ಗೋಲ್ಡ್ 2. ಸಾಕ್ರೇಟಿಸ್ 3. ರೈಸ್ ಎ ಬಕ್

IV. ಹೆಚ್.ಹೆಚ್. ಶ್ರೀ ಜಯಚಾಮರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ –1200 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಮ.3.30ಕ್ಕೆ
1. ಪಾಲಿಷ್ಡ್ ಗರ್ಲ್ 2. ಓ ಹನ್‌ಸಿನಿ 3. ಸಗೇರಾ

V. ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಮೆಮೋರಿಯಲ್ ಮಲ್ಟಿ ಮಿಲಿಯನ್–1400 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಕ್ಯಾಸ್ಟಿಲ್ 2. ಡೆಲ್ ಅವೀಜ್

VI. ಬಿ.ಕೆ.ಕೃಷ್ಣದೇವರಾಜ ಅರಸ್ ಮೆಮೋರಿಯಲ್ ಟ್ರೋಫಿ –1200 ಮೀ. ರೇಟೆಡ್ 40 ರಿಂದ 65. ಸಂಜೆ.4.30ಕ್ಕೆ
1. ಮಾಕ್ರೋನ್ 2. ಸದರನ್ ಫೋರ್ಸ್ 3. ಫ್ರೀ ಟು ಪ್ಲೇ

VII. ವರದ ಪ್ಲೇಟ್ ಡಿ.I–1100 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್) ಸಂ.5.00ಕ್ಕೆ
1. ಸಿರಾ 2. ಅಬ್‌ಸಲ್ಯೂಟ್ ಕೇಸರಿ 3. ಇನ್ ಎಫಿಬಲ್

ದಿನದ ಅತ್ಯುತ್ತಮ	ಕ್ಯಾಸ್ಟಿಲ್
ಡಬ್ಬಲ್	ಪಾಲಿಷ್ಡ್ ಗರ್ಲ್, ಮಾಕ್ರೋನ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ